ಸಂಪುಟ: 13 Volume ಸಂಚಿಕೆ: 318 Issue ಪುಟಗಳು 08 Pages ಶನಿವಾರ 07 ಫೆಬ್ರವರಿ 2026 ₹6 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಗಟ್ಟಿಯಾವುದು, ಜಳ್ಳುಯಾವುದು ಎಂಬುದನ್ನು ತಿಳಿದು ಶಾಶ್ವತವಾದ ಸತ್ಯವನ್ನು ಹುಡುಕುವುದು ನಮ್ಮ ಧರ್ಮವಾಗಬೇಕು.

–ಬಿ.ಎಂ.ಶ್ರೀ.

ಉತ್ಸವಗಳ ಯಶಸ್ವಿಗೆ ಎಲ್ಲಾ ಅಧಿಕಾರಿಗಳು ಒಗ್ಗೂಡಿ 6

ಶೇಂಗಾ ಬೆಳೆ : ಕೀಟಗಳ ನಿರ್ವಹಣೆಗೆ ಕ್ರಮ 7

ವಕೀಲರ ಚುನಾವಣೆ: ಆಲಫ್ರೆಡ್‌ರಿಂದ ನಾಮಪತ್ರ 8

## ಆತ್ಮಹತ್ಯೆ ಸಮಸ್ಯೆಗೆ ಪರಿಹಾರವಲ್ಲ



**ಭಾಲ್ಕಿ:** ಪಟ್ಟಣದ ಅರಣ್ಯ ವಲಯ ಕಚೇರಿಯಲ್ಲಿ ವಾಚರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ಅಂಕುಶ ಸುಧಾಮ ಕರ್ಲೆಕರ (57) ಶುಕ್ರವಾರ ಬೆಳಿಗ್ಗೆ ನೇಣು ಬಿಗಿದುಕೊಂಡು ಆತ್ಮಹತ್ಯ ಮಾಡಿಕೊಂಡಿರುವ ಘಟನೆ ನಡೆದಿದೆ. ಈ ಕುರಿತು ಭಾಲ್ಕಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಧಿ ವಿಜ್ಞಾನ ಇಲಾಖೆಯಿಂದ ತಪಾಸಣೆ ನಡೆಯುತ್ತಿದೆ. ಘಟನೆಗೆ ಯಾವುದೆ ಸೂಕ್ತ ಕಾರಣ ತಿಳಿದುಬಂದಿಲ್ಲ.

ಘಟನೆ ತಿಳಿದ ಕ್ಷಣವೇ ಆಗಮಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆಯವರು ಘಟನಾ ಸ್ಥಳಕ್ಕೆ ಆಗಮಿಸಿ ಮೃತ ವ್ಯಕ್ತಿಯ ಸಂಬಂಧಿಕರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಆತ್ಮಹತ್ಯ ಯಾವುದೇ ಸಮಸ್ಯೆಗಳಿಗೆ ಪರಿಹಾರವಲ್ಲ. ಮುಂದಿನ ದಿನಗಳಲ್ಲಿ ಅರಣ್ಯ ಇಲಾಖೆಯಲ್ಲಿ ಎಲ್ಲಾ ತರಹದ ಸೂಕ್ತ ವ್ಯವಸ್ಥೆ ಒದಗಿಸಲಾಗುವುದು. ಸಿಬ್ಬಂದಿಗಳಿಗೆ ಹೆಚ್ಚಿನ ಸುರಕ್ಷಿತ ವ್ಯವಸ್ಥೆ ನೀಡಿ, ಉತ್ತಮ ರೀತಿಯಲ್ಲಿ ಕಾರ್ಯ ಮುಂದುವರಿಸಲು ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಐ.ಎಸ್. ಎಫ್ ಡಿಸಿಎಫ್‌ಓ ಆಶಿಶ ರೆಡ್ಡಿ, ಸೋಶಿಯಲ್ ಫಾರೆಸ್ಟ್ ಡಿಎಫ್‌ಓ ಶ್ರೀನಿವಾಸ ಯಾರ್ಡನ ಹಾಜರಿದ್ದರು.

## ನಿರ್ಗತಿಕ ಕುಟುಂಬಕ್ಕೆ ಕಿಟ್ ವಿತರಣೆ



**ಯಲಬುರ್ಗಾ:** ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ,ಹಾಗು ಜ್ಞಾನ ವಿಕಾಸ ಸಮಿತಿಯಿಂದ ಯಲಬುರ್ಗಾ, ಮೂಧೋಳ, ಕರಮುಡಿ, ಮಲಕಸಮುದ್ರ, ಬಳಿಗೇರಿ, ಮುರಡಿ, ಹಿರೇವಂಕಲಕುಂಟ ಗ್ರಾಮದಲ್ಲಿ ಆರ್ಥಿಕವಾಗಿ ಹಿಂದುಳಿದ, ಸಂಕಷ್ಟದಲ್ಲಿರುವ ಬಡಜನರನ್ನು ಗುರುತಿಸಿ ಅವರಿಗೆ ನಿತ್ಯ ಬಳಕೆಯ ಸಾಮಗ್ರಿ ಮತ್ತು ಸೀರೆ, ಅನ್ನದ ಪಾತ್ರೆ, ನೀರು ತುಂಬುಬ ಕೊಡಪಾನಗಳು, ಹೊದಿಕೆ ಸೇರಿದಂತೆ ಇತರ ವಸ್ತುಗಳ ವಾತ್ಸಲ್ಯ ಕಿಟ್ಟಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿತು. ಜಿಲ್ಲಾ ನಿರ್ದೇಶಕ ಪ್ರಕಾಶರಾವ,ತಾಲೂಕ ಯೋಜನಾಧಿಕಾರಿ ಗಣೇಶ ನಾಯಕ, ಜ್ಞಾನವಿಕಾಸದ ಸಮನ್ವಯಾಧಿಕಾರಿ ನಿಖಿತ ,ವಲಯದ ಮೇಲ್ವಿಚಾರಕರು ಹಾಗೂ ಎಲ್ಲಾ ಸೇವಾ ಪ್ರತಿನಿಧಿಗಳು, ಒಕ್ಕೂಟದ ಸದಸ್ಯರಯ ಸೇರಿದಂತೆ ಇತರರು ಇದ್ದರು.

## ದೇಗುಲ ಆವರಣದಲ್ಲಿ ಮಾಂಸ ಪತ್ತೆ

**ಬಳ್ಳಾರಿ:** ಕರ್ನಾಟಕದ ಬಳ್ಳಾರಿಯಲ್ಲಿ ಶುಕ್ರವಾರ ಧಾರ್ಮಿಕ ಭಾವನೆಗಳಿಗೆ ನೋವುಂಟುಮಾಡುವ ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ. ನಗರದ ನಾಗಲಕೇರಿ ಪ್ರದೇಶದ ಪ್ರಸಿದ್ಧ ಬಾಲಾಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಾಂಸದ ಚೀಲ ಪತ್ತೆಯಾಗಿದೆ ಎಂದು ವರದಿಯಾಗಿದೆ.

ಪ್ಲಾಸ್ಟಿಕ್ ಕವರ್ನಲ್ಲಿ ತಂದಿದ್ದ ಮಾಂಸವನ್ನು ಆಂಜನೇಯ ದೇವಸ್ಥಾನದ ಹಿಂಭಾಗದಲ್ಲಿರುವ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗದ ಗರುಡಗಂಬದ ಬಳಿ ಎಸೆಯಲಾಗಿದ್ದು, ಇದು ಭಕ್ತರ ಆಕ್ರೋಶಕ್ಕೆ ಕಾರಣವಾಗಿದೆ.

## ಮನರೇಗಾ: ಕೇಂದ್ರ ಸರ್ಕಾರ ಕುತಂತ್ರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮನರೇಗಾ ರದ್ದುಪಡಿಸಿ ವಿಬಿ ಜಿ ರಾಮ್ ಜಿ ಕಾಯ್ದೆ ಜಾರಿಗೊಳಿಸಿದ ಕೇಂದ್ರಸರ್ಕಾರದ ಕುತಂತ್ರವನ್ನ ರಾಜ್ಯದ ರೈತರು ಒಕ್ಕೊರಲಿನಿಂದ ವಿರೋಧಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ಕೊಟ್ಟಿದ್ದಾರೆ.

ಅಂತಾ ರಾಷ್ಟ್ರೀಯ ವಾಣಿಜ್ಯ ಮೇಳ, ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಸರ್ಕಾರ ಈ ಹಿಂದೆ ಮನರೇಗಾ ಯೋಜನೆಯನ್ನು ಜಾರಿಗೊಳಿಸಿತ್ತು. ಇದರಡಿ ಮಹಿಳೆಯರು, ಅದಿವಾಸಿಗಳು, ಕಾರ್ಮಿಕರಿಗೆ ಉದ್ಯೋಗ ನೀಡುವ ಉತ್ತಮ ಯೋಜನೆಯಾಗಿದ್ದು, ಗ್ರಾಮಸಭೆಗಳಲ್ಲಿ ಕಾಮಗಾರಿಗಳು ನಿರ್ಧಾರವಾಗುತ್ತಿತ್ತು. ಆದರೆ ಈ ಅಧಿಕಾರವು ಈಗ ಕೇಂದ್ರ ಸರ್ಕಾರದ



ಕೈಯಲ್ಲಿದೆ. ಅವರ ನಿರ್ಧರಿಸಿದಂತೆ ಕಾಮಗಾರಿ, ಅನುದಾನ ನೀಡಲಾಗುತ್ತದೆ ಎಂದು ವಿಷಾದಿಸಿದ್ದಾರೆ.

## ಇಂಟರ್ ನೆಟ್‌ನಲ್ಲಿ ಕಾಲ ಕಳೀಬೇಡಿ



• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ದೇಶದಲ್ಲಿ ಡೇಟಾ ಅಗ್ಗದ ದರದಲ್ಲಿ ಸಿಗುತ್ತಿದೆ ಎಂಬ ಕಾರಣಕ್ಕೆ ವಿದ್ಯಾರ್ಥಿಗಳು ಇಂಟರ್ ನೆಟ್‌ನಲ್ಲಿ ಸಮಯ ವ್ಯರ್ಥ ಮಾಡಬೇಡಿ, ನಿಮ್ಮ ಜೀವನ ಮತ್ತು ಶೈಕ್ಷಣಿಕ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನಹರಿಸಿ ಎಂದು ಪ್ರಧಾನಿ ಮೋದಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ್ದಾರೆ. ಶಿಕ್ಷಣವು ಮಕ್ಕಳಿಗೆ ಹೊರೆ ಎನಿಸಬಾರದು,ಆಸಕ್ತಿಯಿಲ್ಲದಿದ್ದರೆ ಶಿಕ್ಷಣವು ಜೀವನವನ್ನು ಯಶಸ್ವಿಗೊಳಿಸುವುದಿಲ್ಲವಾದ್ದರಿಂದ ಎಲ್ಲರೂ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

# ಸಿದ್ದುಗೇ ಐದು ವರ್ಷ ಗದ್ದುಗೆ!

## ನಾಯಕತ್ವ ಬದಲಾವಣೆ ಚರ್ಚೆ ಮುನ್ನೆಲೆಗೆ | ಸಿಎಂ ಪುತ್ರನ ಮಾತು–ಉಪಮುಖ್ಯಮಂತ್ರಿ ಡಿಕೆಶಿ ಗರಂ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಧಿವೇಶನ ಮುಕ್ತಾಯಗೊಂಡ ಬೆನ್ನಲ್ಲೇ ನಾಯಕತ್ವ ಬದಲಾವಣೆ ಚರ್ಚೆ ಮುನ್ನೆಲೆಗೆ ಬಂದಿದೆ. ನಮ್ಮಪ್ಪನೇ ಐದು ವರ್ಷ ಮುಖ್ಯಮಂತ್ರಿ ಎಂದು ಯತೀಂದ್ರ ಹೇಳಿರುವುದು ಚರ್ಚೆಗೆ ಬಿಸಿತುಪ್ಪ ಸುರಿದಂತಾಗಿದೆ. ಕಾಂಗ್ರೆಸ್ ಶಾಸಕರು ಈ ಬಗ್ಗೆ ಹೇಳಿಕೆಗಳನ್ನು ನೀಡಲು ಶುರು ಮಾಡಿದ್ದು, ಈಗಲಾದರೂ ಹೈಕಮಾಂಡ್ ಮಧ್ಯೆ ಪ್ರವೇಶಿಸಲಿದೆಯೇ ಎನ್ನುವ ಪ್ರಶ್ನೆಗೆ ಉತ್ತರ ಅಸ್ಪಷ್ಟವಾಗಿದೆ.

**ಮತ್ತೆ ಶಿವಗಂಗಾ ಮಾತು:** ನಾಯಕತ್ವ ಬದಲಾವಣೆ ವಿಚಾರವಾಗಿ ಕಾಂಗ್ರೆಸ್ ಶಾಸಕ ಬಸವರಾಜ ಶಿವಗಂಗಾ ಪ್ರತಿಕ್ರಿಯಿಸಿ, ಡಿಕೆ ಶಿವಕುಮಾರ್ ಸಿಎಂ ಆಗಲೇಬೇಕು. ಇದನ್ನು ಬಯಸಿದ ಮೊದಲಿಗ ನಾನೇ. ನಾಯಕತ್ವ ವಿಚಾರವಾಗಿ ಸಾಕಷ್ಟು ಗೊಂದಲ ಇದೆ. ಸಿಎಂ ವಿಚಾರವಾಗಿ ಡಿಕೆ ಶಿವಕುಮಾರ್ ಅವರಿಗೆ ಹೈಕಮಾಂಡ್ ಮಾತು ಕೊಟ್ಟಿದ್ಯಾ, ಇಲ್ಲವೋ ಎಂಬುವುದು ತಿಳಿದಿಲ್ಲ ಎಂದು ಹೇಳಿದ್ದಾರೆ.

**ಹೈಕಮಾಂಡ್ ಏಕೆ ಮೌನ?:** ಇಡೀ ಪ್ರಕರಣ ರಾಜ್ಯ ರಾಜಕೀಯದಲ್ಲಿ ಅಪಹಾಸ್ಯ ಹುಟ್ಟುಹಾಕುವ ಹಂತ ತಲುಪಿದೆ. ಇತ್ತ ಸಿಎಂ ಪುತ್ರ ಒಂದು ನುಡಿದರೆ ಅದಕ್ಕೆ ಪ್ರತಿಯಾಗಿ ಡಿಸಿಎಂ ಕೂಡ ಕೌಂಟರ್ ಕೊಡುತ್ತಿದ್ದಾರೆ. ಪಕ್ಷಕ್ಕೆ, ಕಾರ್ಯಕರ್ತರಿಗೂ ಇದರಿಂದ ಇರಿಸುಮುರಿಸು ಉಂಟಾಗುವ ವಾತಾವರಣ ಇದೆ. ಆದರೂ ಹೈಕಮಾಂಡ್ ಮೌನವಾಗಿರುವುದೇ ಯಕ್ಷಪ್ರಶ್ನೆಯಾಗಿದೆ.



**ಪೂರ್ಣಾವಧಿ ಸಿಎಂ..!** ಸಿಎಂ ಸಿದ್ದರಾಮಯ್ಯ ಅವರು ಐದು ವರ್ಷ ಸಿಎಂ ಆಗಿರುವುದು ಫಿಕ್ಸ್. ಅವರೇ ಪೂರ್ಣಾವಧಿ ಸಿಎಂ ಆಗಿ ಮುಂದುವರಿಯಲಿದ್ದಾರೆ ಎಂದು ಸಿಎಂ ಪುತ್ರ ಯತೀಂದ್ರ ಹೇಳಿದ್ದು ನಾಯಕತ್ವ ಬದಲಾವಣೆ ಚರ್ಚೆಗೆ ತುಪ್ಪ ಸುರಿದಿದೆ. ಕುರ್ಚಿ ಬದಲಾವಣೆ ವಿಚಾರವಾಗಿ ಹೈಕಮಾಂಡ್ ಕಡೆಯಿಂದಲೇ ಸ್ಪಷ್ಟ ಸೂಚನೆ ಲಭಿಸಿದ್ದು, ಬದಲಾವಣೆಯೇ ಇಲ್ಲ ಎಂದಿರುವುದು ಗಮನ ಸೆಳೆದಿದೆ.

### ಕರೆದೇ ಕರೀತಾರೆ: ಖರ್ಗೆ

ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ಸ್ಪಷ್ಟಪಡಿಸಲಿ ಎಂಬ ಶಿವಗಂಗಾ ಬಸವರಾಜ್ ಹೇಳಿಕೆ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಅಗತ್ಯ ಬಿದ್ದಾಗ ಕರೆಯುತ್ತೇವೆ ಎಂದು ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸ್ಪಷ್ಟಪಡಿಸಿದ್ದಾರೆ. ಸಮಯ ಬಂದಾಗ ಕರೆದೇ ಕರೆಯುತ್ತಾರೆ, ನಿರ್ಧಾರ ತೆಗೆದುಕೊಳ್ಳುತ್ತಾರೆ. ಈ ಕುರಿತು ಇಲ್ಲಿ ಹೇಳಿ ಪ್ರಯೋಜನವಿಲ್ಲ ಎಂದಿದ್ದಾರೆ.

### ದಿಲ್ಲಿಯಲ್ಲಿ ಉತ್ತರ: ಡಿಕೆಶಿ

ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು, ಯತೀಂದ್ರ ಅವರೇ ಈಗ ನಮ್ಮ ಹೈಕಮಾಂಡ್. ಅವರು ಹೇಳಿದ ಮೇಲೆ ಮುಗಿಯಿತು ಎಂದು ತಿರುಗೇಟು ನೀಡಿದ್ದಾರೆ. ಯತೀಂದ್ರ ಅಥವಾ ಶಿವಗಂಗಾ ಹೇಳಿಕೆ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ಈ ಬಗ್ಗೆ ಏನು ಪ್ರತಿಕ್ರಿಯಿಸಬೇಕೋ ಅದನ್ನು ದೆಹಲಿಯಲ್ಲಿ ಪ್ರತಿಕ್ರಿಯಿಸುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ.

**ಶಾಸಕರಲ್ಲೂ ಗುಸುಗುಸು** ಕುರ್ಚಿ ಬದಲಾವಣೆ ಬಗ್ಗೆ ಶಾಸಕರಲ್ಲೇ ಗೊಂದಲ ಶುರುವಾಗಿದ್ದು, ಇದೀಗ ಮತ್ತಷ್ಟು ತೀವ್ರಗೊಂಡಿವೆ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಹೈಕಮಾಂಡ್ ಬಹಿರಂಗವಾಗಿ ಹೈಕಮಾಂಡ್ ಯಾವುದೇ ಸೂಚನೆ ನೀಡಿಲ. ದೆಹಲಿ ನಾಯಕರು ರಾಜ್ಯ ನಾಯಕರಿಗೆ ಯಾವುದೇ ಸಂದೇಶವನ್ನೂ ನೀಡಿಲ್ಲ. ಮುಖ್ಯಮಂತ್ರಿ ಕೂಡ ಯತೀಂದ್ರ ಹೇಳಿಕೆ ಕುರಿತು ಇನ್ನೂ ಸ್ಪಷ್ಟನೆ ನೀಡಿಲ್ಲ.

## ಮೈತ್ರಿಗೆ ತೆರೆದಿದೆ ಕುಮಾರಣ್ಣನ ಬಾಗಿಲು..!

**ಮಂಡ್ಯ:** ಜೆಡಿಎಸ್–ಬಿಜೆಪಿಯ ಶಕ್ತಿ ಬಗ್ಗೆ ಹಾದಿ ಬೀದಿಯಲ್ಲಿ ಚರ್ಚೆ ಮಾಡುವ ವಿಷಯವಲ್ಲ. ಮೈತ್ರಿ ಶಾಶ್ವತವಾಗಿ ಉಳಿದುಕೊಳ್ಳಬೇಕು ಅನ್ನೋದಿದ್ರೆ ಕುಳಿತು ಚರ್ಚೆ ಮಾಡಿ, ಕುಮಾರಣ್ಣನ ಮನೆಬಾಗಿಲು ಯಾವಾಗಲೂ ತೆರೆದಿರುತ್ತೆ ಎಂದು ಮಾಜಿ ಸಚಿವ ನಾರಾಯಣಗೌಡ ವಿರುದ್ಧ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮಂಡ್ಯದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ಬಿಜೆಪಿ ರಾಷ್ಟ್ರೀಯ ಪಕ್ಷ, ಜೆಡಿಎಸ್ ಪ್ರಾದೇಶಿಕ ಪಕ್ಷ. ರಾಷ್ಟ್ರೀಯ ನಾಯಕರು ದೊಡ್ಡ ಮಟ್ಟದಲ್ಲಿ ಚರ್ಚೆ ಮಾಡಿರುವ ವಿಚಾರ. ಎರಡೂ ಪಕ್ಷದ ಕಾರ್ಯಕರ್ತರ ಗೌರವ ಇದು. ಚಿತ್ರದುರ್ಗದಿಂದ ಚಾಮರಾಜನಗರದವರೆಗೆ ಓಆಂ ಅಭ್ಯರ್ಥಿಗಳು ಗೆದ್ದಿದ್ದಾರೆ. ಜೆಡಿಎಸ್–ಬಿಜೆಪಿಯ ಶಕ್ತಿ ಬಗ್ಗೆ ಹಾದಿ ಬೀದಿಯಲ್ಲಿ ಚರ್ಚೆ ಮಾಡುವ ವಿಷಯ ಅಲ್ಲ ಸ್ವಾಮಿ ಎಂದು ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

## ಕಾಂಗ್ರೆಸ್ ಎಂದರೆ ಕರಪ್ಷನ್

• ಮಲ್ಲಮ್ಮ ನುಡಿ ವಾರ್ತೆ ದೊಡ್ಡಬಳ್ಳಾಪುರ

ಈ ಬಾರಿ ಕೇಂದ್ರ ಬಜೆಟ್‌ನಲ್ಲಿ ಯಾವ ಬೆಲೆಯೂ ಹೆಚ್ಚಾಗಿಲ್ಲ; ತೆರಿಗೆಯೂ ಹೆಚ್ಚು ಕಡಿಮೆ ಆಗಿಲ್ಲ ಎಂದು ವಿಧಾನಪರಿಷತ್ ವಿಪಕ್ಷನಾಯಕ ಛಲವಾದಿ ನಾರಾಯಣಸ್ವಾಮಿ ಅವರು ತಿಳಿಸಿದ್ದಾರೆ.



ಮಾಧ್ಯಮಗಳ ಜೊತೆ ಮಾತನಾಡಿ, ಕಳೆದ ಬಾರಿ 12 ಲಕ್ಷಕ್ಕೆ ತೆರಿಗೆ ವಿನಾಯಿತಿ ನೀಡಿದ್ದರು. ಅದರಲ್ಲಿ ವ್ಯತ್ಯಾಸ ಮಾಡಿಲ್ಲ; ಜನರಿಗೆ ಸೌಲಭ್ಯ ಕೊಡಲು ಒತ್ತು ಕೊಟ್ಟಿದ್ದಾರೆ. ನಾವು ಬದ್ಧತೆಯನ್ನು ಪ್ರದರ್ಶಿಸಿದ್ದೇವೆ ಎಂದು ವಿಶ್ಲೇಷಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಅಂದರೆ, ಕರಪ್ಶನ್, ಅವರು ಭ್ರಷ್ಟಾಚಾರದಲ್ಲಿ ನಿಪುಣರು. ಮೋದಿಯವರ ಸರಕಾರ 12 ವರ್ಷ ಪೂರೈಸುತ್ತಿದ್ದು, ಈ 12 ವರ್ಷಗಳಲ್ಲಿ ಭ್ರಷ್ಟಾಚಾರದ ಆರೋಪಗಳಿಲ್ಲ. ಕಾಂಗ್ರೆಸ್ಸೆಂದರೆ ಕಮಿಷನ್; ಟೆಂಡರ್ ಹಾಕು ಕಮಿಷನ್ ಹೊಡಿ ಎಂಬ ನೀತಿ. ಅದಾದ ಮೇಲೆ ಕನ್ನಿಂಗ್, ಕಮ್ಯುನಲ್, ಕಾಸ್ಟಿಸಂ, ಓಲೈಕೆಗಳು ಎಂದು ಆಕ್ಷೇಪಿಸಿದ್ದಾರೆ.

## ನಕಲಿ ವೈದ್ಯರ ವೇಗಕ್ಕೆ ಬ್ರೇಕ್..?

• ಮಲ್ಲಮ್ಮ ನುಡಿ ವಾರ್ತೆ ಯಡ್ರಾಮಿ

ತಾಲೂಕಿನ ಪ್ರತಿಯೊಂದು ಹಳ್ಳಿಗಳಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದೆ.



ಪ್ರತಿಯೊಂದುಹಳ್ಳಿಗಳಲ್ಲಿ ಮಿತಿಮೀರಿದೆ. ವೈದ್ಯಕೀಯ ಗಂಧ ಗಾಳಿಯನ್ನು ಗೊತ್ತಿಲ್ಲದ ಕೆಲವು ನಕಲಿ ವೈದ್ಯ ಶಿಖಾಮಣಿಗಳಿಂದ ಏನು ಗೊತ್ತಿಲ್ಲದ ಅಮಾಯಕ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ನಕಲಿ ವೈದ್ಯರ ಕಡಿವಾಣ ಹಾಕಬೇಕು.

ತಾಲೂಕ ವೈದ್ಯಕೀಯ ಇಲಾಖೆಯ ಅಧಿಕಾರಿಗಳು ಈ ವಿಷಯದಲ್ಲಿ ಕಣ್ಣು ಮುಚ್ಚಿ ಕುಳಿತಿರುವಂತೆ ಕಾಣುತ್ತಿದೆ. ಕೂಡಲೇ ತಾಲೂಕಿನ ಪ್ರತಿಯೊಂದು ಹಳ್ಳಿಗಳಲ್ಲಿ ನಕಲಿ ವೈದ್ಯರನ್ನು ಗುರುತಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜೇವರ್ಗಿ ತಾಲೂಕ ವೈದ್ಯಾಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

### ಲೋಕಾಯುಕ್ತ ಇಲಾಖೆಗೆ ದೂರು ದಾಖಲು..!

ಒಂದು ವೇಳೆ ತಾಲೂಕ ವೈದ್ಯಾಧಿಕಾರಿಗಳು ಈ ವಿಷಯದ ಕುರಿತು ನಿರ್ಲಕ್ಷ್ಯ ವಹಿಸಿದರೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಹಾಗು ಜಿಲ್ಲಾ ವೈದ್ಯಾಧಿಕಾರಿಗಳ ಕಾರ್ಯಲಯಕ್ಕೆ, ಲೋಕಾಯುಕ್ತ ಇಲಾಖೆಗೆ ಈ ವಿಷಯದ ಕುರಿತು ದೂರನ್ನು ದಾಖಲಿಸುವದಾಗಿ ಭರತ್ ದೊರೆ ಜೈ ಕನ್ನಡಿಗರ ಸೇನೆ ತಾಲೂಕ ಅಧ್ಯಕ್ಷ ಮಲ್ಲಮ್ಮ ನುಡಿಗೆ ತಿಳಿಸಿದ್ದಾರೆ.

## ಮಾಜಿ ದೇವದಾಸಿಯರಿಗೆ ಸೌಲಭ್ಯಕ್ಕೆ ಯತ್ನ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಸಮಾಜದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿರುವ ಮಾಜಿ ದೇವದಾಸಿಯರಿಗೆ ಸರ್ಕಾರಿ ಸೌಲತ್ತು ಒದಗಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುವದಾಗಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದ್ದಾರೆ. ಕೊಪ್ಪಳ ತಾಲೂಕ ಪಂಚಾಯತ ಆವರಣದಲ್ಲಿ ಆಯೋಜಿಸಿದ್ದ ಮಾಜಿ ದೇವದಾಸಿಯರೊಂದಿಗೆ ಜರುಗಿದ ಸಂವಾದ ಉದ್ಘಾಟಿಸಿ ಮಾತನಾಡಿ, ಈಗಾಗಲೇ ಸಮೀಕ್ಷೆ ಕೈಗೊಳ್ಳಲಾಗಿದ್ದು ಸಮೀಕ್ಷೆಯಿಂದ ಯಾರು ಕೂಡಾ ಹೊರಗುಳಿಯದಂತೆ ಕ್ರಮವಹಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗುವದು ಎಂದು ಸ್ಪಷ್ಟಪಡಿಸಿದ್ದಾರೆ. ಸಮಸ್ಯೆಗಳ ಸ್ವೀಕಾರ:– ಸಂವಾದದಲ್ಲಿ ಹಾಜರಿದ್ದ ಮಾಜಿ ದೇವದಾಸಿಯರು ಸಮಾಜದಲ್ಲಿ ತಾವು ಎದುರಿಸುತ್ತಿರುವ ಸಮಸ್ಯೆಗಳಾದ ವಸತಿ ಮಂಜೂರಾತಿ, ಮಾಶಾಸನ ಹೆಚ್ಚಳ ಇತ್ಯಾದಿಗಳ ಕುರಿತು ಅಧ್ಯಕ್ಷರ ಮುಂದೆ ಸಮಸ್ಯೆ ಹೇಳಿಕೊಂಡಿದ್ದಕ್ಕೆ ಅಧ್ಯಕ್ಷೆ ಸ್ಪಂದಿಸಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪರಶುರಾಮ ಶೆಟ್ಟೆಣ್ಣನವರ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ತಹಶೀಲ್ದಾರ ಬಸವರಾಜ ತೆನ್ನಳ್ಳಿ, ನಗರಸಭೆ ಆಯುಕ್ತ ವೆಂಕಟೇಶ ನಾಗನೂರು, ಸೇರಿದಂತೆ 300ಕ್ಕೂ ಹೆಚ್ಚು ಮಾಜಿ ದೇವದಾಸಿಯರು ಹಾಜರಿದ್ದರು.

## ಚಿರತೆ ಪ್ರತ್ಯಕ್ಷ, ಜನರ ಆತಂಕ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ತಾಲೂಕಿನ ಗಡಿ ಭಾಗವಾದ ಕೇಶ್ವಾರ ವ್ಯಾಪ್ತಿಯ ಮಲ್ಲ ಅರಣ್ಯ ಪ್ರದೇಶದಲ್ಲಿ ಚಿರತೆ–ಯೊಂದು ಕಾಣಿಸಿಕೊಂಡ ಘಟನೆ ಗ್ರಾಮಸ್ಥರಲ್ಲಿ ಭಯದ ವಾತಾವರಣ ಮೂಡಿಸಿದೆ. ಚಿರತೆಯು ಕುರಿ ಮೇಲೆ ದಾಳಿ ಮಾಡಿ, ಗಂಭೀರ ಗಾಯ ಗೊಂಡಿರುವ ಕುರಿ ಸ್ಥಳದಲ್ಲಿಯೇ ಮೃತ ಪಟ್ಟಿದೆ. ಸ್ಥಳದಲ್ಲಿ ಕುರಿಗಾಯಿಗಳ ಕಿರುಚಾಟದಿಂದ ಭಯಗೊಂಡ ಚಿರತೆ ಸ್ಥಳದಿಂದ ಪರಾರಿಯಾಗಿದೆ.

ಈ ಕುರಿತು ಮಾತನಾಡಿದ ಸ್ಥಳೀಯ ಗ್ರಾಮದ ಬ್ರಹ್ಮಾನಂದರೆಡ್ಡಿ, ಈ ಮೊದಲು ಚಿರತೆ ಹಲವು ಬಾರಿ ಮಲ್ಲ ಅರಣ್ಯ ಪ್ರದೇಶದಲ್ಲಿ ಕಾಣಿಸಿ ಕೊಂಡಿದೆ. ಚಿರತೆ ಇವತ್ತು ಏಕಾಏಕಿ ದಾಳಿ ಮಾಡಿರುವದು ಭಯದ ವಾತಾವರಣ ನೆಲೆಮಾಡಿದೆ.

ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಸಂಗಮೇಶ್ ನಾಳೆ ಸ್ಥಳಕ್ಕೆ ಭೇಟಿ ನೀಡಿ ಹೆಜ್ಜೆ ಗುರುತು ಪರಿಶೀಲನೆ ಮಾಡಿದ ನಂತರ ಖಚಿತ ಪಡಿಸಿ ಮುನ್ನೆಚ್ಚರಿಕೆ ಕ್ರಮ ತೆಗೆದು ಕೊಳ್ಳುವದಾಗಿ ತಿಳಿಸಿದ್ದಾರೆ.





**ಪ್ಯಾಲಸ್ತೀನ್ ಚಿತ್ರ ಪ್ರದರ್ಶನಕ್ಕೆ ಕೇಂದ್ರ ಸರ್ಕಾರ ಅಡ್ಡಿ ಪಡಿಸುತ್ತಿದೆ. ರಾಜ್ಯ ಸರ್ಕಾರ ನೆರವಿಗೆ ಬಂದು ದಿಟ್ಟತನ ತೋರಬೇಕು: ಖ್ಯಾತ ನಟ ಪ್ರಕಾಶ್ ರಾಜ್**

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ವತಿಯಿಂದ ಭವ್ಯ ಧಾರ್ಮಿಕ ಸಭೆ



**ಮಲ್ಲಮ್ಮ ನುಡಿ ವಾರ್ತೆ ಬೀದರ**

ಹುಮನಾಬಾದ್ ತಾಲೂಕಿನ ಹಳ್ಳಿಖೇಡ್ ಬಿ ವಲಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ವತಿಯಿಂದ ಸಾಮೂಹಿಕ ಶ್ರೀ ವರ ಮಹಾಲಕ್ಷ್ಮಿ ಪೂಜಾ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಭಕ್ತಿಭಾವ, ಶ್ರದ್ಧೆ ಹಾಗೂ ಆತ್ಮೀಯತೆಯಿಂದ ಭವ್ಯವಾಗಿ ಆಯೋಜಿಸಲಾಯಿತು. ಮಹಿಳೆಯರ ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಹಳ್ಳಿಖೇಡ್ ಚಿಕ್ಕ ಸಂಸ್ಥಾನ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ನೆರವೇರಿಸಿ, ಧಾರ್ಮಿಕ ಆಚರಣೆಗಳ ಮಹತ್ವ, ನೈತಿಕ ಮೌಲ್ಯಗಳು ಹಾಗೂ ಜೀವನದಲ್ಲಿ ಆಧ್ಯಾತ್ಮಿಕ ಶಿಸ್ತಿನ ಅಗತ್ಯತೆಯ ಕುರಿತು ಆಶೀರ್ವಚನ ನೀಡಿದರು. ಧರ್ಮ, ಸಂಸ್ಕೃತಿ ಹಾಗೂ ಆತ್ಮಶುದ್ಧಿಯ ಮೂಲಕ ಸಮಾಜದಲ್ಲಿ ಸೌಹಾರ್ದತೆ, ಶಾಂತಿ ಮತ್ತು ಸತ್ಕಾರ್ಯಗಳನ್ನು ಅಳವಡಿಸಿಕೊಳ್ಳುವಂತೆ ಅವರು ಭಕ್ತರಿಗೆ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಪ್ರತಿಮಾ ಅವರು ವಹಿಸಿಕೊಂಡು, ಮಹಿಳೆಯರ ಸಂಘಟನೆ, ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಹಾಗೂ ಸಾಮಾಜಿಕ ಜವಾಬ್ದಾರಿಗಳ ಮಹತ್ವದ ಕುರಿತು ಮಾತನಾಡಿದರು. ಮಹಿಳೆಯರು ಸಮಾಜದ ಬದಲಾವಣೆಗೆ ಪ್ರಮುಖ ಶಕ್ತಿಯಾಗಬೇಕು ಎಂದು ಅವರು ಅಭಿಪ್ರಾಯಪಟ್ಟರು. ತಾಲೂಕು ಯೋಜನಾಧಿಕಾರಿಗಳು ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿ, ಹಳ್ಳಿಖೇಡ್ ಬಿ ವಲಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಅಭಿವೃದ್ಧಿ ಯೋಜನೆಗಳು, ಮಹಿಳಾ ಸಬಲೀಕರಣ ಕಾರ್ಯಕ್ರಮಗಳು ಹಾಗೂ ಜನಹಿತ ಕಾರ್ಯಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ಮಹಿಳಾ ಜ್ಞಾನವಿಕಾಸ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಶ್ರೀನಿವಾಸ ಅವರು ಕಾರ್ಯಕ್ರಮದ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿ, ಮಹಿಳೆಯರಿಗೆ ಆತ್ಮವಿಶ್ವಾಸ, ಸ್ವಾವಲಂಬನೆ, ಕೌಶಲ್ಯಾಭಿವೃದ್ಧಿ ಹಾಗೂ ಸಂಘಟಿತ ಶಕ್ತಿಯ ಅಗತ್ಯತೆಯ ಕುರಿತು ಪ್ರೇರಣಾದಾಯಕ ಮಾತುಗಳನ್ನು ಆಡಿದರು. ಸ್ವ ಉದ್ಯೋಗ ಅವಕಾಶಗಳು ಮತ್ತು ಸಮಾಜಮುಖಿ ಚಟುವಟಿಕೆಗಳ ಕುರಿತು ಅವರು ವಿವರಿಸಿದರು.

ಇದೇ ಸಂದರ್ಭದಲ್ಲಿ ರಾಜಯೋಗ ಕೇಂದ್ರದ ಸಂಚಾಲಕಿ ಶ್ರೀಮತಿ ಬಿಕೆ ಸುಮನ್ ಬೆಹನಜಿ ಅವರು ಮಾನಸಿಕ ಶಾಂತಿ, ಆತ್ಮವಿಕಾಸ, ಧ್ಯಾನ ಮತ್ತು ರಾಜಯೋಗದ ಮಹತ್ವದ ಕುರಿತು ಮನಮುಟ್ಟುವ ಉಪನ್ಯಾಸ ನೀಡಿದರು. ಆಧ್ಯಾತ್ಮಿಕ ಚಿಂತನೆಯಿಂದ ವ್ಯಕ್ತಿಯ ಜೀವನದಲ್ಲಿ ಉಂಟಾಗುವ ಸಕಾರಾತ್ಮಕ ಬದಲಾವಣೆಗಳ ಬಗ್ಗೆ ಅವರು ವಿವರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಡಾ. ಹಸನ್, ಪುರಸಭೆ ಸದಸ್ಯರಾದ ಸಾಜಿದ್ ಪಟೇಲ್, ಎಂಡಿ ಅಬ್ದುಲ್ ರಜಾಕ್, ಗ್ರಾಮ ಪಂಚಾಯತ್ ಸದಸ್ಯ ವೆಂಕಪ್ಪ, ಸಮಾಜ ಸೇವಕ ತುಕಾರಾಂ ಸೇರಿದಂತೆ ಹಳ್ಳಿಖೇಡ್ ಬಿ ವಲಯದ ಎಲ್ಲಾ ಒಕ್ಕೂಟಗಳ ಪದಾಧಿಕಾರಿಗಳು, ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು ಹಾಗೂ ಗಣ್ಯ ನಾಗರಿಕರು ಭಾರೀ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಪ್ರತಿಯೊಬ್ಬರು ಸಾಮಾಜಿಕ ಕಾರ್ಯಗಳಿಗೆ ಕೈಜೋಡಿಸಬೇಕು : ಸೋಮನಾಥ ಪಾಟೀಲ

- **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಮನುಷ್ಯ ಕೇವಲ ಸ್ವಾರ್ಥಕ್ಕಾಗಿ ಬದುಕದೆನೆ ಕೈಲಾದಷ್ಟು ಸಾಮಾಜಿಕ ಕಾರ್ಯಗಳನ್ನು ಮಾಡಬೇಕು ಮತ್ತು ಅವುಗಳಿಗೆ ಕೈಜೋಡಿಸಬೇಕೆಂದು ಬಿಜೆಪಿ ಜಿಲ್ಲಾದ್ಯಕ್ಷರಾದ ಸೋಮನಾಥ ಪಾಟೀಲ ಹೇಳಿದರು.

ನಗರದ ಶಿವಮ್ ಫೌಂಡೇಶನ್ ಕಛೇರಿಯಲ್ಲಿ ಫೌಂಡೇಶನ್ ಅದ್ಯಕ್ಷರು ಹಾಗೂ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪೀರಪ್ಪಾಔರಾದೆ ಅವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 2026 ಕ್ಯಾಲೆಂಡರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕ್ಯಾಲೆಂಡರ್‌ನಲ್ಲಿರುವ ದಿನಗಳು, ತಿಥಿಗಳು ಹಾಗೂ ಮಾಸಗಳು ಬದಲಾದಂತೆ ನಮ್ಮ ಬದುಕು ಸಹ ಹೊಸತನ ಪಡೆದುಕೊಳ್ಳಬೇಕು ಆ ನಿಟ್ಟಿನಲ್ಲಿ ನಾವೆಲ್ಲರು ಉತ್ತಮ ದಿನಚರಿ ಹೊಂದಬೇಕು ಎಂದು ಹೇಳಿದರು.



**ಶಿವಮ್ ಫೌಂಡೇಶನ್ ವತಿಯಿಂದ 2026 ಕ್ಯಾಲೆಂಡರ್ ಬಿಡುಗಡೆ**

ಕುರಿ ಮತ್ತು ಉಣ್ಣೆ ನಿಗಮ ಮಂಡಳಿ ಮಾಜಿ ಅದ್ಯಕ್ಷರಾದ ಪಂಡೀತ ಚಿದ್ರಿ ಮಾತನಾಡಿ ವಾತಾವರಣಕ್ಕೂ ಹೊಸತನವಿದೆ ಪಕ್ಷಿ–ಪ್ರಾಣಿಗಳು ನಿತ್ಯ ನವೋಲ್ಲಾಸದಿಂದ ಬದುಕು ಕಟ್ಟಿಕೊಳ್ಳುತ್ತವೆ ಇಂಥ ಸಂದರ್ಭದಲ್ಲಿ ನಮ್ಮಲ್ಲಿರುವ ಕೆಟ್ಟ ಗುಣಗಳನ್ನು, ದುಶ್ಚಟಗಳನ್ನು ದೂರ ಮಾಡಿ ಮನಸ್ಸು ಹಗುರ ಮಾಡುವ ಆರೋಗ್ಯಕರ ಅಭ್ಯಾಸಗಳನ್ನು ಅನುಸರಿಸುವುದರ ಮೂಲಕ ಹೊಸ ವರ್ಷಕ್ಕೆ ಸಂಕಲ್ಪ ಮಾಡೋಣ ಈ ದಿಶೇಯಲ್ಲಿ ಪೀರಪ್ಪಾ ಔರಾದೆ ಅವರು ಮಾಡುತ್ತಿರುವ ಸಾಮಾಜಿಕ ಕಾರ್ಯಗಳು ಅನೇಕರಿಗೆ ಮಾದರಿಯಾಗಿವೆ ಎಂದು ಹೇಳಿದರು.

ನಗರಸಭೆ ಸದಸ್ಯ ಶಶಿಧರ ಹೋಸಳ್ಳಿ ಮಾತನಾಡಿ ಪೀರಪ್ಪ ಔರಾದೆ ಅವರು ಶಿವಮ್ ಫೌಂಡೇಶನ್ ಮೂಲಕ ಗ್ರಾಮೀಣ ಭಾಗದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಹಸ್ತ ನೀಡುವ ಮೂಲಕ ಮಾನೀಯತೆ ಮೆರೆದು ನಮಗೆಲ್ಲ ಪ್ರೇರಣೆಯಾವಗಿವೆ ಎಂದರು. ಮಾಜಿ ಜಿಲ್ಲಾ ಪಂಚಾಯತ ಅದ್ಯಕ್ಷ ಬಾಬುರಾವ ಕಾರಬಾರಿ, ವಿಶ್ವ ಹಿಂದೂ ಪರಿಷದ್ ಅದ್ಯಕ್ಷ ವೀರಶೇಟ್ಟಿ ಖ್ಯಾಮಾ. ಗುರುನಾಥ ರಾಜಗೀರಾ, ಎಮ್.ಎಸ್ ಕಟಗಿ, ರತಿಕಾಂತ ಜೋಜನಾ, ಡಾ.ಶ್ರೀಕಾಂತ ಪಾಂಡ್ರೆ, ಜ್ಯೋತಿಷ ಔರಾದೆ, ರಾಜ್ ಟಗರು ಆಣದೂರ, ಗುರಪ್ಪ ಇಸ್ಲಾಂಪುರ, ಬಸಪ್ಪ ಸಂಗಮೆ, ಶಿವರಾಜ ಮಲ್ಕಾಪುರೆ ಸೆರಿದಂತೆ ಇತರರಿದ್ದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು



# ಗ್ರಾಮೀಣ ಮಕ್ಕಳ ಭವಿಷ್ಯಕ್ಕೆ ಶಿಕ್ಷಣವೇ ಬೆಳಕು ಸರ್ಕಾರದ ಗಮನ ಅಗತ್ಯ

ಗ್ರಾಮೀಣ ಭಾಗದ ಮಕ್ಕಳು ದೇಶದ ಭವಿಷ್ಯದ ಶಕ್ತಿಯಾಗಿದ್ದಾರೆ. ಆದರೆ ಇಂದು ಕೂಡ ಅನೇಕ ಹಳ್ಳಿಗಳಲ್ಲಿ ಶಿಕ್ಷಣ ಮೂಲಸೌಕರ್ಯಗಳ ಕೊರತೆ, ಶಿಕ್ಷಕರ ಅಭಾವ, ತಂತ್ರಜ್ಞಾನಕ್ಕೆ ಸೀಮಿತ ಪ್ರವೇಶ ಹಾಗೂ ಆರ್ಥಿಕ ಸಂಕಷ್ಟಗಳು ಮಕ್ಕಳ ಕಲಿಕೆಗೆ ದೊಡ್ಡ ಅಡ್ಡಿಯಾಗಿದೆ. ನಗರ ಪ್ರದೇಶದ ಮಕ್ಕಳಿಗೆ ಲಭ್ಯವಿರುವ ಅವಕಾಶಗಳು ಗ್ರಾಮೀಣ ಮಕ್ಕಳಿಗೆ ಇನ್ನೂ ಕನಸಾಗಿಯೇ ಉಳಿದಿರುವುದು ವಿಷಾದಕರ ಸಂಗತಿ.

ಸರ್ಕಾರವು ಶಿಕ್ಷಣವನ್ನು ಕೇವಲ ಅಂಕಿ–ಅಂಶಗಳ ಸಾಧನೆಯಾಗಿ ನೋಡದೇ, ಸಮಾಜ ಪರಿವರ್ತನೆಯ ಶಕ್ತಿಯನ್ನಾಗಿ ಪರಿಗಣಿಸಬೇಕು. ಪ್ರತಿಯೊಂದು ಗ್ರಾಮದಲ್ಲೂ ಸುಸಜ್ಜಿತ ಶಾಲಾ ಕಟ್ಟಡಗಳು, ಗ್ರಂಥಾಲಯಗಳು, ಡಿಜಿಟಲ್ ತರಗತಿಗಳು ಹಾಗೂ ತರಬೇತಿ ಪಡೆದ ಶಿಕ್ಷಕರು ಇದ್ದಾಗ ಮಾತ್ರ ಸಮಾನ ಶಿಕ್ಷಣ ಸಾಧ್ಯವಾಗುತ್ತದೆ. ವಿಶೇಷವಾಗಿ ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಮಕ್ಕಳಿಗೆ ಬಲವಾದ ಅಡಿಪಾಯ ಹಾಕುವುದು ಅತ್ಯಗತ್ಯ.

ಹಳ್ಳಿಗಳಲ್ಲಿ ಬಡತನದಿಂದಾಗಿ ಅನೇಕ ಮಕ್ಕಳು ಮಧ್ಯದಲ್ಲೇ ಶಾಲೆ ಬಿಟ್ಟು ಕೆಲಸಕ್ಕೆ ಇಳಿಯುತ್ತಿರುವುದು ಕಾಳಜಿಯ ವಿಷಯ. ಇದನ್ನು ತಡೆಯಲು ವಿದ್ಯಾರ್ಥಿವೇತನ, ಉಚಿತ ಪಠ್ಯಪುಸ್ತಕ, ಮಧ್ಯಾಹ್ನದ ಊಟದ ಗುಣಮಟ್ಟ ಸುಧಾರಣೆ ಹಾಗೂ ಸಾರಿಗೆ ಸೌಲಭ್ಯಗಳನ್ನು ಸರ್ಕಾರ ಮತ್ತಷ್ಟು ಬಲಪಡಿಸಬೇಕು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಉತ್ತೇಜನ ನೀಡುವುದರಿಂದ ಗ್ರಾಮೀಣ ಸಮಾಜದ ಸಂಪೂರ್ಣ ಅಭಿವೃದ್ಧಿ ಸಾಧ್ಯವಾಗುತ್ತದೆ.

ಇಂದಿನ ಯುಗದಲ್ಲಿ ತಂತ್ರಜ್ಞಾನ ಶಿಕ್ಷಣದ ಅವಿಭಾಜ್ಯ ಭಾಗವಾಗಿದೆ. ಆದ–ರೆ ಬಹುತೇಕ ಗ್ರಾಮೀಣ ಶಾಲೆಗಳಲ್ಲಿ ಇನ್ನೂ ಇಂಟರ್ನೆಟ್ ಸಂಪರ್ಕವೂ ಸಮರ್ಪಕವಾಗಿಲ್ಲ. ಡಿಜಿಟಲ್ ಇಂಡಿಯಾ ಕನಸನ್ನು ಗ್ರಾಮೀಣ ಮಕ್ಕಳಿಗೂ ತಲುಪಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಆನ್‌ಲೈನ್ ಪಾಠಗಳು, ಸ್ಮಾರ್ಟ್ ಬೋರ್ಡ್‌ಗಳು ಹಾಗೂ ಇ–ಲರ್ನಿಂಗ್ ಮೂಲಕ ಮಕ್ಕಳು ವಿಶ್ವಮಟ್ಟದ ಜ್ಞಾನ ಪಡೆಯುವಂತಾಗಬೇಕು.

ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಬಜೆಟ್ ಮೀಸಲಿಟ್ಟು, ಗ್ರಾಮೀಣ ಭಾಗದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ನೀತಿಗಳನ್ನು ರೂಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಶಿಕ್ಷಣದಲ್ಲಿ ಹೂಡಿಕೆ ಮಾಡಿದರೆ ಅದು ದೇಶದ ಅಭಿವೃದ್ಧಿಗೆ ಮಾಡಿದ ಹೂಡಿಕೆಯೇ ಆಗುತ್ತದೆ. ಗ್ರಾಮೀಣ ಮಕ್ಕಳ ಕನಸುಗಳಿಗೆ ರೆಕ್ಕೆ ನೀಡುವ ಕೆಲಸ ಸರ್ಕಾರದ ಆದ್ಯತೆಯಾಗಬೇಕು. ಸಮಾನ ಶಿಕ್ಷಣ, ಸಮಾನ ಅವಕಾಶಗಳು ಎಂಬ ತತ್ವ ಕಾರ್ಯರೂಪಕ್ಕೆ ಬಂದಾಗ ಮಾತ್ರ ಬಲಿಷ್ಠ ಭಾರತ ನಿರ್ಮಾಣ ಸಾಧ್ಯ. ಶಿಕ್ಷಣ–ಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ಸರ್ಕಾರ ಗ್ರಾಮೀಣ ಭಾಗದ ಮಕ್ಕಳ ಭವಿಷ್ಯವನ್ನು ಬೆಳಗಿಸಲಿ ಎಂಬುದೇ ಜನರ ನಿರೀಕ್ಷೆ.

# ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ.ಖಂಡ್ರೆ ಅವರ ಬೀದರ ಜಿಲ್ಲಾ ಪ್ರವಾಸ

- **ಮಲ್ಲಮ್ಮ ನುಡಿ ವಾರ್ತೆ ,ಬೀದರ:**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಫೆಬ್ರವರಿ.7 ಮತ್ತು 8 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಫೆ.7 ರಂದು ಬೆಳಿಗ್ಗೆ 11 ಗಂಟೆಗೆ ಬೀದರ್ ಜಿಲ್ಲೆಯ ಪಾಪನಾಶ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 1ಕ್ಕೆ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಮತ್ತು ನ್ಯಾಸ್ ಬೀದರ್ ವತಿಯಿಂದ ಆಡಿಟೋರಿಯಂ ಕರ್ನಾಟಕ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಂತರ ಸಂಜೆ 6.55 ಗಂಟೆಗೆ ಬೀದರ್ ರಸ್ತೆ ಮೂಲಕ ಲಿಂಗಸುಗೂರು, ರಾಯಚೂರುಗೆ ಪ್ರಯಾಣಿಸಿ ಅಲ್ಲಿಂದ ರಾತ್ರಿ 8.30ಕ್ಕೆ ರಸ್ತೆ ಮೂಲಕ ಹೊರಟು ಭಾಲ್ಕಿಗೆ ಆಗಮಿಸಿ ವಾಸ್ತವ್ಯ ಮಾಡಲಿದ್ದಾರೆ. ಫೆ.8 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಬೀದರನ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಸಂಜೆ 6 ಗಂಟೆಗೆ ಬೀದರ್ ರಸ್ತೆ ಮೂಲಕ ಭಾಲ್ಕಿಗೆ ಪ್ರಯಾಣಿಸಿ ಅಲ್ಲಿಯೇ ವಾಸ್ತವ್ಯ ಮಾಡಲಿದ್ದಾರೆಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮಾಣಿಕ ನೇಳಗಿ ಆಯ್ಕೆ

- **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ತಾಲೂಕಿನ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮಾಣಿಕ ನೇಳಗಿ ಆಯ್ಕೆಯಾದ ಪ್ರಯುಕ್ತ ಪಟ್ಟಣದ ಜ್ಞಾನಗಂಗಾ ಶಿಕ್ಷಣ ಸಂಸ್ಥೆಯಲ್ಲಿ ಗುರುವಾರ ವಿವಿಧ ಸಂಘಟನೆಯ ಮುಖ್ಯಸ್ಥರು, ಕನ್ನಡ ಪರ ಸಂಘಟನೆಯವರು, ವಿವಿಧ ಇಲಾಖೆಯ ಮುಖ್ಯಸ್ಥರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರು ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಹಾರುದ್ರಪ್ಪಾ ಆಣದೂರ, ಅಶೋಕಕುಮಾರ ಮಹೇಂದ್ರಕರ್, ರಾಜಪ್ಪಾ ಜಮಾದಾರ, ರಾಜಶೇಖರ ಉಪ್ಪಿನ್, ಭದ್ರಶೇಟ್ಟಿ, ಡಾ. ಜಯಕುಮಾರ ಸಿಂಧೆ, ಪ್ರೇಮಿಳಾ ರೆಡ್ಡಿ, ರಾಜಕುಮಾರ ಹಡಪದ, ಸುರೇಶ ಕುಂಬಾರ, ಗುಂಡಪ್ಪ ಕೋರಿ, ಶಾಂತಕುಮಾರ ಪಾಟೀಲ್, ಸಂತೋಷ ತಾಂಡುರ, ಸಂತೋಷ ಹಂದಿಕೇರಾ, ಮಹಮ್ಮದ್ ಅಸ್ಲಾಂಮಿಯಾ, ಸಂಜೀವನ ಭೋಸ್ಲೆ ಹಾಗೂ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅನೀಲಕುಮಾರ ಸಿಂಧೆ ಸೇರಿದಂತೆ ಜ್ಞಾನ ಗಂಗಾ ಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ಅಧ್ಯಕ್ಷರಾಗಿ ಸುಪ್ರಿಯಾ ಭೂರೆ ಹಾಗೂ ರಾಜಶ್ರೀ ಪಾಟೀಲ ಆಯ್ಕೆ




- **ಮಲ್ಲಮ್ಮ ನುಡಿ ವಾರ್ತೆ ,ಭಾಲ್ಕಿ :**

ತಾಲೂಕಿನ ಲಿಂಗಾಯತ ಮಹಾಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಪ್ರಭುದೇವ ಮಹಾಸ್ವಾಮೀಜಿಯವರ ಸನ್ನಿಧಾನದಲ್ಲಿ ಸಿದ್ದಾಪುರ ವಾಡಿ ಗ್ರಾಮದ ನೀಲಮ್ಮನ ಬಳಗದ ಅಧ್ಯಕ್ಷರಾಗಿ ಸುಪ್ರಿಯಾ ಲೋಕೇಶ ಭೂರೆ ಹಾಗೂ ಮುಸ್ತಾಪುರ ಗ್ರಾಮದ ನೀಲಮ್ಮನ ಬಳಗದ ಅಧ್ಯಕ್ಷರಾಗಿ ರಾಜಶ್ರೀ ಸಿದ್ದು ಪಾಟೀಲರವರನ್ನು ಆಯ್ಕೆಮಾಡಿ ಅಭಿನಂದಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪೂಜ್ಯರು ಬಸವಣ್ಣನವರ ಪ್ರತಿಯೊಂದು ಕಾರ್ಯದಲ್ಲಿ ಸಹಕಾರಿಯಾದವರು ನೀಲಾಂಬಿಕೆತಾಯಿಯವರು. ಲಕ್ಷದ ತೊಂಬತ್ತಾರು ಸಾವಿರ ಜಂಗಮರ ಲಕ್ಷವ ಮಾಡ್ಯಾಳ ನೀಲಮ್ಮ ಎಂದು ಜನಪದ ನುಡಿಯಲ್ಲಿ ಹಾಡುತ್ತಾರೆ. ಸಂಸಾರದಲ್ಲಿಯೇ ಇದ್ದುಕೊಂಡು ಸಾಧನೆಯ ಉತ್ತುಂಗ ಶಿಖರಕ್ಕೆ ಏರಿದವರು ನೀಲಾಂಬಿಕೆತಾಯಿಯವರು. ನೀಲಮ್ಮನ ಆದರ್ಶ ಅಳವಡಿಸಿಕೊಳ್ಳಬೇಕೆಂಬ ಸದುದೇಶದಿಂದ ಹಳ್ಳಿ ಹಳ್ಳಿಗಳಲ್ಲಿ ನೀಲಮ್ಮನ ಬಳಗ ಹುಟ್ಟು ಹಾಕಲಾಗುತ್ತಿದೆ. ಆಯ್ಕೆಯಾದ ಅಧ್ಯಕ್ಷರು ಹಾಗೂ ಸದಸ್ಯರು ಬಸವ ತತ್ವವನ್ನು ಅಳವಡಿಸಿಕೊಂಡು ವಾರದ ಪ್ರಾರ್ಥನೆ, ಶರಣ ಸಂಗಮ ಕಾರ್ಯಕ್ರಮಗಳು ಮಾಡುತ್ತಾ ಸಮಾಜದಲ್ಲಿ ನೀಲಮ್ಮನ ಆದರ್ಶ ಬಿತ್ತುವ ಕಾರ್ಯಗಳು ಮಾಡಬೇಕು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಆಯ್ಕೆಯಾದ ಸರ್ವ ಸದಸ್ಯರನ್ನು ಅಭಿನಂದಿಸಲಾಯಿತು. ಲೀಲಾವತಿ ಜಗಶೆಟ್ಟೆ, ವಿಜಯಲಕ್ಷ್ಮಿ ರಾಜೋಳೆ, ಗೋದಾವರಿತಾಯಿ, ರೂಪಾ ಬಿರಾದಾರ, ವಿಮಲಬಾಯಿ ಪೊ. ಪಾಟೀಲ, ಮೀನಾಕ್ಷಿ ಕಣಜೆ, ಸಂಗೀತಾ ಕಣಜೆ, ಮಂದಾಕಿನಿ ಕಾದೆಪೊರೆ, ಗೋದಾವರಿ ರಾಜೋಳೆ ಮುಂತಾದವರು ಭಾಗವಹಿಸಿದರು.

# ಫೆಬ್ರವರಿ 21ರಂದು ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನ

- **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**



ತಾಲೂಕಿನ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥವಾಗಿ ಸ್ಮರಣ ಸಂಚಿಕೆ ಹೊರತರಲಾಗುತ್ತಿದೆ. ಹೀಗಾಗಿ ತಾಲೂಕಿಗೆ ಸಂಬಂಧಿಸಿದ ಕಲೆ, ಸಾಹಿತ್ಯ, ಸಂಸ್ಕೃತಿ, ಐತಿಹಾಸಿಕ ಸ್ಮಾರಕಗಳ ಬಗ್ಗೆ ಹಾಗೂ ಐತಿಹಾಸಿಕ ಹಿನ್ನಲೆಯುಳ ಲೇಖನಗಳನ್ನು ಕಳುಹಿಸಲು ಕೋರಲಾಗಿದೆ. ತಮ್ಮ ಲೇಖನವು ಫೆಬ್ರವರಿ 11ರ ಒಳಗಾಗಿ ನುಡಿ05 ತಂತ್ರಾಂಶದಲ್ಲಿ ಟೈಪ್ ಮಾಡಿ ಈ ಕೆಳಕಂಡ ವಿಳಾಸಕ್ಕೆ kasapachitguppa@gmail.com ಕಳುಹಿಸಲು ವಿನಂತಿ ಹೆಚ್ಚಿನ ಮಾಹಿತಿಗಾಗಿ 7019768651 ಅನೀಲಕುಮಾರ ಸಿಂಧೆ ಶಾಂತಕುಮಾರ ಪಾಟೀಲ್ 8023581462 ಈ ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.

# ಫೆಬ್ರವರಿ 21ರಂದು ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನ

- **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ತಾಲೂಕಿನ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥವಾಗಿ ಸ್ಮರಣ ಸಂಚಿಕೆ ಹೊರತರಲಾಗುತ್ತಿದೆ. ಹೀಗಾಗಿ ತಾಲೂಕಿಗೆ ಸಂಬಂಧಿಸಿದ ಕಲೆ, ಸಾಹಿತ್ಯ, ಸಂಸ್ಕೃತಿ, ಐತಿಹಾಸಿಕ ಸ್ಮಾರಕಗಳ ಬಗ್ಗೆ ಹಾಗೂ ಐತಿಹಾಸಿಕ ಹಿನ್ನಲೆಯುಳ ಲೇಖನಗಳನ್ನು ಕಳುಹಿಸಲು ಕೋರಲಾಗಿದೆ. ತಮ್ಮ ಲೇಖನವು ಫೆಬ್ರವರಿ 11ರ ಒಳಗಾಗಿ ನುಡಿ05 ತಂತ್ರಾಂಶದಲ್ಲಿ ಟೈಪ್ ಮಾಡಿ ಈ ಕೆಳಕಂಡ ವಿಳಾಸಕ್ಕೆ kasapachitguppa@gmail.com ಕಳುಹಿಸಲು ವಿನಂತಿ ಹೆಚ್ಚಿನ ಮಾಹಿತಿಗಾಗಿ 7019768651 ಅನೀಲಕುಮಾರ ಸಿಂಧೆ ಶಾಂತಕುಮಾರ ಪಾಟೀಲ್ 8023581462 ಈ ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.

# ಧರ್ಮಸ್ಥಳದ 'ವಾತ್ಸಲ್ಯ ಕಿಟ್' ವಿತರಣೆ



**ವಾತ್ಸಲ್ಯ ಕಿಟ್‌ನ ವಿಶೇಷತೆ:**

**ಅಸಹಾಯಕ ಸ್ಥಿತಿಯಲ್ಲಿರುವ ಕುಟುಂಬಗಳಿಗೆ ನೆರವಾಗಲು ಈ ಕಿಟ್ ವಿತರಿಸಲಾಗುತ್ತಿದೆ. ಇದರಲ್ಲಿ ದಿನಬಳಕೆಯ ವಸ್ತುಗಳು, ಹಾಸಿಗೆ, ಹೊದಿಕೆ ಹಾಗೂ ಪೌಷ್ಟಿಕ ಆಹಾರದ ಪದಾರ್ಥಗಳು ಒಳಗೊಂಡಿದ್ದೆ.**

- **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಾರ್ಗದರ್ಶಕರು ಹಾಗೂ ಜ್ಞಾನವಿಕಾಸ ಕಾರ್ಯಕ್ರಮದ ಅಧ್ಯಕ್ಷರಾದ ಮಾತೃಶ್ರೀ ಡಾ. ಹೇಮಾವತಿ ವಿ. ಹೆಗ್ಗಡೆ ಅವರ ಕನಸಿನ ಯೋಜನೆಯಾದ 'ವಾತ್ಸಲ್ಯ' ಕಾರ್ಯಕ್ರಮದಡಿ ತಾಲೂಕಿನ ಹೊಳಸಮುದ್ರ ಗ್ರಾಮದಲ್ಲಿ ಅರ್ಹ ಫಲಾನುಭವಿಗಳಿಗೆ ವಾತ್ಸಲ್ಯ ಕಿಟ್ ವಿತರಿಸಲಾಯಿತು. ಯೋಜನಾಧಿಕಾರಿ ರಾಘವೇಂದ್ರ ಮಾತನಾಡಿ, ಹೊಳಸಮುದ್ರ ಕಾರ್ಯಕ್ಷೇತ್ರದಲ್ಲಿ ನಡೆದ ಈ ಸರಳ ಸಮಾರಂಭದಲ್ಲಿ, ಪ್ರತಿ ತಿಂಗಳು ಮಾಶಾಸನ ಪಡೆಯುತ್ತಿರುವ ಶ್ರೀಮತಿ ಪಾರಮ್ಮ ಅಜ್ಜಿ ಸೇರಿದಂತೆ ಇನ್ನಿತರ ಫಲನುಭವಿಗಳಿಗೆ ಜೀವನೋಪಯೋಗಿ ವಸ್ತುಗಳನ್ನೊಳಗೊಂಡ 'ವಾತ್ಸಲ್ಯ ಕಿಟ್' ಅನ್ನು ಹಸ್ತಾಂತರಿಸಲಾಯಿತು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಯೋಗಿತಾ ಆಳಂದೆ ಅವರು ಮಾತನಾಡಿ, ಬಡವರು ಮತ್ತು ಅಸಹಾಯಕರ ಪರವಾಗಿ ಧರ್ಮಸ್ಥಳ ಯೋಜನೆಯು ಹಮ್ಮಿಕೊಳ್ಳುತ್ತಿರುವ ಇಂತಹ ಸೇವಾ ಕಾರ್ಯಗಳು ಶ್ಲಾಘನೀಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಜ್ಞಾನವಿಕಾಸ ಸಮನ್ವಯಾಧಿಕಾರಿ ಸಂಗೀತಾ, ವಲಯ ಮೇಲ್ವಿಚಾರಕರಾದ ಶರಣು,ಸಾಹಿತಿ ಸಂಗಮೇಶ್ ಮುರ್ಕಿ, ಸ್ಥಳೀಯ ಸೇವಾ ಪ್ರತಿನಿಧಿಗಳಾದ ಕವಿತಾ ಹಾಗೂ ಸುನಿತಾ ಸೇರಿದಂತೆ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

# ಕ್ಯಾನ್ಸರ ಕುರಿತು ಅರಿವು ಮೂಡಿಸುವ ಬೃಹತ್ ಜಾಥಕ್ಕೆ ಡಾ.ಕಿರಣ ಪಾಟೀಲ್ ಚಾಲನೆ

ಮಲ್ಲಮ್ಮ ನುಡಿ ವಾರ್ತೆ ಬೀದರ:




ಪ್ರತಿ ವರ್ಷ ಭಾರತದಾದ್ಯಂತ 14–15 ಲಕ್ಷ ಕ್ಯಾನ್ಸನ ಹೊಸ ಪ್ರಕರಣಗಳು ವರದಿಯಾಗುತ್ತಿದ್ದು 8–9 ಲಕ್ಷ ಸಾವುಗಳು ಸಂಭವಿಸುತ್ತಿವೆ. ಆದ್ದರಿಂದ ಯಾವುದೆ ತರಹದ ಕ್ಯಾನ್ಸರ್ ಲಕ್ಷಣಗಳು ಕಂಡುಬಂದಲ್ಲಿ ಜನರು ತಮ್ಮ ಸಮೀಪದ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷಿಸಿಕೊಳ್ಳಬೇಕೆಂದು ಜಿಲ್ಲಾ ಅಸಾಂಕ್ರಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ.ಕಿರಣ್ ಪಾಟೀಲ್ ತಿಳಿಸಿದರು.

ಅವರು ಶುಕ್ರವಾರ ವಿಶ್ವ ಕ್ಯಾನ್ಸರ್ ದಿನಾಚರಣೆ 2026ರ ಪ್ರಯುಕ್ತ ಜಿಲ್ಲಾ ಎನ್.ಸಿ.ಡಿ. ಕೋಶ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೀದರ ವತಿಯಿಂದ ಜನರಲ್ಲಿ ಕ್ಯಾನ್ಸರ ಕುರಿತು ಅರಿವು ಮೂಡಿಸುವ ಬೃಹತ್ ಜಾಥವನ್ನು ಉದ್ಘಾಟಿಸಿ ಹಸಿರು ಧ್ವಜ ತೋರಿಸುವ ಮೂಲಕ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವರ್ಷವು ಕ್ಯಾನ್ಸರ್ ದಿನಾಚರಣೆಯನ್ನು ಜನರಲ್ಲಿ ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದ್ದು, ಈ ವರ್ಷದ ಘೋಷವಾಕ್ಯ "ವಿಶಿಷ್ಟತೆಯಿಂದ ಏಕತೆ" ಆಗಿದೆ. ಜನರಲ್ಲಿ ಕ್ಯಾನ್ಸರ್ ಕುರಿತ ರೋಗ ಕಾರಣಗಳು, ಲಕ್ಷಣಗಳು, ತಪಾಸಣೆ ಹಾಗೂ ಆರೈಕೆ ಕುರಿತ ಅರಿವು ಬಹುಮುಖ್ಯವಾಗಿದೆ ಎಂದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಶಂಕ್ರೆಪ್ಪಾ ಬೊಮ್ಮ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಗಳ ಪ್ರಮಾಣವು ಜಗತ್ತಿನಾದ್ಯಾಂತ ಅತಿ ತೀವ್ರವಾಗಿ ಹೆಚ್ಚುತ್ತಿದೆ, ಆದ್ದರಿಂದ ಜನರಲ್ಲಿ ಭಯದ ಬದಲು ರೋಗದ ಅರಿವು ತುಂಬಾ ಮುಖ್ಯವಾಗಿದ್ದು, ಇದಕ್ಕೆ ಪ್ರಮುಖವಾಗಿ ತಂಬಾಕು ಪದಾರ್ಥಗಳ ಸೇವನೆ, ಅನಾರೋಗ್ಯಕರ ಜೀವನ ಶೈಲಿ, ಅಧಿಕ ತೂಕ ಮತ್ತು ಮದ್ಯಪಾನ ಸೇವನೆ ಆದಿ ಮುಖ್ಯ ಕಾರಣಗಳಾಗಿದ್ದು. ಪುರುಷರಲ್ಲಿ ಪ್ರಮುಖವಾಗಿ ಬಾಯಿ, ಗಂಟಲು, ಶ್ವಾಸಕೋಶ, ಜಠರ ಮತ್ತು ಅನ್ನನಾಳದ ಕ್ಯಾನ್ಸರಗಳು ಹಾಗೂ ಮಹಿಳೆಯರಲ್ಲಿ ಅಧಿಕವಾಗಿ ಸ್ಥನ ಮತ್ತು ಗರ್ಭಕಂಠವು ಕ್ಯಾನ್ಸರನ ಪ್ರಮುಖ ತಾಣಗಳಾಗಿವೆ. ಜನರು ಆರೋಗ್ಯಕರ ಜೀವನ ಶೈಲಿಯನ್ನು ಅನುಸರಿಸಬೇಕು. ಜೊತೆಗೆ 30 ವರ್ಷ ಮೇಲ್ಪಟ್ಟವರು ಪ್ರತಿ 5 ವರ್ಷಕ್ಕೊಮ್ಮೆ ಪುರುಷರು ಬಾಯಿಕ್ಯಾನ್ಸರ್ ಹಾಗೂ ಮಹಿಳೆಯು ಸ್ತನ ಮತ್ತು ಗರ್ಭ ಕಂಠದ ಕ್ಯಾನ್ಸಗಳ ಪೂರ್ವಭಾವಿ ತಪಾಸಣೆಯನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡಿಸಿಕೊಳ್ಳಬೇಕು, ಕ್ಯಾನ್ಸರ್ ರೋಗವನ್ನು ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಿದಲ್ಲಿ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡಬಹುದೆಂದು ತಿಳಿಸಿದರು.

ನಗರದ ವಿವಿಧ ಮಾರ್ಗವಾಗಿ ಸಂಚರಿಸಿದ ಜಾಥಾ:ಈ ಜಾಗೃತಿ ಅಭಿಯಾನ ಇಂಡಿಯನ್ ಕ್ಯಾನ್ಸರ್ ಸೊಸೈಟಿ (ಕರ್ನಾಟಕ) ಪ್ರಾದೇಶಿಕ ಕಚೇರಿ ಕಲಬುರಗಿ ಟೆಟ್ರೋಕ್ಸನ್ ಸಂಸ್ಥೆಯ ಸಹಯೋಗದೊಂದಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಬೀದರನಿಂದ ಪ್ರಾರಂಭವಾಗಿ ಜನವಾಡ ರಸ್ತೆ ಮಾರ್ಗವಾಗಿ ಅಂಬೇಟ್ಕರ್ ವೃತ್ತದ ಮೂಲಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯಲ್ಲಿ ಮುಕ್ತಾಯಗೊಳಿಸಲಾಯಿತು. ಜಾಥಾದುದ್ದಕ್ಕೂ ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಫಲಕಗಳು, ಘೋಷಣೆಗಳು ಹಾಗೂ ಧ್ವನಿವರ್ಧಕಗಳ ಮೂಲಕ ಜನರಿಗೆ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ದಿಲಿಪ್ ಡೊಂಗ್ರೆ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ಶಿವಶಂಕರ,

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ.ರಾಜಶೇಖರ ಪಾಟಿಲ್, ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ.ಅನಿಲ ಚಿಂತಾಮಣಿ, ಜಿಲ್ಲಾ ಎನ್.ಸಿ.ಡಿ.ಕಾರ್ಯಕ್ರಮ ಸಂಯೋಜಕ ಡಾ.ವೀರೇಶ ಬಿರಾದರ, ಪ್ರಾದೇಶಿಕ ಕಾರ್ಯವ್ಯವಸ್ಥಾಪಕರು ಗುರುರಾಜ ಕುಕರ್ಣಿ, ಎಸ್.ಬಿ ಪಾಟೀಲ್ ದಂತ ವೈದ್ಯಕೀಯ ಸಂಸ್ಥೆಯ ಪ್ರಾಧ್ಯಾಪಕ ಡಾ. ಸಿದ್ದನಗೌಡ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು,

ಸಿದ್ದಾರಾಮೇಶ್ವರ ಆಯುರ್ವೇದಿಕ್ ವೈದ್ಯಾಕೀಯ ಕಾಲೇಜಿನ ಪ್ರಾಧ್ಯಾಪಕರು ಡಾ.ಮಹೇಶ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು, ಸರಕಾರಿ ನರ್ಸಿಂಗ್ ಕಾಲೇಜ್ ಬ್ರಿಮ್ಸ್ ಬೀದರನ ಪ್ರಾಧ್ಯಾಪಕರು ಗುರುನಾಥ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ವಸಂತ ನರ್ಸಿಂಗ್ ಕಾಲೇಜ್ ನೌಬಾದನ ಪ್ರಾಧ್ಯಾಪಕರು ಬಾಲಾಜಿ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು, ಸಿಬ್ಬಂದಿಗಳು ಸೇರಿದಂತೆ ಜಿಲ್ಲಾ ಎಫ್.ಎಲ್.ಸಿ. ಪ್ರವೀಣ, ಜಿಲ್ಲಾ ಸರ್ವೇಕ್ಷಣಾ ಘಟಕದ ಸಿಬ್ಬಂದಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಯ ಸಿಬ್ಬಂದಿ ವರ್ಗದವರು ಜಾಥಾದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಸಂಗಮೇಶ ಕಾಂಬ್ಳೆ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಸಂಚಾಲಿಸಿದರು.

# ಶಕ್ತಿಶಾಲಿ, ಧೈರ್ಯಶಾಲಿ, ಸಮೃದ್ಧಿ ದೇಶ ಭಾರತ – ಗುರುಬಸವ ಪಟ್ಟದ್ದೇವರು.




• **ಮಲ್ಲಮ್ಮ ನುಡಿ ವಾರ್ತೆ ,ಭಾಲ್ಕಿ:**

ಶಕ್ತಿಶಾಲಿ, ಧೈರ್ಯಶಾಲಿ, ಸಮೃದ್ಧಿ ದೇಶ ನಮ್ಮ ಭಾರತವಾಗಿದೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಚನ್ನಬಸವಾಶ್ರಮದಲ್ಲಿ ನಡೆದ ವಿರಾಟ್ ಹಿಂದೂ ಸಮ್ಮೇಳನದ ಸಾನಿಧ್ಯವಹಿಸಿ ಅವರು ಮಾತನಾಡಿದರು. ಭಾರತ ಧ್ವಜ ಹಾರಿಸುವುದಕ್ಕಾಗಿ ಪ್ರಾಣ ತ್ಯಾಗ ಮಾಡಿದ ದೇಶಭಕ್ತರನ್ನು ನೆನೆಯುವ ಕಾಲ ನಮ್ಮದು. ಪ್ರಪಂಚದ ಎಲ್ಲಾ ರಾಷ್ಟ್ರಗಳು ಶರೀರದ ಒಂದು ಭಾಗಗಳಾದರೆ, ನಮ್ಮ ಭಾರತ ಎಲ್ಲಾ ರಾಷ್ಟ್ರಗಳ ಹೃದಯವಾಗಿದೆ. ರಾಷ್ಟ್ರಪ್ರೇಮ, ರಾಷ್ಟ್ರ ಭಕ್ತಿ ಮೊದಲು ನಮ್ಮದಾಗಲಿ ನಂತರ ನಮ್ಮ ಧರ್ಮವನ್ನು ಪಾಲೀಸೋಣ ಎಂದರು. ಪ್ರತಿಭೆ ಇರುವವರಿಗೆ ಅಧಿಕಾರ ಬರಲಿ ಎನ್ನುವ ತತ್ವ ನೀಡಿದವರು ಬಸವಣ್ಣನವರು. ಈ ನಿಟ್ಟಿನಲ್ಲಿ ಪ್ರತಿಭಾವಂತ ನಮ್ಮ ಪ್ರಧಾನಿ ನರೇಂದ್ರ ಮೋದಿಜಿಯವರು ಬಸವಣ್ಣನವರನ್ನು ವಿಶ್ವಕ್ಕೇ ಪರಿಚಯಿಸಿದ್ದಾರೆ ಎಂದು ಹೇಳಿದರು.

> **“ಎಲ್ಲಾ ಸಮಾಜದ ಜನರನ್ನು ಒಟ್ಟಿಗೆ ಸೇರಿಸಿಕೊಂಡು ಮುನ್ನಡೆಸಿದಾಗ ಮಾತ್ರ ಭವ್ಯ ಭಾರತ ನಿರ್ಮಾಣ ಸಾಧ್ಯ**
>
> ಮುಕುಂದಜೀ, ಆ
>
> ರ್.ಎಸ್.ಎಸ್ ಮುಖಂಡ ಬೆಂಗಳೂರು.

ವಕ್ತಾರರಾಗಿ ಆಗಮಿಸಿದ ಬೆಂಗಳೂರಿನ ಆರ್.ಎಸ್.ಎಸ್ ಮುಖಂಡ ಮುಕುಂದಜೀಯವರು ದೇಶ ಮತ್ತು ಧರ್ಮಕ್ಕಾಗಿ ಹೋರಾಡಲು ಎಲ್ಲರೂ ಒಗ್ಗಟ್ಟಾಗಿ ಮುಂದೆ ಬರಬೇಕು ಎಂದು ಹೇಳಿದರು. ಬೌಧ ಮಹಾಸಭೆಯ ಭಂತೆ ಕಶಪ್ ಎಲ್ಲರ ಒಳಿತಿಗಾಗಿ ದುಡಿಯುವುದೇ ಮನುಷ್ಯ ಧರ್ಮ ಎಂದು ಹೇಳಿದರು.

ಮೆಹಕರ ಕಟ್ಟಿಮನಿ ಹಿರೇಮಠ ಸಂಸ್ಥಾನದ ಶ್ರೀ ರಾಜೇಶ್ವರ ಶಿವಾಚಾರ್ಯರು, ಹಲಬರ್ಗಾದ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಚಳಕಾಪುರ ಶ್ರೀ ಸಿದ್ಧಾರೂಢ ಮಠದ ಶ್ರೀ ಶಂಕರಾನಂದ ಮಹಾಸ್ವಾಮೀಜಿ, ಗೋವಿಂದ ಮಹಾರಾಜ, ಧರ್ಮೇರ್ಂದರ ಗಿರಿ ಮಹಾರಾಜರು ಸಾನಿಧ್ಯವಹಿಸಿ ಮಾತನಾಡಿದರು. ಸಮಾವೇಶ ಸಮಿತಿಯ ಅಧ್ಯಕ್ಷ ರಾಚಪ್ಪ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಪ್ರಕಾಶ ಖಂಡ್ರೆ, ಶಿವಲಿಂಗ ಕುಂಬಾರ, ಪ್ರಕಾಶ ಮಾಶೆಟ್ಟೆ, ವಿಲಾಸ ಬಕ್ಕಾ, ಸೋಮನಾಥಪ್ಪ ಅಸ್ಟೂರೆ, ಡಿ.ಕೆ.ಸಿದ್ರಾಮ, ಪ್ರಸನ್ನ ಪ್ರಕಾಶ ಖಂಡ್ರೆ, ಚನ್ನಬಸವಣ್ಣ ಬಳತೆ, ಜಯಕಿಶನ ಬಿಯಾನಿ, ಶಿವರಾಜ ಮಲ್ಲೇಶಿ, ಈಶ್ವರ ರುಮ್ಮಾ, ಚಂದ್ರಕಾಂತ ತಳವಾಡೆ, ಉತ್ತಮ ಪುರಿ,

ಡಾ|ಉದ್ಧವ ಕನಸೆ, ವಿಶ್ವನಾಥ ಬಳಕಟ್ಟೆ, ಎಮ್.ಪಿ.ರಾಠೋಡ, ನಾಗಭೂಷಣ ಮಾಮಡಿ, ಜಯರಾಜ ದಾಬಶೆಟ್ಟಿ, ದೀಪಕ ಥಮಕೆ, ವಿಷ್ಣುಕೋಟೆ, ಸಂತೋಷ ಬಿಜಿಪಾಟೀಲ, ಮಹೇಶ ಶೀಲವಂತ ಉಪಸ್ಥಿತರಿದ್ದರು. ಪ್ರಕಾಶ ಮಾಶೆಟ್ಟೆ ಸ್ವಾಗತಿಸಿದರು. ದೀಪಕ ಥಮಕೆ ನಿರೂಪಿಸಿದರು. ಜಯರಾಜ ದಾಬಶೆಟ್ಟಿ ವಂದಿಸಿದರು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರು ರಾಯಚೂರು ಜಿಲ್ಲೆಯ ಲಿಂಗಸೂರುದಿಂದ ರಸ್ತೆ ಮೂಲಕ ಫೆಬ್ರವರಿ 8 ರಂದು ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಸೇಡಂಗೆ ಆಗಮಿಸುವರು.

ನಂತರ ಅವರು ಸೇಡಂ ಶ್ರೀ ಕೊತ್ತಲ ಬಸವೇಶ್ವರ ದೇವಾಲಯದ ಆವರಣದ ನಾಗೇಂದ್ರಪ್ಪ ಬಿ. ಪಾಟೀಲ ಕಲ್ಯಾಣ ಮಂಟಪದಲ್ಲಿ ಶ್ರೀ ಕೊತ್ತಲ ಬಸವೇಶ್ವರ ದೇವಾಲಯ ಪಂಚ ಮಂಡಳಿ ಸೇಡಂ ಹಾಗೂ ಪೂಜ್ಯ ಮಡಿವಾಳಯ್ಯಸ್ವಾಮಿ ಸ್ಮಾರಕ ಚಿರಾಯು ಆಸ್ಪತ್ರೆ, ಸೇಡಂ ಇವುಗಳ ಸಹಯೋಗದೊಂದಿಗೆ ಏರ್ಪಡಿಸಲಾದ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಕಲಬುರಗಿ ಶಾಖೆ ವತಿಯಿಂದ ಹಮ್ಮಿಕೊಳ್ಳಲಾದ ಉಚಿತ ಹೃದಯ ತಪಾಸಣಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

ಅಂದು ಬೆಳಿಗ್ಗೆ 11.30 ಗಂಟೆಗೆ ಸೇಡಂ ಲೋಹಾರ ಗಲ್ಲಿಯಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಸೇಡಂ ಪಟ್ಟಣದ ಲೋಹಾರದ ಪ್ರದೇಶ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಬುರಗಿಗೆ ಆಗಮಸಿ ವಾಸ್ತವ್ಯ ಮಾಡುವರು. ಫೆಬ್ರವರಿ 9 ರಂದು ಸೋಮವಾರ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು.

# ಸುವ್ಯವಸ್ಥಿತವಾಗಿ ಗ್ರಾಮದೇವಿ ಜಾತ್ರೆ ನಡೆಸಲು ಕರೆ



• **ಮಲ್ಲಮ್ಮ ನುಡಿ ವಾರ್ತೆ ,ಕಲಘಟಗಿ:**

ಪ್ರತಿ ಮೂರುವರ್ಷಕ್ಕೊಮ್ಮೆ ಜರಗುವ ಜಾತ್ರೆಗಿಂತ ಇ ಸಲದ ಜಾತ್ರೆಯನ್ನು ಹೆಚ್ಚು ಸರುಕ್ಷಿತ ಸುವ್ಯಸ್ಥತವಾಗಿ ನಡೆಸಲು ಸಾರ್ವಜನಿಕರು ಸಹಕರಿಸಬೇಕು ಎಂದು ಜಾತ್ರಾ ಉತ್ಸವ ಕಮಿಟಿ ಅಧ್ಯಕ್ಷ ಸುಧೀರ ಬೋಳಾರ ಮಾತನಾಡಿದರು.

ಅವರು ಪಟ್ಟಣದ ಗ್ರಾಮದೇವಿ ದೇವಸ್ಥಾನದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಇಗಾಗಲೇ ಸಚಿವರು ಗ್ರಾಮದೇವಿ ಮಂಟಪದ ವ್ಯವಸ್ಥೆ ಹಾಗೂ ಮೆರವಣಿಗೆಗೆ ಸಾಗುವ ರಸ್ತೆಯ ದುರಸ್ತಿ ಖರ್ಚನ್ನು ಸಂಪೂರ್ಣವಾಗಿ ಅನುದಾನದ ಮೂಲಕ ಭರಿಸಲು ಸಿದ್ದರಿದ್ದು ಬಾಕಿ ಉಳಿದ ಖರ್ಚನ್ನು ಭಕ್ತಾದಿಗಳಿಂದ ದೇಣಿಗೆಗಳ ಮೂಲಕ ಭರಿಸಲಾಗುವುದು ಪಟ್ಟಣದ ಪ್ರಮುಖ ಬೀದಿಗಳ ವಿದ್ಯುತ ದೀಪಗಳ ಅಲಂಕಾರ ಕೆಲಸ ಭರದಿಂದ ಸಾಗಿದೆ ಜಾತ್ರೆಯಲ್ಲಿ ಉಪ ಕಮಿಟಿಗಳನ್ನು ರಚಿಸಿ ಕಾರ್ಯಕ್ರಮಗಳನ್ನು ಸುಲಲಿತಗೊಳಿಸಲಾಗಿದೆ ಟ್ರಸ್ಟ ಕಮಿಟಿ ವತಿಯಿಂದ ಖರೀದಿಸದ ಜಾಗದಲ್ಲಿಯೇ ಇ ವರ್ಷ ಅಮ್ಯುಜಮೆಂಟ ವ್ಯವಸ್ಥೆ ಮಾಡಲಾಗಿದೆ ಕುಡಿಯುವ ನೀರು, ಶೌಚಾಲಯ ಪ್ರತ್ಯಕವಾಗಿ ವಾಹನಗಳ ಪಾರ್ಕಿಂಗ, ವ್ಯವಸ್ಥೆ ಮಾಡಲಾಗಿದ್ದು ಪ್ರಮುಖ ಬೀದಿಗಳಲ್ಲಿ ಸಿ.ಸಿ ಕ್ಯಾಮರಗಳನ್ನು ಕೂಡ ಅಳವಡಿಸಲು ಪೋಲೀಸ ಇಲಾಖೆಗೆಗ ತಿಳಿಸಲಾಗಿದೆ ಮೆರವಣಿಗೆಯಲ್ಲಿ ಡೊಳ್ಳು ಕುಣಿತ ಗೊಂಬೆ ಕುಣಿತ ಹೆಜ್ಜೆ ಕುಣಿತ ಇನ್ನಿತರ ವಾದ್ಯ ಮೇಳಗಳು ಭಾಗವಹಿಸಲಿವೆ ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ಗ್ರಾಮದೇವಿ ಟ್ರಸ್ಟ ಕಮಿಟಿ ಅಧ್ಯಕ್ಷ ಶ್ರೀಕಾಂತ ಖಟಾವಕರ, ಸರ್ವಸದಸ್ಯರು ಹಾಗೂ ಜಾತ್ರಾ ಉತ್ಸವ ಕಮಿಟಿ ಸದಸ್ಯರು ಗ್ರಾಮಸ್ಥರು ಇದ್ದರು.

# ಲಾಸ್ಟ್ ಲ್ಯಾಂಡ್, ಸಬರ್ ಬೊಂದಾ ಮತ್ತು ವನ್ಯಾ ಅತ್ಯುತ್ತಮ ಚಿತ್ರಗಳು

• **ಮಲ್ಲಮ್ಮ ನುಡಿ ವಾರ್ತೆ, ಬೆಂಗಳೂರು**

17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾತ್ಮಕ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಚಿತ್ರಗಳ ಘೋಷಣೆ

ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವ: 17ನೇ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವವು ಶುಕ್ರವಾರ ಅಂತ್ಯಗೊಂಡಿದ್ದು, ಜಪಾನ್ ದೇಶದದ ಲಾಸ್ಟ್ ಲ್ಯಾಂಡ್. ಮರಾಠಿಯ ಸಬರ್ ಬೊಂದಾ ಮತ್ತು ವನ್ಯಾ ಚಿತ್ರಗಳು ಚಿತ್ರೋತ್ಸವದ ಏಷ್ಯಾ, ಭಾರತ ಮತ್ತು ಕನ್ನಡ ವಿಭಾಗಗಳಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿವೆ. ಅತ್ಯುತ್ತಮ ಪ್ರಶಸ್ತಿ ವಿಜೇತರಿಗೆ ಪಾರಿತೋಷಕದ ಜೊತೆಗೆ 10 ಲಕ್ಷ ರೂ. ನಗದು ಬಹುಮಾನ ನೀಡಲಾಯಿತು. ದ್ವಿತೀಯ ಮತ್ತು ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗಳನ್ನು ಗೆದ್ದವರಿಗೆ ತಲಾ ಐದು ಲಕ್ಷ ರೂ. ಮತ್ತು ಎರಡು ಲಕ್ಷ ರೂ. ನೀಡಿ ಗೌರವಿಸಲಾಯಿತು. ಏಷ್ಯನ್ ಚಿತ್ರ ವಿಭಾಗದಲ್ಲಿ ಈ ವರ್ಷ ಒಟ್ಟು 15 ಚಿತ್ರಗಳು ಪ್ರಶಸ್ತಿ ಕಣದಲ್ಲಿದ್ದವು. ಪೈಕಿ ಜಪಾನ್‌ನ ದಿ ಲಾಸ್ಟ್ ಲ್ಯಾಂಡ್ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾದರೆ, ಭಾರತದ ಶೇಪ್ ಆಫ್ ಮೋಮೋ ಮತ್ತು ಜಪಾನ್‌ನ ದಿ ಡೀಪೆಸ್ಟ್ ಸ್ಪೇಸ್ ಇನ್ ಯೂಎಸ್ ಚಿತ್ರಗಳು ದ್ವಿತೀಯ ಮತ್ತು ತೃತೀಯ ಚಿತ್ರ ಪ್ರಶಸ್ತಿಗೆ ಭಾಜನವಾಗಿವೆ. ಫಿಲಿಪ್ಪೈನ್ಸ್‌ನ ರಿಪಬ್ಲಿಕ್ ಆಫ್ ಪಿಪೊಲಿಪಿನಾಸ್ ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆದಿದೆ. ಭಾರತೀಯ (ಚಿತ್ರಭಾರತಿ) ವಿಭಾಗದಲ್ಲಿ ಮರಾಠಿ ಚಿತ್ರ ಸಬರ್ ಬೊಂಡಾ ಅತ್ಯುತ್ತಮ ಚಿತ್ರ ಪ್ರಶಸ್ತಿ ತನ್ನದಾಗಿಸಿಕೊಂಡರೆ, ಮಲಯಾಳಂನ ಮೋಹಂ ಮತ್ತು ಕಾಡು ಚಿತ್ರಗಳು ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಚಿತ್ರ ಪ್ರಶಸ್ತಿಗಳನ್ನು ಗೆದ್ದಿವೆ. ಮರಾಠಿ ಭಾಷೆಯ ಗೊಂದಾಳ್ ಚಿತ್ರವು ಫಿಪ್ರೆಸ್ಕಿ ಪ್ರಶಸ್ತಿ ಪಡೆದ–ರೆ, ಮಲಯಾಳಂ ಭಾಷೆಯ ಸರ್ಕೀಟ್ ಚಿತ್ರವು ತೀರ್ಪುಗಾರರ ವಿಶೇಷ ಮೆಚ್ಚುಗೆಯನ್ನು ಪಡೆದಿದೆ.

ಕನ್ನಡ ಸ್ಪರ್ಧಾ ವಿಭಾಗದಲ್ಲಿ ಈ ಬಾರಿ 14 ಚಿತ್ರಗಳು ಸ್ಪರ್ಧಿಸಿದ್ದು, ಈ ಪೈಕಿ ವನ್ಯಾ ಚಿತ್ರವು ಅತ್ಯುತ್ತಮ ಪ್ರಶಸ್ತಿಯನ್ನು ಗೆದ್ದಿದೆ.



# ಫೆಬ್ರುವರಿ 7 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗ ವ್ಯಾಪ್ತಿಯಲ್ಲಿ ಬರುವ ಸಿದ್ಧಾರ್ಥ ಫೀಡರ್ ವ್ಯಾಪ್ತಿಯ ಬಡಾವಣೆಗಳಲ್ಲಿ ಇದೇ ಫೆಬ್ರವರಿ 7ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 04 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಸಿದ್ಧಾರ್ಥ ನಗರ ಫೀಡರ್: ಸಿ.ಐ.ಬಿ. ಕಾಲೋನಿ, ಸಿದ್ಧಾರ್ಥ ನಗರ, ಹೊಸ ಮತ್ತು ಹಳೆಯ ಘಾಟಗೆ ಲೇಔಟ್, ಶಕ್ತಿ ನಗರ, ಕಾಂತಾ ಕಾಲೋನಿ, ಕೊತಂಬರಿ ಲೇಔಟ್, ಗೋದುತಾಯಿ ಲೇಔಟ್, ಬಸ್ ನಿಲ್ದಾಣ ಏರಿಯಾ, ಎಮ್.ಎಸ್.ಕೆ.ಮಿಲ್ ಜಿ.ಡಿ.ಎ, ಕಮರ್ಶಿಯಲ್ ಜಿ.ಡಿ.ಎ, ಭಗವತಿ ನಗರ, ಖೇಡಕರ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

# ಫೆಬ್ರವರಿ 7 ಹಾಗೂ 8 ರಂದು ಎಸ್.ಐ.ಆರ್ ಕಾರ್ಯಕ್ಕಾಗಿ ಪ್ರತಿ ವಾರ್ಡಿನಲ್ಲಿ ಕ್ಯಾಂಪ್ ವ್ಯವಸ್ಥೆ

• **ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ಮುಂಬರುವ ದಿನಗಳಲ್ಲಿ ಎಸ್.ಐ.ಆರ್ ಕಾರ್ಯ ಪ್ರಾರಂಭವಾಗಲಿದ್ದು, ಎಸ್.ಐ.ಆರ್ ಕಾರ್ಯ ಸುಗಮವಾಗಿ ನಡೆಯಲು 2002 ರಲ್ಲಿ ಮತದಾನ ಮಾಡಿದ ಮತದಾರರು 2025 ರ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಬಗ್ಗೆ ದೃಢೀಕರಿಸಿಕೊಂಡು ಮ್ಯಾಪಿಂಗ್ ಮಾಡುವುದು/ 18 ವರ್ಷಕ್ಕಿಂತ ಮೇಲ್ಪಟ್ಟ 40 ವರ್ಷದೊಳಗಿನ ಮತದಾರರನ್ನು ಗುರುತಿಸಿ ಕುಟುಂಬಸ್ಥರೊಂದಿಗೆ ಪ್ರೊಜಿನಿ ಕಾರ್ಯ ಪೂರ್ಣಗೊಳಿಸಬೇಕಾಗಿರುತ್ತದೆ.

ಇದರ ಹಿನ್ನಲೆಯಲ್ಲಿ ಕಲಬುರಗಿ ನಗರದ ಪ್ರತಿ ವಾರ್ಡ್‌ಗಳಲ್ಲಿ ಇದೇ ಫೆಬ್ರವರಿ 7 ಹಾಗೂ 8 ರಂದು ಕ್ಯಾಂಪ್ ವ್ಯವಸ್ಥೆ ಮಾಡಲಾಗಿದ್ದು, ಸಾರ್ವಜನಿಕರು ತಮಗೆ ಸಂಬಂಧಪಟ್ಟ ವಾರ್ಡಗಳಲ್ಲಿ ಆಯೋಜಿಸಿರುವ ಕ್ಯಾಂಪ್‌ನಲ್ಲಿ ಪ್ರತಿ ಮತದಾರರು ಅವಶ್ಯಕ ದಾಖಲೆಗಳೊಂದಿಗೆ ಹಾಜರಾಗಿ ಮ್ಯಾಪಿಂಗ್ ಮಾಡಿಸಬೇಕೆಂದು ಕಲಬುರಗಿ ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

# ಧಾರ್ಮಿಕ ಕಾರ್ಯ ದಾನ ಧರ್ಮದಿಂದ ಮನುಷ್ಯನ ಜನ್ಮ ಸಾರ್ಥಕ: ಕಾಳಹಸ್ತೇಂದ್ರ ಮಹಾಸ್ವಾಮಿಗಳು



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಸಮಾಜದಲ್ಲಿ ದೇವಸ್ಥಾನಗಳು ಸರ್ವ ಜನಾಂಗದ ಸೌಹಾರ್ದತೆಯ ಕೇಂದ್ರಗಳಾಗಿವೆ ಎಂದು ಪರಮ ಪೂಜ್ಯ ಶ್ರೀ ಕಾಳಹಸ್ತೇಂದ್ರ ಮಹಾಸ್ವಾಮಿಗಳು ವಿಶ್ವಕರ್ಮ ಏಕದಂಡಗಿ ಮಠ ಶಹಾಪುರ ನುಡಿದರು. ಪಟ್ಟಣದಲ್ಲಿ ಬೃಹತ್ ಪ್ರಮಾಣದಲ್ಲಿ ನಿರ್ಮಾಣವಾದ ಗ್ರಾಮ್ಯ ದೇವತೆ ಶ್ರೀ ಅಂಬಾಮಹೇಶ್ವರಿ ದೇವಸ್ಥಾನದ ಉದ್ಘಾಟನೆ ಹಾಗೂ ವಿವಿಧ ಪೂಜಾ ಕಾರ್ಯಗಳ ನೇತೃತ್ವವನ್ನು ವಹಿಸಿ ಅವರು ಮಾತನಾಡಿದರು. ಪಟ್ಟಣದ ಮುಖಂಡರು ರೈತರು ಮಹಿಳೆಯರು ಇನ್ನಿತರರು ಸೇರಿ ಅತ್ಯಂತ ಸುಂದರವಾದ ದೇವಸ್ಥಾನ ನಿರ್ಮಿಸಿರುವ ಕಾರ್ಯ ಶ್ಲಾಘನೀಯ ಪ್ರತಿಯೊಬ್ಬ ಮನುಷ್ಯನು ಧಾರ್ಮಿಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಪುಣ್ಯ ಪ್ರಾಪ್ತಿ ದೊರೆಯುತ್ತದೆ ನಾನು ನಂದು ಎಂಬ ಅಹಂಕಾರವನ್ನು ಪ್ರತಿಯೊಬ್ಬರು ತ್ಯಜಿಸಬೇಕು ದಾನ ಧರ್ಮ ಕಾರ್ಯದಿಂದ ಮನುಷ್ಯನ ಜನ್ಮ ಸಾರ್ಥಕ ಎಂದರು ಗ್ರಾಮದ ಆದಿ ದೇವತೆ ಶ್ರೀ ಅಂಬಾಮಹೇಶ್ವರ ದೇವಿ ತಮ್ಮೆಲ್ಲರಿಗೂ ಆರೋಗ್ಯ ಆಯಸ್ಸು ಐಶ್ವರ್ಯ ಉತ್ತಮ ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಆಶೀರ್ವದಿಸಿದರು. ಬೆಳಿಗ್ಗೆ ಕಳಸ ರೋಹಣ, ದೇವಿಗೆ ಅಲಂಕಾರ, ಗೋಪೂಜೆ ,ಹಾಲುಗಂಬಾ ಪೂಜೆ, ಅಂಬಾಮಹೇಶ್ವರಿ ಮತ್ತು ಕಾಳಿಕಾ ಮಾತೆಗೆ ಉಡಿ ತುಂಬುವುದು ದೇವಸ್ಥಾನ ಹಾಲುಗಂಬ ನಿರ್ಮಾಣಕ್ಕೆ ದೇಣಿಗೆ ನೀಡಿದ ಊರಿನ ಹೆಣ್ಣುಮಕ್ಕಳಿಗೆ ಉಡಿ ತುಂಬಲಾಯಿತು. ಬೆಂಗಳೂರಿನ ಪ್ರಸಿದ್ಧ ಪುರೋಹಿತರಾದ ಕೇಶವಾಚಾರ್ಯ, ಯತೀಶ್ ಆಚಾರ್ಯ, ಶಶಿ ಆಚಾರ್ಯ ಸಗರ, ಮೌನೇಶ್ ಗೊಡಿಹಾಳ, ಗಂಗಾಧರ ಸಗರ ರವರ ನೇತೃತ್ವದಲ್ಲಿ ಹೋಮ ಹವನ ವಿವಿಧ ಪೂಜೆಗಳು ಜರುಗಿದವು. ಈ ಸಂದರ್ಭದಲ್ಲಿ ಶ್ರೀ ವಿರೂಪಾಕ್ಷ ಸ್ವಾಮಿ ವಿಶ್ವಕರ್ಮ, ಕೊನಹಳ್ಳಿ ಮಠದ ನಿತ್ಯಾನಂದ ಸ್ವಾಮಿಗಳು ಸೇರಿದಂತೆ ಪಟ್ಟಣದ ಮುಖಂಡರು ಸುತ್ತಮುತ್ತಲಿನ ಗ್ರಾಮಸ್ಥರು ಮಹಿಳೆಯರು ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ನಿವೃತ್ತ ಸಾರಿಗೆ ನೌಕರರಾದ ಹೊನ್ನಪ್ಪ ವಿಶ್ವಕರ್ಮ ನಿರೂಪಿಸಿ ವಂದಿಸಿದರು.



ಕಮಲನಗರ: ಪಟ್ಟಣದ ಸೋನಾಳ ರಸ್ತೆಯಲ್ಲಿ ಇರುವ ಶಿವಾನಿ ಇಂಟರ್ನೆಟ್ ಅಂಗಡಿಯಲ್ಲಿ ಮಲ್ಲಮ್ಮ ನುಡಿ ದಿನ ಪತ್ರಿಕೆ ಹೊರ ತಂದ ವಿಶಿಷ್ಟ ಕ್ಯಾಲೆಂಡರರನ್ನು, ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವಾನಿ ಇಂಟರ್ನೆಟ್ ಅಂಗಡಿ ಮಾಲೀಕರಾದ ಶ್ರೀ ನಿತಿನ ಶಿವಣಕರ ಮತ್ತು ಹಿರಿಯ ಪತ್ರಕರ್ತ ಮಹಾದು ಬರ್ಗೆ ಅವರಿಗೆ ಕ್ಯಾಲೆಂಡರ್ ನೀಡಿ ಹೊಸ ವರ್ಷ 2026ರ ಶುಭ ಕೋರಲಾಯಿತು. ಈ ಸಂದರ್ಭದಲ್ಲಿ ಕಮಲನಗರ ತಾಲೂಕ ವರದಿಗಾರ ಪರಮೇಶ ರಾಂಪುರೆ ಅವರು ಇದ್ದರು.

# ನಿರಂತರ ಅಧ್ಯಯನ ಯಶಸ್ಸಿನ ಮೂಲ



ಭಾಲ್ಕಿ ತಾಲ್ಲೂಕಿನ ಖಟಕ ಚಿಂಚೋಳಿ ಗ್ರಾಮದ ಸಿದ್ದಮ್ಮ ಕಲ್ಯಾಣರಾವ್ ಪಾಟೀಲ ಕಲ್ಯಾಣ ಮಂಟಪದಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗಾಗಿ ಪರೀಕ್ಷಾ ಫಲಿತಾಂಶ ಸುಧಾರಣೆ ಕಾರ್ಯಗಾರ ನಡೆಯಿತು

• **ಮಲ್ಲಮ್ಮ ನುಡಿ ವಾರ್ತೆ ,ಭಾಲ್ಕಿ:**

ಶೈಕ್ಷಣಿಕ ಕ್ಷೇತ್ರದಲ್ಲಿ ಯಶಸ್ಸುಗಳಿಸಲು ವಿದ್ಯಾರ್ಥಿಗಳು ನಿರಂತರವಾಗಿ ಅಧ್ಯಯನಶೀಲರಾಗಿರಬೇಕು ಎಂದು ಕ್ಷೇತ್ರ ಸಮನ್ವಯಾಧಿಕಾರಿ ರಾಜಕುಮಾರ ಜೋಳದಾಪುಕೆ ಹೇಳಿದರು. ತಾಲ್ಲೂಕಿನ ಖಟಕ ಚಿಂಚೋಳಿ ಗ್ರಾಮದ

ಸಿದ್ದಮ್ಮ ಕಲ್ಯಾಣರಾವ್ ಪಾಟೀಲ ಕಲ್ಯಾಣ ಮಂಟಪದಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಪರೀಕ್ಷಾ ಫಲಿತಾಂಶ ಸುಧಾರಣೆ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಭಯ ಪಡದೆ ಪರೀಕ್ಷೆಗಳನ್ನು ಹಬ್ಬದಂತೆ ಸಂಭ್ರಮಿಸಬೇಕು. ಒಂದು ವರ್ಷಪೂರ್ತಿ ಕಲಿತ, ಅಧ್ಯಯನಗೈದ ವಿಷಯಗಳನ್ನು ಪರೀಕ್ಷಾ ಸಮಯದ ಮೂರು ಗಂಟೆಗಳಲ್ಲಿ ಚೆನ್ನಾಗಿ ಅಭಿವ್ಯಕ್ತಪಡಿಸಬೇಕು ಎಂದು ತಿಳಿಸಿದರು.

ಎಂಜಿಎಸ್ ಎಸ್ ಕೆ ನಿರ್ದೇಶಕ ಮಲ್ಲಿಕಾರ್ಜುನ್ ಪಾಟೀಲ ಮುಗನೂರು, ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯದ ಮೀಲಿಂದ ಕುಮಾರ, ಸಿಆರ್ ಪಿ ಚನ್ನಬಸಪ್ಪ, ಮುಖ್ಯಶಿಕ್ಷಕ ಗುರುರಾಜ ಸೇರಿದಂತೆ ಇತರರು ಇದ್ದರು.

# ಫೆಬ್ರುವರಿ 7 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ–1ರ ವ್ಯಾಪ್ತಿಯ 110/33/11ಕೆ.ವಿ ಕಲಬುರಗಿ ಪಶ್ಚಿಮ ವಿದ್ಯುತ್ ವಿತರಣಾ ಮಾರ್ಗದ ನಿರ್ವಹಣಾ ಕಾರ್ಯ ಕೈಗೊಂಡಿರುವ ಪ್ರಯುಕ್ತ ಫೆಬ್ರುವರಿ 07 ರಂದು ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಗಂಟೆಯವರೆಗೆ ಈ ಕೆಳಕಂಡ ಫೀಡರಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ–1ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. 110/11 ಕೆ.ವಿ ಪಶ್ಚಿಮ ವಿದ್ಯುತ್ ವಿತರಣಾ ಕೇಂದ್ರ: ಜಾಫರಾಬಾದ ಐಪಿ ಫೀಡರಿನ ಪಟ್ಟಣ, ಹತಗುಂದಾ, ಯಳವಂತಗಿ, ಕೆರಿಭೋಸಗಾ, ಸಾವಳಗಿ, ಸಾವಳಗಿ ಸ್ಟೇಶನ್, ಜಾಫರಾಬಾದ, ಸಿಂದಗಿ, ಭೀಮಳ್ಳಿ. ಸಿಂಧಗಿ ಎನ್.ಜೆ.ವೈ. ಫೀಡರಿನ ಜಾಫರಾಬಾದ, ಸಿಂಧಗಿ, ಕಮರಾನ ಕಾಲೋನಿ, ಕೃಷ್ಣ ಕಾಲೋನಿ, ದಿನದಯಾಳ ನಗರ ಹಾಗೂ ಪಟ್ಟಣ ಎನ್‌ಜೆವೈ, ಫೀಡರಿನ ಪಟ್ಟಣ, ಹತಗುಂದಾ, ಯಳವಂತಗಿ, ಕೆರಿಭೋಸಗಾ, ಸಾವಳಗಿ, ಸಾವಳಗಿ ಸ್ಟೇಶನ್, ಜಾಫರಾಬಾದ, ಸಿಂದಗಿ, ಭೀಮಳ್ಳಿ.

# ದಿವಗಂತ ಮಹಾದೇವಪ್ಪ ರಾಂಪೂರೆಯವರ 53ನೇ ಪುಣ್ಯಸ್ಮರಣೆ ಕರ್ನಾಟಕದ ಮದನಮೋಹನ ಮಾಳವಿಯ ರಾಂಪೂರೆ :ವಾಲಿ

• **ಮಲ್ಲಮ್ಮ ನುಡಿ ವಾರ್ತೆ,ಬೀದರ :**

ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯದಲ್ಲಿ ಮಹಾದೇವಪ್ಪ ರಾಂಪೂರೆಯವರ ಪುಣ್ಯಸ್ಮರಣೆ ಪ್ರಯುಕ್ತ ಗೌರವಾನ್ವಿತ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಸ್ಯರು ಹಾಗೂ ಬಿ.ವಿ.ಬಿ. ಶಾಲಾ ಕಾಲೇಜು ಆವರಣದ ಸಂಚಾಲಕರಾದ ಡಾ. ರಜನೀಶ್ ಎಸ್. ವಾಲಿಯವರು ದಿ. ಮಹಾದೇವಪ್ಪ ರಾಂಪೂರೆಯವರ ಮೂರ್ತಿಗೆ ಪೂಜೆ ಸಲ್ಲಿಸಿ ಮಾತನಾಡುತ್ತಾ ಹೈದ್ರಾಬಾದ ಕರ್ನಾಟಕ ಇಂದಿನ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ನಮ್ಮ ಬೀದರ ಜಿಲ್ಲೆಗೆ 1960ರಲ್ಲಿ ಮಹಾವಿದ್ಯಾಲಯ ಸ್ಥಾಪಿಸಿ ಇಲ್ಲಿನ ಪ್ರತಿಭೆಗಳನ್ನು ಇಲ್ಲಿಯೇ ನಿರ್ಮಾಣ ಮಾಡಲು ಅವಕಾಶ ಮಾಡಿದ ಮಹಾನ ಜೀವಿ ಇವರು ಸ್ಥಾಪಿಸಿರುವ ಶಿಕ್ಷಣ ಸಂಸ್ಥೆಯಲ್ಲಿ ಹಲವಾರು ಕುಟುಂಬಗಳು ಇಂದು ಸುಖವಾಗಿ ಜೀವನ ನಡೆಸುತ್ತಿದ್ದಾರೆ ಅವರ ಸ್ವಂತಕ್ಕಾಗಿ ಯಾವುದೇ ಆಸ್ತಿ ಮಾಡಿಕೊಳ್ಳದೆ ಎಲ್ಲಾ ಶಿಕ್ಷಣ ಸಂಸ್ಥೆಗಳ ಸರ್ವಾಂಗಿಣ ಅಭಿವೃದ್ಧಿಗಾಗಿ ಶ್ರಮಿಸಿದರು, ಆದುದರಿಂದ ಇವರು ಕಲ್ಯಾಣ ಕರ್ನಾಟಕದ ದಿವ್ಯಜ್ಯೋತಿ ಶಿಕ್ಷಣ ಶಿಲ್ಪಿ, ಹುಟ್ಟು ಹೋರಾಟಗಾರ ಸ್ವಾತಂತ್ರ್ಯವೀರ ದೇಶಪ್ರೇಮಿ ಹಾಗೂ ಈ ಭಾಗದ ಮದನಮೋಹನ ಮಾಳವೀಯ ಎಂದೇ ಹೆಸರುವಾಸಿಯಾಗಿರುವುದು ನಿಜಕ್ಕೂ ಸೂಕ್ತವಾಗಿದೆ ಇವರ ಆದರ್ಶ ಇಟ್ಟುಕೊಂಡು ವಿದ್ಯಾರ್ಥಿಗಳು ತಮ್ಮ ಉನ್ನತ ವ್ಯಾಸಂಗ ಮಾಡಿ ದೇಶ, ವಿದೇಶಗಳಲ್ಲಿ ನಮ್ಮ ಮಹಾವಿದ್ಯಾಲಯದ ತಮ್ಮ ಪಾಲಕರ ಹಾಗೂ ಗುರುಗಳ ಕೀರ್ತಿಯನ್ನು ಅಜರಾಮರಗೊಳಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು. ಈ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ ಅವರು ಮಾತನಾಡುತ್ತಾ ದಿ.ಮಹಾದೇವಪ್ಪ ರಾಂಪೂರೆಯವರು ಎಂದೂ ಬತ್ತದ ಭತ್ತದ ಕಣಜ ಜ್ಞಾನದ ಕಣಜ, ಕಲ್ಪವೃಕ್ಷ, ಕಾಮದೇನು ಇವರು ಉನ್ನತ ಶಿಕ್ಷಣಕ್ಕಾಗಿ 1958ರಲ್ಲಿ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಬಡವರಿಗೆ ವಿದ್ಯಾರ್ಜನೆ ಅಂದಿನ ದಿನಗಳಲ್ಲಿ ಬಹಳ ಕಷ್ಟವಾಗಿತ್ತು ಅಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗ ಮಾಡಿ ಉನ್ನತ ಹುದ್ದೆ ಪಡೆಯಲು ಮಾರ್ಗದರ್ಶಕರಾದರು ಬ್ರಿಟಿಷ್‌ರ ವಿರುದ್ಧ ಚಳುವಳಿ ಹೋರಾಟ ಮಾಡುತ್ತಾ ಜನನಾಯಕರಾದ ಇವರ ರಾಜಕೀಯ ಗುರುಗಳು ಎಂ.ಎನ್. ರಾಯ ಅವರ ಮಾರ್ಗದರ್ಶನದಲ್ಲಿ ರಾಂಪೂರೆಯವರು ಅನೇಕ ಚಳುವಳಿಗಳಲ್ಲಿ ಭಾಗವಹಿಸಿದರು ಆದರು ಸಹ ಅವರ ಛಲ ಬಿಡದೆ ಮೂರ್ತಿ ಚಿಕ್ಕದಾದರು ಕೀರ್ತಿ ದೊಡ್ಡದು ಹೀಗಾಗಿ ಅನೇಕ ಇತಿಹಾಸಕಾರರು ಅವರು ಮಾಡಿದ ಸೇವೆಯನ್ನು ಪರಿಗಣಿಸಿ ದಕ್ಷಿಣ ಭಾರತದ ಶಿಕ್ಷಣ ಶಿಲ್ಪಿ ಎಂದು ನುಡಿದರು ವಿದ್ಯಾರ್ಥಿಗಳು ಸಹ ಇವರ ಮಾರ್ಗದರ್ಶದಲ್ಲಿ ನಡೆಯಬೇಕೆಂದು ನುಡಿದರು ಕಾರ್ಯಕ್ರಮದ ಮೊದಲಿಗೆ ಕಛೇರಿಯ ಅಧೀಕ್ಷಕರಾದ ಶ್ರೀ ಸುಜೀತಕುಮರ ಬಿ. ಸ್ವಾಗತಿಸಿದರೆ, ಇತಿಹಾಸದ ಮುಖ್ಯಸ್ಥರಾದ




ಡಾ. ಶಿವಲೀಲಾ ವೀರಯ್ಯಾ ನಿರೂಪಿಸಿದರೆ, ಇತಿಹಾಸ ವಿಭಾಗದ ಉಪನ್ಯಾಸಕರಾದ ಶ್ರೀ ಬಸವರಾಜ ಬಿರಾದಾರ ವಂದಿಸಿದರು, ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಎನ್.ಎಸ್.ಎಸ್., ಎನ್.ಸಿ.ಸಿ. ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪ್ರಾಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

# ಗುರುಮಠಕಲ್ ತಾಪಂ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್**

ತಾಲೂಕು ಮಟ್ಟದ ಮನರೇಗಾ, ಎಸ್ ಬಿ ಎಂ, ಎನ್ ಆರ್ ಎಲ್ ಎಮ್ ತೆರಿಗೆ ಸಂಗ್ರಹದ ಪ್ರಗತಿ ಪರಿಶೀಲನಾ ಸಭೆ

ದಿನಾಂಕ 06.02.2026 ರಂದು ಮುಂಜಾನೆ 11:30ಕ್ಕೆ ಮಾನ್ಯ ಶ್ರೀ ಸಿ ಬಿ ದೇವರಮನಿ ಆಡಳಿತ ಅಧಿಕಾರಿಗಳು ತಾಲೂಕು ಪಂಚಾಯತ ಗುರುಮಠಕಲ್ ಮತ್ತು ಯೋಜನಾ ನಿರ್ದೇಶಕರು ಡಿ ಆರ್ ಡಿ ಎ ಜಿಲ್ಲಾ ಪಂಚಾಯಿತಿ ಯಾದಗಿರಿ ರವರ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿಗಳ ಮನರೇಗಾ, ಸ್ವಚ್ಛ ಭಾರತ್ ಮಿಷನ್, ಎನ್ ಆರ್ ಎಲ್ ಎಮ್ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆರಿಗೆ ಸಂಗ್ರಹದ ಪ್ರಗತಿ ಕುರಿತು ಸುಮಾರು 2 ಗಂಟೆಗಳ ಕಾಲ ಸಭೆಯನ್ನು ನಡೆಸಿಕೊಟ್ಟರು.



ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಲಭ್ಯವಿರುವ ಮನರೇಗಾದ ಕೂಲಿ ಆಧಾರಿತ ಕಾಮಗಾರಿಗಳಲ್ಲಿ ಜನರಿಗೆ ಅಗತ್ಯ ಕೂಲಿ ಕೆಲಸವನ್ನು ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿಯಮಾನುಸಾರ ಒದಗಿಸಲು ತಿಳಿಸಿದರು.

ಚಿನ್ನಕಾರ ಗ್ರಾಮ ಪಂಚಾಯಿತಿಯು ವಾರ್ಷಿಕ ಮಾನವ ದಿನಗಳ ಗುರಿಯ ಪೈಕಿ 141.27 ಪ್ರತಿಶತ ಜನರಿಗೆ ಕೂಲಿ ಒದಗಿಸುವುದರ ಮೂಲಕ ತಾಲೂಕಿನಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ ಗ್ರಾಮ ಪಂಚಾಯಿತಿ ಆದರೆ ಅನಪೂರ 22.68 ಪ್ರತಿಶತ ಅಜಲಾಪುರ 23.10 ಪ್ರತಿಶತ ಕಾಳಬೆಳಗುಂದಿ 30.51 ಪ್ರತಿಶತ ಮಾನವ ದಿನಗಳನ್ನು ಸೃಜಿಸುವ ಮೂಲಕ ತಾಲೂಕಿನಲ್ಲಿ ಕಡಿಮೆ ಪ್ರಗತಿ ಸಾಧಿಸಿವೆ. ಆದ್ದರಿಂದ ಸದರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹೆಚ್ಚಿನ ಜನರಿಗೆ ಕೂಲಿ ಕೆಲಸ ನೀಡುವುದು.

ಅದೇ ರೀತಿಯಲ್ಲಿ ಸ್ವಚ್ಛ ಭಾರತ ಮಿಷನ್ ನಲ್ಲಿ ವಾರ್ಷಿಕ ಗುರಿ ಐಎಚ್ ಎಚ್ ಎಲ್ ನಲ್ಲಿ ನಲ್ಲಿ 628 ಗುರಿಯ ಪೈಕಿ 636 ಶೌಚಾಲಯಗಳನ್ನು ನಿರ್ಮಿಸಿ ವಾರ್ಷಿಕ ಗುರಿ ಸಾಧಿಸಲಾಗಿದೆ. ಇದರಲ್ಲಿ ಚಂಡ್ರಿಕಿ ವಾರ್ಷಿಕ ಗುರಿ 44ಕ್ಕೆ ಎದುರಾಗಿ 64 ಶೌಚಾಲಯಗಳನ್ನು ನಿರ್ಮಿಸಿದೆ. ಚಪೆಟ್ಲಾದಲ್ಲಿ 6, ಕಾಳಬೆಳಗುಂದಿ 5, ಗಾಜರಕೋಟ 4, ಮಾಧವಾರ 3, ಯಲ್ಹೇರಿ 2 ವೈಯಕ್ತಿಕ ಶೌಚಾಲಯ ನಿರ್ಮಾಣ ಬಾಕಿ ಉಳಿದಿದ್ದು ಮಾರ್ಚ್ ಅಂತ್ಯದ ವೇಳೆಗೆ ಕಡ್ಡಾಯವಾಗಿ ಗುರಿ ಸಾಧಿಸಲು ಸೂಚಿಸಿದರು.

ಮಹಿಳಾ ಸ್ವಸಹಾಯ ಸಂಘಗಳಿಗೆ ಬಲವರ್ಧನೆ ಮಾಡುವ ಮೂಲಕ ಮಹಿಳಾ ಸಬಲೀಕರಣವನ್ನು ಸಾಧಿಸುವ ಅಗತ್ಯವಿದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿಗಳಲ್ಲಿ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಂಪನ್ಮೂಲಗಳು ಅಗತ್ಯವಾಗಿದ್ದು ಇದಕ್ಕೆ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವಾರ್ಷಿಕ ತೆರಿಗೆಯನ್ನು ಎಲ್ಲಾ ಜನರಿಂದ ಸಂಗ್ರಹಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸುವುದು.

ಈ ಸಂದರ್ಭದಲ್ಲಿ ತೆರಿಗೆ ಅಭಿಯಾನದಲ್ಲಿ ಉತ್ತಮ ಸಾಧನೆಗೈದ ಚಪೆಟ್ಲಾ, ಅಜಲಪುರ, ಕಂದಕೂರ, ಕಾಕಲವಾರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕರಾವಸಲಿಗಾರರು, ಡಿ ಇ ಓ, ಎನ್ ಆರ್ ಎಲ್ ಎಮ್ ಸಿಬ್ಬಂದಿಗಳಿಗೆ ಸನ್ಮಾನಿಸಲಾಯಿತು.

ಅದೇ ರೀತಿಯಾಗಿ 2025-26 ನೇ ಸಾಲಿನ ವಾರ್ಷಿಕ ತೆರಿಗೆ ಬೇಡಿಕೆಯ 100 ಪ್ರತಿಶತ ತೆ-ರಿಗೆ ಸಂಗ್ರಹಿಸಿದ ಅನಪುರ, ಚಂಡ್ರಿಕಿ, ಯಂಪಾಡ, ಕೊಂಕಲ್, ಮೀನಾಸಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಕರಾವಸೂಲಿಗಾರರಿಗೆ ಸನ್ಮಾನಿಸಲಾಯಿತು.

ಗುರುಮಠಕಲ್ ತಾಲೂಕಿನಲ್ಲಿ 18 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕರವಸೂಲಾತಿ ಬಾಕಿ 8,19,28,522 ರೂಪಾಯಿ ಇದ್ದು, ಹಲವು ವರ್ಷಗಳಿಂದ ಸದರೀ ತೆರಿಗೆಯನ್ನು ತೆರಿಗೆದಾರರು ಪಾವತಿಸದೆ ಉಳಿಸಿಕೊಂಡಿರುತ್ತಾರೆ. ತೆರಿಗೆದಾರರ ಮನೆ ಮನೆಗೆ ತೆರಳಿ ಅವರ ಮನ ಒಲಿಸುವುದರ ಮೂಲಕ ತೆರಿಗೆ ಸಂಗ್ರಹಿಸುವುದು ಮತ್ತು ಸಂಗ್ರಹಿಸಿದ ತೆರಿಗೆಯನ್ನು ಸರ್ಕಾರದ ನಿಯಮನುಸಾರ ಇಲಾಖೆ ನಿಯಮನುಸಾರ ಕ್ರಿಯಾ ಯೋಜನೆ ತಯಾರಿಸಿ ಗ್ರಾಮಗಳಲ್ಲಿ ಮೂಲ ಸೌಲಭ್ಯ ಒದಗಿಸಲು ಕ್ರಮ ವಹಿಸುವುದು.

ಯಾವುದೇ ರೀತಿಯ ನಿಯಮಬಾಹಿರವಾಗಿ ವರ್ತಿಸುವುದು ಕಂಡು ಬಂದರೆ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಂಬರೀಶ್ ಪಾಟೀಲ್ ಮಾತನಾಡಿ, ಮನರೇಗಾ, ಸ್ವಚ್ಛ ಭಾರತ ಮಿಷನ್, ಎನ್ ಆರ್ ಎಲ್ ಎಂ ತೆರಿಗೆ ಸಂಗ್ರಹ ಕಾರ್ಯವನ್ನು ಉತ್ತಮ ರೀತಿಯಲ್ಲಿ ನಿರ್ಮಿಸುವುದರ ಮೂಲಕ ತಾಲೂಕಿನ ಗ್ರಾಮ ಪಂಚಾಯಿತಿಯ ಪ್ರತಿಯೊಬ್ಬ ವ್ಯಕ್ತಿಗೂ ಯೋಜನೆಯ ಲಾಭ ಸಿಗುವಂತೆ ಮಾಡಿ, ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ನಾವೆಲ್ಲರೂ ಒಟ್ಟಾಗಿ ಸೇರಿ ಸಾಧಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಸಹಾಯಕ ನಿರ್ದೇಶಕ ರಾಮಚಂದ್ರ ಬಸೂದೆ, ತಾಲೂಕು ಯೋಜನಾಧಿಕಾರಿ ಶ್ರೀಮತಿ ಭಾರತೀ ಸಜ್ಜನ್ ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ತಾಲೂಕು ಪಂಚಾಯಿತಿ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಗ್ರಾಮ ದೇವತೆ ಲಕ್ಷ್ಮೀ ಪೂಜೆ, ಚಂಡಿ ಹೋಮ ಹಾಗೂ ಕಳಸಾ ರೋಹಣ

• **ಮಲ್ಲಮ್ಮ ನುಡಿ ವಾರ್ತೆ ,ಬೀದರ್**

ಸಂಗೋಳಗಿ ಗ್ರಾಮದಲ್ಲಿ ಮೂರು ದಿವಸಗಳ ಅದ್ದೂರಿಯಾಗಿ ಗ್ರಾಮ ದೇವತೆ ಲಕ್ಷ್ಮೀ ದೇವಿಯ ಪೂಜೆ, ಚಂಡಿ ಹೋಮ ಹಾಗೂ ಕಳಸಾ ರೋಹಣ ಕಾರ್ಯಕ್ರಮವನ್ನು ಶ್ರದ್ಧಾಭಕ್ತಿಯಿಂದ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಶ್ರೀ ಶ್ರೀ ದೇವಗಿರಿ ಮಹಾರಾಜ ಆದಿ ಲಕ್ಷ್ಮೀ ಆಶ್ರಮ ಮುಂಗಿ, ಅವರ ನೇತೃತ್ವದಲ್ಲಿ ಲಕ್ಷ್ಮಿ ಮಂದಿರದಲ್ಲಿ ಮೊದಲನೆಯ ದಿವಸ ಗುರುವಾರ ಮೊದಲ ಪೂಜೆ ಚಂಡಿ ಹೋಮ, ಮಂಡಪ್ಪ ದೇವತಾ ಆರಾಧನಾ, ಜಲ ನಿವಾಸ, ಸ್ನಪನಂ ಪುಷ್ಪಾದೀವಾಸ, ಮಂಗಳ ಹಾರತಿ, ನೆರವೇರಿಸಲಾಯಿತು,





ಶುಕ್ರವಾರ ಎರಡನೇ ದಿವಸ ಗ್ರಾಮದ ಅನೇಕ ಗ್ರಾಮ ದೇವರಾದ ಲಕ್ಷ್ಮಿಮಾತಾ, ಗ್ರಾಮಲಕ್ಷ್ಮೀ ಮಾತಾ, ಮರ್ಗೆಮ್ಮಾ ಮಾತಾ, ಪೊಕ್ಲಮ್ಮಾ ಮಾತಾ, ಧನಲಕ್ಷ್ಮಿ ಮಾತಾ, ಪೋಚಮ್ಮ ಮಾತಾ, ಜಟಿಂಗ, ಹಿರೋಡ್ಯ, ಘಳೆಮ್ಮಾ ಸೇರಿದಂತೆ ಅನೇಕ ದೇವರ

ಮೂರ್ತಿ ಸ್ಥಾಪನೆ ಕಳಸಾ ರೋಹಣ, ಪೂರ್ಣ ಹೂತಿ, ಹಾರತಿ ತೀರ್ಥ ಪ್ರಸಾದಗಳು, ನೆರವೇರಿತು, ಲಕ್ಮಿ ಮಂದಿರದಲ್ಲಿ ವಿಶೇಷವಾದ ಪೂಜೆ ನೆರವೇರಿತು,

ಗ್ರಾಮದ ಸಮಸ್ತ ಭಕ್ತಾದಿಗಳ ಸಹಕಾರದಿಂದ ಗ್ರಾಮ ದೇವತೆ ಲಕ್ಷ್ಮೀ ದೇವಿಯ ಪೂಜೆ ಹಾಗೂ ಕಳಸಾರೋಹಣ ಕಾರ್ಯಕ್ರಮವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಬೆಳಿಗ್ಗೆ ವಿಶೇಷ ಪೂಜಾ ವಿಧಿವಿಧಾನಗಳೊಂದಿಗೆ ದೇವಿಗೆ ಅಭಿಷೇಕ, ಅಲಂಕಾರ ಹಾಗೂ ಮಹಾಪೂಜೆ ನೆರವೇರಿತು. ನಂತರ ವೈದಿಕ ಮಂತ್ರೋಚ್ಚಾರಣೆಯೊಂದಿಗೆ ಕಳಸಾ ರೋಹಣ ಕಾರ್ಯಕ್ರಮವನ್ನು ಶಾಸ್ತ್ರೋಕ್ತವಾಗಿ ನಡೆಸಲಾಯಿತು,

ಪವಿತ್ರ ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು. ಕಾರ್ಯಕ್ರಮದ ಕೊನೆಯಲ್ಲಿ ಪ್ರಸಾದ ವಿನಿಯೋಗ ನಡೆಯಿತು. ಗ್ರಾಮಕ್ಕೆ ಸುಖ, ಶಾಂತಿ, ಸಮೃದ್ಧಿ ಹಾಗೂ ಉತ್ತಮ ಆರೋಗ್ಯ ಲಭಿಸಲೆಂದು ಭಕ್ತರು ದೇವಿಯನ್ನು ಪ್ರಾರ್ಥಿಸಿದರು,

# ಸ್ಮಶಾನ ಭೂಮಿ ಮಂಜೂರಾತಿಗೆ ದಲಿತ ಸಂಘರ್ಷ ಸಮಿತಿ ಮನವಿ



• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ತಾಲ್ಲೂಕಿನ ಕೋಡಂಬಲ್ ಗ್ರಾಮದಲ್ಲಿನ ಪರಿಶಿಷ್ಟ ಜಾತಿಯ ಜನರಿಗೆ ಸ್ಮಶಾನ ಭೂಮಿ ಮಂಜೂರು ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ವತಿಯಿಂದ ಗುರುವಾರ ತಹಶೀಲ್ದಾರ್ ಮಂಜುನಾಥ ಪಂಚಾಳ ಅವರಿಗೆ ಮನವಿ ಪತ್ರ ಸಲ್ಲಿಸಿದರು. ನಂತರ ಸಮುದಾಯದ ಪ್ರಮುಖ ವಿಷ್ಣುವರ್ಧನ್ ಬುದ್ಧ ಮಾತನಾಡಿ, ಗ್ರಾಮದಲ್ಲಿನ ಪರಿಶಿಷ್ಟ ಜಾತಿಯ ಜನ ಅಧಿಕವಾಗಿದ್ದು ಅಂತ್ಯಸಂಸ್ಕಾರ ಮಾಡಲು ಸ್ಥಳದ ಸಮಸ್ಯೆಯಿಂದ ಬಹಳ ಕಷ್ಟವಾಗುತ್ತಿದೆ ಎಂದು ಕಳೆದ ಜಿಲ್ಲಾಧಿಕಾರಿಗಳ ಜನಸ್ಪಂದನ ಕಾರ್ಯಕ್ರಮದಲ್ಲಿ ಈ ಬಗ್ಗೆ ಮನವಿ ನೀಡಲಾಗಿತ್ತು, ಆದರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದರು. ಈ ಸಂದರ್ಭದಲ್ಲಿ ರಾಜಕುಮಾರ, ಅನೀಲ, ಶರಣಪ್ಪ, ದೀಪಕ, ಜೈ ಭೀಮ್, ಆಕಾಶ, ಅವಿನಾಶ, ಪ್ರಕಾಶ, ನಾಗಪ್ಪ, ತಕ್ಕಮ್ಮಾ, ಅನುಷಾಬಾಯಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಂಚೆ ಇಲಾಖೆಯಿಂದ ಹೊಸ ಸೌಲಭ್ಯ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ಭಾರತೀಯ ಅಂಚೆ ಇಲಾಖೆಯು ಸಾರ್ವಜನಿಕರ ಅನುಕೂಲಕ್ಕಾಗಿ ಹಲವು ಹೊಸ ಉಪಕ್ರಮಗಳನ್ನು ಜಾರಿಗೆ ತಂದಿದೆ. ಅಂಚೆ ಸೇವೆಗಳನ್ನು ಮತ್ತಷ್ಟು ಸುಲಭ ಮತ್ತು ಜನಸ್ನೇಹಿಯಾಗಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಕಲಬುರಗಿಯ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.ಭಾರತೀಯ ಅಂಚೆ ಇಲಾಖೆಯ ಎಲ್ಲಾ ಕಛೇರಿಗಳಲ್ಲಿ ಗ್ರಾಹಕರು ಕಚೇರಿಯ ಕೆಲಸದ ಅವಧಿ ಮುಕ್ತಾಯವಾಗುವ ಕೊನೆಯ 30 ನಿಮಿಷಗಳವರೆಗೂ ಅಂತರರಾಷ್ಟ್ರೀಯ ಸ್ಪೀಡ್ ಪೋಸ್ಟ್, ಪತ್ರ, ಪಾರ್ಸೆಲ್ ಬುಕಿಂಗ್ ಅವಧಿ ಹಾಗೂ ವಿತರಣೆ ಮಾಡುವ ಸೌಲಭ್ಯವನ್ನು ನೀಡಿದೆ. ಇದರಿಂದ ಕಛೇರಿ ಸಮಯದ ಮುಗಿಯುವ ಹಂತದಲ್ಲಿ ಬರುವ ಗ್ರಾಹಕರಿಗೆ ಅನುಕೂಲವಾಗುವಂತೆ ಅಂಚೆ ವಸ್ತುಗಳನ್ನು ಸುಲಭವಾಗಿ ಬುಕ್ ಮಾಡಲು ಅವಕಾಶ ಎಲ್ಲಾ ಅಂಚೆ ಕಚೇರಿಗಳಲ್ಲಿ ಕಲ್ಪಿಸಲಾಗಿದೆ.

ಮನೆಯಲ್ಲೇ ಕುಳಿತು ಅಂಚೆ ಸೇವೆಗಳನ್ನು ಪಡೆಯಲು ಇಲಾಖೆಯು ಹೊಸ ಪೋರ್ಟಲ್ ಅನ್ನು ಬಿಡುಗಡೆ ಮಾಡಿದ್ದು, https://app.indiapost.gov.in/customer-selfservice/login ಪೋರ್ಟಲ್ ಮೂಲಕ ಅಂಚೆ ಬುಕಿಂಗ್, ಬ್ಯಾಂಕಿಂಗ್ ಸೇವೆಗಳು ಮತ್ತು ದೂರು ದಾಖಲಿಸುವ ಸೌಲಭ್ಯವನ್ನು ಆನ್‌ಲೈನ್‌ನಲ್ಲಿ ಪಡೆಯಬಹುದಾಗಿದೆ.

ಅಂಚೆ ಸೇವೆಗಳನ್ನು ಮೊಬೈಲ್ ಮೂಲಕವೇ ಸುಲಭವಾಗಿ ಪಡೆಯಲು ಡಾಕ್ ಸೇವಾ ಆಪ್ "Dak Seva App" ಬಿಡುಗಡೆ ಮಾಡಲಾಗಿದ್ದು, ಇಂಡಿಯ ಪೋಸ್ಟ್ ಅಧಿಕೃತ ವೆಬ್‌ಸೈಟ್‌ನಲ್ಲಿರುವ ಕಿಖ ಕೋಡ್ ಬಳಸಿ ಈ ಆಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು.. ಗ್ರಾಹಕರು ಮೊಬೈಲ್ ಆಪ್ ಮೂಲಕ ಬುಕಿಂಗ್ ಮತ್ತು ಟ್ರ್ಯಾಕಿಂಗ್, ದೂರು ನೋಂದಣಿ ಹಾಗೂ ಇತರೆ ಸೇವೆಗಳನ್ನು ಪಡೆಯಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವ ಕರ್ಮದ ಏಳಿಗೆಗೆ ಜಾಗೃತಿ

• **ಮಲ್ಲಮ್ಮ ನುಡಿ ವಾರ್ತೆ,ಹುಣಸೂರು:**

ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಈ ಭಾರಿ ಬಜೆಟ್‌ನಲ್ಲಿ 300 ಕೋಟಿ ಅನುದಾನ ನೀಡುವಂತೆ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ತಾಲೂಕು ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ ಚಾರಿ ಸರಕರಾವನ್ನು ಒತ್ತಾಯಿಸಿದ್ದಾರೆ.



ಸಮಾಜದ ಮುಖಂಡ ಕೆ.ಪಿ.ನಂಜುಂಡಿ ರಾಜ್ಯಾದ್ಯಂತ ಪ್ರವಾಸ ಮಾಡಿ ವಿಶ್ವ ಕರ್ಮದ ಏಳಿಗೆಗೆ ಜಾಗೃತಿ ಮೂಡಿಸುವ ಮೂಲಕ ಅರಿವಿಗೆ ಕಾರಣರಾಗಿದ್ದಾರೆ. ಆದ್ದರಿಂದ ಸರಕಾರ ಎಲ್ಲಾ ಸಮುದಾಯಕ್ಕೆ ಆದ್ಯತೆ ನೀಡುವಂತೆ. ನಮ್ಮ ಜನಸಂಖ್ಯೆಯ ಆಧಾರದ ಮೇಲೆ ಅನುದಾನ ನೀಡಲಿ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಶ್ವಕರ್ಮ ಅಭಿವೃದ್ಧಿ ನಿಗಮದಿಂದ ಪ್ರತಿ ತಾಲೂಕಿನಲ್ಲಿ ಕೇವಲ ಐದು ಜನರಿಗೆ ಮಾತ್ರ ಸಾಲದ ಸೌಲಭ್ಯ ಸಿಗುತ್ತಿದ್ದು , ಅದು ಸಾಲದಾಗಿದೆ. ಇನ್ನು ಮಂದೆಯಾದರೂ ವಿಶ್ವಕರ್ಮ ಸಮುದಾಯದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವ ಮೂಲಕ ಸಹಕಾರ ನೀಡಲಿ ಎಂದು ಸರಕರಾವನ್ನು ಒತ್ತಾಯಿಸಿದ್ದಾರೆ.

# ಅಬಕಾರಿ ದಾಳಿಯಲ್ಲಿ ವಶಪಡಿಸಿಕೊಂಡ ಗಾಂಜಾ ಪದಾರ್ಥ ನಾಶ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಗಾಂಜಾ ಪದಾರ್ಥ ಗಾಂಜಾ ಗಿಡಗಳು ಒಟ್ಟು 26ಗಿಡ, ಗಾಂಜಾ ಗಿಡಗಳು ಒಣಗಿದ ಗಾಂಜಾ ಒಟ್ಟು 612.97 ಕೆ.ಜಿ, ವಶಪಡಿಸಿಕೊಳ್ಳಲಾದ ಗಾಂಜಾ ಪದಾರ್ಥಗಳ ಒಟ್ಟು ಅಂದಾಜು ಮೌಲ್ಯ20,00,000 ರೂ.ಗಳು ಅಬಕಾರಿ ದಾಳಿಯಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ವಶಪಡಿಸಿಕೊಂಡ ಗಾಂಜಾ ಪದಾರ್ಥ ನಾಶಪಡಿಸಲಾಯಿತು ಎಂದು ಯಾದಗಿರಿ ಅಬಕಾರಿ ಉಪ ಆಯುಕ್ತರು ಶಾರದಾ.ಸಿ.ಕೋಲಕಾರ ಅವರು ಹೇಳಿದರು. ಜಿಲ್ಲೆಯ ವಡಗೇರಾ ತಾಲ್ಲೂಕಿನ ಕೋರ ಗ್ರೀನ್ ಶುಗರ್ ಫ್ಯಾಕ್ಟರಿಯಲ್ಲಿ 2026ರ ಫೆಬ್ರವರಿ 3 ರಂದು ಮದ್ಯಾಹ್ನ 1.45 ಗಂಟೆಗೆ ಅಬಕಾರಿ ಇಲಾಖೆದಿಂದ ಅಬಕಾರಿ ಜಂಟಿ ಆಯುಕ್ತರ ನೇತೃತ್ವದಲ್ಲಿ ಯಾದಗಿರಿ ಅಬಕಾರಿ ಉಪ ಆಯುಕ್ತರು ಹಾಗೂ ರಾಯಚೂರು ಅಬಕಾರಿ ಉಪ ಆಯುಕ್ತರು, ಯಾದಗಿರಿ ಜಿಲ್ಲೆಯಲ್ಲಿ ಬರುವ ಎಲ್ಲಾ ಶಹಾಪೂರ ವಲಯ ಅಬಕಾರಿ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಎಲ್ಲಾ ಗಾಂಜಾ ಪದಾರ್ಥಗಳನ್ನು ನಾಶಪಡಿಸಿ, ಕೈಗೊಂಡಿರುವ ಕ್ರಮದ ಮಾಹಿತಿ ನೀಡಿ ಅವರು ಮಾತನಾಡಿದರು. ಜಿಲ್ಲೆಯ ವ್ಯಾಪ್ತಿಯಲ್ಲಿ ಅಬಕಾರಿ ಇಲಾಖೆಯು ವಿವಿಧ ಸಂದರ್ಭಗಳಲ್ಲಿ ನಡೆಸಿದ ದಾಳಿಗಳ ವೇಳೆ ಸಾಗಾಣಿಕೆ, ಅಕ್ರಮ ಸಂಗ್ರಹಣೆ ಹಾಗೂ ಮಾರಾಟ ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ಗಾಂಜಾ ಪದಾರ್ಥಗಳನ್ನು ನಿಯಮಾನುಸಾರ ದಹನಗೊಳಿಸಲಾಯಿತು.



ಸರ್ಕಾರದ ಮತ್ತು ಘನ ನ್ಯಾಯಾಲಯದ ನಿರ್ದೇಶನದಂತೆ ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಅಬಕಾರಿ ದಾಳಿಯಲ್ಲಿ ಸಾಗಾಣಿಕೆ, ಸಂಗ್ರಹಣೆ ಹಾಗೂ ಮಾರಾಟಗಳಂತಹ ಅಕ್ರಮ ಚಟುವಟಿಕೆಗಳಲ್ಲಿ ವಶಪಡಿಸಿಕೊಂಡ ಯಾದಗಿರಿ ಅಬಕಾರಿ ಉಪ ಆಯುಕ್ತರು ಈ ಗಾಂಜಾ ಪದಾರ್ಥಗಳನ್ನು ಜಿಲ್ಲಾ ಕಛೇರಿಯಲ್ಲಿ (ಮಾಲ್-ಖಾನಾ) ಸಂಗ್ರಹಿಸಿಡಲಾಗಿದ್ದ, ಎಲ್ಲಾ ಗಾಂಜಾ ಪದಾರ್ಥಗಳನ್ನು ದಾಳಿ ಮಾಡಿ ಗಾಂಜಾ ನಾಶಪಡಿಸುವ ಕಾರ್ಯಾಚರಣೆ ನಡೆಯಿತು.

ದಾಳಿಗಳ ವೇಳೆ ವಶಪಡಿಸಿಕೊಂಡಿದ್ದ ಎಲ್ಲಾ ಗಾಂಜಾ ಪದಾರ್ಥಗಳನ್ನು ಕಾನೂನುಬದ್ಧ ವಿಧಾನ ಅನುಸರಿಸಿ ಸಂಪೂರ್ಣವಾಗಿ ನಾಶಪಡಿಸಲಾಗಿದೆ. ಅಬಕಾರಿ ದಾಳಿ ಸಂದರ್ಭದಲ್ಲಿ ಕಲಬುರಗಿ ವಿಭಾಗ (ಜಾರಿ ಮತ್ತು ತನಿಖೆ) ಅಬಕಾರಿ ಜಂಟಿ ಆಯುಕ್ತರು ನಿರ್ಮಲಾ. ಎನ್, ಯಾದಗಿರಿ ಅಬಕಾರಿ ಉಪ ಆಯುಕ್ತರು ಶಾರದಾ.ಸಿ ಕೋಲಕಾರ, ರಾಯಚೂರು, ಅಬಕಾರಿ ಉಪ ಆಯುಕ್ತರು ಸಿ.ಕೆ.ಮಹಿಂದ್ರ, ಅಬಕಾರಿ ಅಧೀಕ್ಷಕರು ರಾಮನಗೌಡ.ಎಮ್, ಯಾದಗಿರಿ ಅಬಕಾರಿ ಅಧೀಕ್ಷಕರು ಇಂದುಬಾಯಿ, ಶಹಾಪೂರ ಉಪ ವಿಭಾಗ ಅಬಕಾರಿ ಉಪ ಅಧೀಕ್ಷಕರು ಹರ್ಷರಾಜ್.ಬಿ, ಯಾದಗಿರಿ ಜಿಲ್ಲೆಯ ವಿವಿಧ ವಲಯಗಳ ಅಬಕಾರಿ ನಿರೀಕ್ಷಕರು, ಉಪ ನಿರೀಕ್ಷಕರು ಶ್ರೀಶೈಲ್ ಒಡೆಯರ್, ಶರಣಗೌಡ ಬಿರಾದಾರ, ರೇಣುಕಮ್ಮ ಮಹೇಶ ಚೌಧರಿ, ಅಬಕಾರಿ ಮುಖ್ಯ ಪೇದೆಯಾದ ಮಹ್ಮದ ಸುಭಾನಿ, ಅಬಕಾರಿ ಪೇದೆಗಳಾದ ಪ್ರವೀಣ ರಜಪೂತ, ಶಿವಶರಣಪ್ಪ, ಭೀಮರಾವ, ಡಿಸಿಇ ಕಛೇರಿ ಸಿಬ್ಬಂದಿಗಳಾದ ಅರುಣಕುಮಾರ ಇನ್ನಿತರರು ಉಪಸ್ಥಿತರಿದ್ದರು.

# ದಿಢೀರ ಬೆಲೆ ಕುಸಿತದಿಂದ ಕಂಗಾಲಾದ ಶೇಂಗಾ ಬೆಳೆದ ರೈತ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ರೈತರು ಬೆಳೆದ ಶೇಂಗಾ ಬೆಳೆಗೆ ದಿಢೀರ ಬೆಲೆ ಕುಸಿತದಿಂದ ಕಂಗಾಲಾಗಿದ್ದು, ಸರ್ಕಾರ ಕೂಡಲೇ ರೈತರ ಹಿತಕಾಯಲು ಕ್ರಮ ಕೈಗೊಳ್ಳಬೇಕೆಂದು ಕನ್ನಡ ಪರ ಹೋರಾಟಗಾರ ಸಿದ್ದು ನಾಯಕ ಹತ್ತಿಕುಣಿ ಆಗ್ರಹಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಹನ್ನೆರಡು ಸಾವಿರ ಇದ್ದ ಬೆಲೆ ಇದ್ದಕ್ಕಿದ್ದಂತೆ 8 ಸಾವಿರಕ್ಕಿಂತ ಕಡಿಮೆಯಾಗಿದ್ದು, ಮಧ್ಯವರ್ತಿಗಳ ಲಾಬಿಯಿಂದಾಗಿ ರೈತರ ಹಿತ ಬಲಿಕೊಡಲಾಗಿದೆ ಎಂದು ಆರೋಪಿಸಿರುವ ಅವರು, ಕೂಡಲೇ ಕ್ರಮ ಕೈಗೊಂಡು ಬೆಲೆ ಕುಸಿತದಿಂದ ಕಂಗಾಲಾಗಿರುವ ರೈತರ ನೆರವಿಗೆ ಬರಬೇಕೆಂದು ಆಗ್ರಹಿಸಿದ್ದಾರೆ. ಮೊದಲೇ ಸಂಕಷ್ಟದಲ್ಲಿರುವ ರೈತರಿಗೆ ಶೇಂಗಾ ಬೆಳೆ ಕೈಹಿಡಿದಿದ್ದು ಆರಂಭದಲ್ಲಿ ಉತ್ತಮ ಬೆಲೆ ಇದ್ದದ್ದು ದಿಢೀರನೆ ಕುಸಿತ ಕಂಡಿರುವುದರ ಹಿಂದೆ ಕಾಣದ ಕೈಗಳ ಕೈವಾಡ ಇದ್ದು ಈ ಬಗ್ಗೆ ಗಮನ ಹರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ. ತಕ್ಷಣ ಕ್ರಮ ಕೈಗೊಂಡು ರೈತರ ನೆರವಿಗೆ ಬರಬೇಕು ಇಲ್ಲವಾದಲ್ಲಿ ರೈತರೊಂದಿಗೆ ಹೋರಾಟ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.



# ತಿಂಥಣಿ ಜಾತ್ರೆಯಲ್ಲಿ ಕುಷ್ಠರೋಗ ಅರಿವು ಆಂದೋಲನಾ ಜಾಗೃತಿ ಮೂಡಿಸಲಾಯಿತು



• **ಮಲ್ಲಮ್ಮ ನುಡಿ ವಾರ್ತೆ, ತಿಂಥಣಿ:**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ವಿಭಾಗದವತಿಯಿಂದ ತಿಂಥಣಿ ಜಾತ್ರೆಯಲ್ಲಿ ಸ್ಪರ್ಷ ಕುಷ್ಠರೋಗ ಅರಿವು ಆಂದೋಲನಾ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಕಕ್ಕೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಕುಮಾರ ನೀಲಕಂಠ ಮಾತನಾಡಿ ಸ್ಪರ್ಷ ಕುಷ್ಠ ಅರಿವು ಆಂದೋಲನಾ ಜಾಗೃತಿ ಅಭಿಯಾನವು ಜಿಲ್ಲಾದ್ಯಂತ ನಡೆಯುತ್ತಿದ್ದು ತಾರತಮ್ಯ ಕೊನೆಗೊಳಿಸುವುದು ಘನತೆಯನ್ನು ಕಾಪಾಡುವುದೆಂದು ಘೋಷ್ಯವಾಕ್ಯದೊಂದಿಗೆ ತಿಳಿಸಿದರು.ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕುಷ್ಠರೋಗ ನಿರ್ಮೂಲನ ಕಾರ್ಯಾಲಯದ ಆರೋಗ್ಯ ನಿರೀಕ್ಷಣಾಧಿಕಾರಿ ಶಿವಶರಣಯ್ಯ ಗದ್ದುಗೆ ಮಾತನಾಡಿ ಈ ಒಂದು ರೋಗ ಹೇಗೆ ಹರಡುತ್ತದೆ ಮತ್ತು ಲಕ್ಷಣ ಮತ್ತು ಇದೊಂದು ಸಾಂಕ್ರಾಮಿಕ ರೋಗ ಸ್ಪರ್ಷಜ್ಞಾನವಿಲ್ಲದ ಮಚ್ಚೆ ರೀತಿಯಲ್ಲಿ ಕಂಡು ಬರುತ್ತದೆ. ತಿಳಿ,ಬಿಳಿ, ತಾಮ್ರದ ಮಚ್ಚೆ ಎಣ್ಣೆ ಪಸರಿಸಿದಂತಹ ಹೊಳೆಯುವ ಚರ್ಮ ಕೈ,ಕಾಲು ಜೋಮು ಹಿಡಿಯುವುದು, ಬಹು ದಿನದ ಗಾಯ ಮುಂತಾದ ಲಕ್ಷಣಗಳಾಗಿವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆರೋಗ್ಯ ನೀರಿಕ್ಷಣಾಧಿಕಾರಿ ಶ್ರೀಮಂತ ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳು ಸಿಬ್ಬಂದಿಗಳು ಇನ್ನೀತರರು ಇದ್ದರು.

# ಫೆ. 8ರಂದು ಜಿಲ್ಲಾ ಮಟ್ಟದ ಪತ್ರಕರ್ತರ ವಾರ್ಷಿಕ ಕ್ರೀಡಾಕೂಟ.

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**



ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಜಿಲ್ಲಾ ಮಟ್ಟದ ಪತ್ರಕರ್ತರ ವಾರ್ಷಿಕ ಕ್ರೀಡಾಕೂಟ ಫೆ. 8ರಂದು ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಹೇಳಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಅಂದು ಬೆಳಿಗ್ಗೆ 9.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಕ್ರೀಡಾಕೂಟಕ್ಕೆ ಎಸ್ಪಿ ಪೃಥ್ವಿಕ್ ಶಂಕರ್ ಅವರು ಚಾಲನೆ ನೀಡಲಿದ್ದಾರೆ. ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಅವರು ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಲಿಂಗೇರಿ ಮತ್ತು ರಾಜ್ಯ ಪರಿಷತ್ತು ಸದಸ್ಯ ಸಾಗರ್ ದೇಸಾಯಿ ಅವರು ಆಗಮಿಸಲಿದ್ದಾರೆ ಎಂದರು. ಅಂದು ಸಂಜೆ 5ಕ್ಕೆ ನಡೆಯುವ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪೂರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ ಹಾಗೂ ಜೆಡಿಎಸ್ ಯಾದಗಿರಿ ನಗರ ಘಟಕ ಅಧ್ಯಕ್ಷ ಬಂದಪ್ಪ ಅರಳಿ ಅವರು ಪ್ರಶಸ್ತಿ ಪಡೆದ ತಂಡಗಳಿಗೆ ಮತ್ತು ವಯುಕ್ತಿಕ ಸ್ಪರ್ಧೆಯಲ್ಲಿ ವಿಜೇತರಿಗೆ ನಗದು ಬಹುಮಾನ ಹಾಗೂ ಟ್ರೋಫಿ ವಿತರಣೆ ಮಾಡಲಿದ್ದಾರೆ ಎಂದು ಹೇಳಿದರು. ಕ್ರೀಡೆಗಳಾದ ಕಬಡ್ಡಿ, ವಾಲಿಬಾಲ್ ಮತ್ತು ಕ್ರಿಕೆಟ್ ನಲ್ಲಿ ವಿಜೇತ ತಂಡಗಳಿಗೆ ತಲಾ 5 ಸಾವಿರ ರೂಪಾಯಿ ನಗದು ಬಹುಮಾನ ಮತ್ತು ಟ್ರೋಫಿ ವಿತರಿಸಲಾಗುವುದು. ರನ್ನರ್ ಅಪ್ ತಂಡಗಳಿಗೆ ಮೆಡಲ್ ನೀಡಲಾಗುವುದು ಎಂದರು. ಗುಂಡು ಎಸೆತ ಮತ್ತು ನೂರು ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ನಗದು ಬಹುಮಾನ ತಲಾ 1,000 ರೂಪಾಯಿ ಹಾಗೂ ಟ್ರೋಫಿ ನೀಡಲಾಗುವುದು. ಕೇರಂ ಮತ್ತು ಬ್ಯಾಡ್ಮಿಂಟನ್ ಸಿಂಗಲ್ ವಿಭಾಗ ಹಾಗೂ ಚೆಸ್ ನಲ್ಲಿ ವಿಜೇತರಿಗೆ ತಲಾ 500 ರೂಪಾಯಿ ನಗದು ಬಹುಮಾನ ಮತ್ತು ಟ್ರೋಫಿ ನೀಡಲಾಗುವುದು ಎಂದರು. ಕೇರಂ ಮತ್ತು ಬ್ಯಾಡ್ಮಿಂಟನ್ ಡಬಲ್ ವಿಭಾಗದಲ್ಲಿ ವಿಜೇತ ತಂಡಕ್ಕೆ ತಲಾ 1,000 ರೂಪಾಯಿ ನಗದು ಬಹುಮಾನ ಮತ್ತು ಟ್ರೋಫಿ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

# ನಿರುದ್ಯೋಗ ನಿವಾರಣೆ ಹೆಚ್ಚು ಉದ್ಯೋಗ ಮೇಳ ಆಯೋಜನೆ: ಭೋಸರಾಜು



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು :**

ಸರ್ಕಾರವು ಉದ್ಯೋಗ ಮೇಳಗಳನ್ನು ರಾಜ್ಯದಲ್ಲಿ ಹೆಚ್ಚು ಹೆಚ್ಚು ಆಯೋಜಿಸುವ ಮೂಲಕ ನಿರುದ್ಯೋಗ ನಿವಾರಣೆಗಾಗಿ ಶ್ರಮಿಸುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವ ಎನ್.ಎಸ್. ಭೋಸರಾಜು ಅವರು ಹೇಳಿದರು.

ಎಡೆದೊರೆ ನಾಡು ರಾಯಚೂರು ಉತ್ಸವದ ಅಂಗವಾಗಿ ರಾಯಚೂರಿನ ಕೃಷಿ ವಿ.ವಿ. ಆವರಣದಲ್ಲಿ ಉತ್ಸವದ ಎರಡನೆ ದಿನವಾದ ಶುಕ್ರವಾರ ಕೌಶಲ್ಯಾಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕೌಶಲ್ಯ ಮಿಷನ್ ಇವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ನಿರುದ್ಯೋಗಿಗಳು ತಮ್ಮ ಭವ್ಯ ಭವಿಷ್ಯ ಕಂಡುಕೊಳ್ಳಲು ನೆರವಾಗುವ ನಿಟ್ಟಿನಲ್ಲಿ, ಯುವನಿಧಿ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಿ, ಅವರಿಗೆ ನಿರುದ್ಯೋಗ ಭತ್ಯೆ ನೀಡುತ್ತಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಉದ್ಯೋಗ ಮೇಳಗಳನ್ನು ಹೆಚ್ಚು ಹೆಚ್ಚು ಆಯೋಜಿಸುವ ಮೂಲಕ ಯುವಶಕ್ತಿಗೆ ಆಸರೆಯಾಗುತ್ತಿದೆ. 2023ರ ಚುನಾವಣೆ ಪೂರ್ವದಲ್ಲಿ ನೀಡಿದ ಭರವಸೆಯಂತೆ ಐದು ಗ್ಯಾರಂಟಿ ಯೋಜನೆಗಳ ಜೊತೆಗೆ 'ಯುವನಿಧಿ' ಯೋಜನೆಯನ್ನು ಜಾರಿಗೆ ತರಲಾಗಿದೆ. ಇಂತಹ ಉದ್ಯೋಗ ಮೇಳದ ಅವಕಾಶಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಚಿವ ಎನ್.ಎಸ್. ಭೋಸರಾಜು ಹೇಳಿದರು.

ಸಂಸದ ಜಿ. ಕುಮಾರನಾಯಕ್ ಅವರು ಮಾತನಾಡಿ, ಜಗತ್ತಿನಲ್ಲಿಯೇ ನಮ್ಮ ದೇಶದಲ್ಲಿ ಯುವ ಮಾನವ ಸಂಪನ್ಮೂಲ ಹೆಚ್ಚಿದೆ. ಯುವ ಜನತೆಯೇ ನಮ್ಮ ದೇಶದ ಆಸ್ತಿ. ಈ ಯುವಶಕ್ತಿಯ ಸದ್ಬಳಕೆಯನ್ನು ನಮ್ಮ ದೇಶ ಮಾಡಿಕೊಳ್ಳಬೇಕಿದೆ. ಯುವ ಜನರಿಗೆ ಹೆಚ್ಚು ಉದ್ಯೋಗ ಸೃಷ್ಟಿಯಾಗಲು, ಈ ಶಕ್ತಿಗೆ ಕೌಶಲ್ಯದ ತರಬೇತಿಯೂ ಅಗತ್ಯವಿದೆ. ಇದಕ್ಕಾಗಿ ಸರ್ಕಾರ ಹೆಚ್ಚಿನ ನೆರವು ನೀಡುತ್ತಿದೆ. ಯುವಜನತೆ ಕೌಶಲ್ಯವನ್ನು ಕಲಿತುಕೊಳ್ಳದಿದ್ದರೆ ಭವಿಷ್ಯದಲ್ಲಿ ಉತ್ತಮ ಉದ್ಯೋಗ ದೊರಕುವುದು ಕಷ್ಟಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮಾಂತರ ಶಾಸಕ ಬಸನಗೌಡ ದದ್ದಲ್ ಮಾತನಾಡಿ, ರಾಯಚೂರು ಜಿಲ್ಲೆಯಲ್ಲಿ ಯುವ ಜನತೆಗೆ ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡಿಕೊಡಲು ಕೆಐಎಡಿಬಿ ಅಡಿ 4000 ಎಕರೆ ಪ್ರದೇಶದಲ್ಲಿ ಟೆಕ್ಸ್ಟೈಲ್ ಪಾರ್ಕ್ ಸ್ಥಾಪಿಸಲು ಸಿದ್ಧತೆ ನಡೆದಿದೆ. ಇದ–ರಿಂದ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ. ಜಿಲ್ಲೆಯಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯದರೆ, ರಾಯಚೂರು ಜಿಲ್ಲೆಯ ಜನರಿಗೂ ಹೆಚ್ಚಿನ ಉದ್ಯೋಗಗಳು ಸೃಜನೆಯಾಗುತ್ತವೆ ಎಂದರು.

ಉದ್ಯೋಗ ಮೇಳದಲ್ಲಿ 63 ಕಂಪನಿಗಳು ಭಾಗಿ :

ರಾಯಚೂರು ಉತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಉದ್ಯೋಗ ಮೇಳ ಹಲವಾರು ಯುವ ಜನರಿಗೆ ಬದುಕಿನ ಭದ್ರತೆ ಕಲ್ಪಿಸಿಕೊಳ್ಳಲು ವೇದಿಕೆಯಾಗಿ ಪರಿಗಣಿಸಿತು. ಮೇಳದಲ್ಲಿ ಆಟೋಮೊಬೈಲ್ ಮೆಕ್ಯಾನಿಕಲ್ ಕನ್‌ಸ್ಟ್ರಕ್ಷನ್, ಮಾರ್ಕೆಟಿಂಗ್, ಸೇಲ್ಸ್ ಅಂಡ್ ರೀಟೇಲ್ ಟೆಲಿಕಾಂ, ಬಿಪಿಒ, ಟೆಕ್ಸ್ಟೈಲ್, ಬ್ಯಾಂಕಿಂಗ್, ಫೈನಾನ್ಸ್, ಇನ್ಶೂರೆನ್ಸ್, ಹಾಸ್ಪಿಟಲ್ ಫಾರ್ಮಾಸಿಟಿಕಲ್ ಹೆಲ್ತ್ ಕೇರ್, ಟ್ರಾನ್ಸ್‌ಪೋರ್ಟ್, ಆಹಾರ ಸಂಸ್ಕರಣೆ, ಹೋಟೆಲ್ ನಿರ್ವಹಣೆ, ಗಾರ್ಮೆಂಟ್ಸ್, ಸೆಕ್ಯೂರಿಟಿ ಸೇರಿದಂತೆ ನಾನಾ ವಿಭಾಗದ 63 ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದವು. ಉದ್ಯೋಗ ಮೇಳಕ್ಕೆ ಹತ್ತು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನೊಂದಣಿ ಮಾಡಿಕೊಂಡಿದ್ದರಾದರೂ, ಶುಕ್ರವಾರ ಮಧ್ಯಾಹ್ನದ ವೇಳೆಗೆ 1200 ಕ್ಕೂ ಅಧಿಕ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಂಡರು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ವಿವಿಧ ಶೈಕ್ಷಣಿಕ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಉದ್ಯೋಗ ಮೇಳದ ಲಾಭ ಪಡೆದುಕೊಂಡರು. ಉದ್ಯೋಗಾಕಾಂಕ್ಷಿಗಳು ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿರುವ ಕೆಲಸಕ್ಕೆ ಅರ್ಜಿ ಸಲ್ಲಿಸಿ ಸಂದರ್ಶನದಲ್ಲಿ ಭಾಗವಹಿಸಿ ಸ್ಥಳದಲ್ಲಿಯೇ ನೇಮಕಾತಿ ಪತ್ರ ಪಡೆದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದೂ, ಜಿ.ಪಂ. ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಮುಖ್ಯ ಯೋಜನಾಧಿಕಾರಿ ಡಾ. ಟಿ. ರೋಣಿ, ಉದ್ಯೋಗಾಧಿಕಾರಿ ನವೀನ್ ಕುಮಾರ್, ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿ ಜಿ.ಯು. ಹುಡೇದ್ ಸೇರಿದಂತೆ ವಿವಿಧ ಅಧಿಕಾರಿಗಳು, ಗಣ್ಯರು ಪಾಲ್ಗೊಂಡಿದ್ದರು.

# ರೇಣುಕಾಚಾರ್ಯ ಜಯಂತಿ: ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಜಿಲ್ಲಾಡಳಿತದ ವತಿಯಿಂದ ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ಮಾರ್ಚ್ 1 ರಂದು ಶ್ರೀ ರೇಣುಕಾಚಾರ್ಯ ಜಯಂತಿಯನ್ನು ಅದ್ದೂರಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.ಅವರು ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರೆಯಲಾಗಿದ್ದ ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ ಕುರಿತಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಸಮಾಜದ ಮುಖಂಡರ ಆಶಯದಂತೆ ಜಿಲ್ಲಾ ಮಟ್ಟದ ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಗುವುದು. ಅಂ–ದು ಬೆಳಿಗ್ಗೆ 8 ಗಂಟೆಗೆ ಶ್ರೀ ರೇಣುಕಾಚಾರ್ಯ ಅವರ ಭಾವಚಿತ್ರದ ಮೆರವಣಿಗೆಯು ನಗರದ ಗವಿಮಠದಿಂದ ಪ್ರಾರಂಭಗೊಂಡು ಜವಾಹರ ರಸ್ತೆ ಮೂಲಕ ಅಶೋಕ ವೃತ್ತದವರೆಗೆ ಜರುಗಲಿದೆ. ಬಳಿಕ 10.30 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ವೇದಿಕೆ ಸಮಾರಂಭ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಪೂಜೆ, ಶ್ರೀ ರೇಣುಕಾಚಾರ್ಯರ ಕುರಿತು ವಿಶೇಷ ಉಪನ್ಯಾಸ ಹಾಗೂ ಇತರೆ ಕಾರ್ಯಕ್ರಮಗಳು ನಡೆಯಲಿದೆ ಎಂದು ಅವರು ತಿಳಿಸಿದರು.

ಸಮಾರಂಭ ದಿನದಂದು, ಮೆರವಣಿಗೆ ಮಾರ್ಗದ ಸ್ವಚ್ಛತೆ, ಕಾರ್ಯಕ್ರಮದ ಸ್ಥಳದ ಸ್ವಚ್ಛತೆ, ಮೆರವಣಿಗೆಯಲ್ಲಿ ಹಾಗೂ ವೇದಿಕೆ ಸಮಾರಂಭದಲ್ಲಿ ಪಾಲ್ಗೊಳ್ಳುವ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ನಗರಸಭೆಯಿಂದ ಒದಗಿಸಬೇಕು. ಜಿಲ್ಲಾ ಮಟ್ಟದ ಜಯಂತಿ ಆಚರಣೆ ಕಾರ್ಯಕ್ರಮಕ್ಕಾಗಿ ಸಂಬಂಧಿಸಿದ ಎಲ್ಲ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕೆಂದು ಅಪರ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಯಂತಿ ಕಾರ್ಯಕ್ರಮ ಯಶಸ್ವಿಗೆ ಸಮಾಜದ ಎಲ್ಲಾ ಮುಖಂಡರು, ಸಾರ್ವಜನಿಕರು ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕ ಎ. ಬಸವರಾಜ, ರೇಣುಕಾಚಾರ್ಯರ ಸಮಾಜದ ಮುಖಂಡರಾದ ಹಂಪಯ್ಯ ಮೆತಗಲ್ಲ, ಬಸವರಾಜ ಗೌರಿಮಠ, ಶಿವಕುಮಾರ್ ಹಿರೇಮಠ, ನೀಲಕಂಠಯ್ಯ ಹಿರೇಮಠ, ನಾಗಭೂಷಣ ಸಾಲಿಮಠ, ಎಸ್.ಎಸ್. ಹಿರೇಮಠ, ಗಿರೀಶ ಹಿರೇಮಠ, ದಯಾನಂದ ಸಿ.ಎಸ್., ನಾಗಬಸಯ್ಯ, ರವಿ ಹಿರೇಮಠ್, ಅರುಣಕುಮಾರ್, ಶರಣಯ್ಯ ಹಿರೇಮಠ, ಸೇರಿದಂತೆ ಮತ್ತಿತರರು ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಫೆ.12ರಿಂದ ಉದ್ಭವಲಿಂಗ ಅಮರೇಶ್ವರ ಜಾತ್ರೆ ಆರಂಭ

# ಪಟ್ಟಣ ಸಿಂಗರಿಸಲು ಚವ್ಹಾಣ ಸೂಚನೆ



• **ಮಲ್ಲಮ್ಮ ನುಡಿ ವಾರ್ತೆ ಔರಾದ:**

ಫೆ.12ರಿಂದ ಆರಂಭವಾಗಲಿರುವ ಐತಿಹಾಸಿಕ ಉದ್ಭವಲಿಂಗ ಅಮರೇಶ್ವರ ಜಾತ್ರಾಮಹೋತ್ಸವದ ಹಿನ್ನೆಲೆಯಲ್ಲಿ ಪಟ್ಟಣವನ್ನು ಸ್ವಚ್ಛ, ಸುಂದರ ಹಾಗೂ ಆಕರ್ಷಕವಾಗಿ ಸಜ್ಜುಗೊಳಿಸಲು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಕಠಿಣ ಸೂಚನೆ ನೀಡಿದರು.

ಜಾತ್ರೆ ಹಿನ್ನೆಲೆ ಔರಾದ(ಬಿ) ತಾಲ್ಲೂಕು ಪಂಚಾಯತ ಕಛೇರಿಯಲ್ಲಿ ಗುರುವಾರ ಪೂರ್ವಸಿದ್ಧತಾ ಸಭೆ ನಡೆಸಿ ಜಾತ್ರೆಯ ಪೂರ್ವಸಿದ್ಧತೆಗಳ ಬಗ್ಗೆ ಮಾಹಿತಿ ಪಡೆದರು.

ಮುಖ್ಯರಸ್ತೆ, ದೇವಾಲಯ ಸುತ್ತಮುತ್ತ, ಪಲ್ಲಕ್ಕಿ ಮೆರವಣಿಗೆ ನಡೆಯುವ ಬೀದಿಗಳು, ಅಂಗಡಿ ತುಂಬುವ ಸ್ಥಳಗಳು, ಪ್ರಮುಖ ವೃತ್ತಗಳು ಸೇರಿದಂತೆ ಇಡೀ ಪಟ್ಟಣವನ್ನು ಸ್ವಚ್ಛಗೊಳಿಸಬೇಕು. ಫಾಗಿಂಗ್ ಮತ್ತು ಬ್ಲೀಚಿಂಗ್ ಪೌಡರ್ ಸಿಂಪಡಿಸಬೇಕು. ಎಲ್ಲ ರಸ್ತೆ ಮತ್ತು ಚರಂಡಿಗಳು ಶುಚಿಯಾಗಬೇಕು. ಮುಖ್ಯಾಧಿಕಾರಿ, ಹೆಲ್ತ್ ಇನ್ಸ್‌ಪೆಕ್ಟರ್ ಹಾಗೂ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳೀಯವಾಗಿ ಲಭ್ಯವಿದ್ದು ಸ್ವಚ್ಛತಾ ಕಾರ್ಯಗಳನ್ನು ಸಮರ್ಪಕವಾಗಿ ಕೈಗೊಳ್ಳಬೇಕು ಎಂದು ಹೇಳಿದರು.

ಬೀದಿ ದೀಪಗಳು, ಹೈಮಾಸ್ಟ್ ದೀಪಗಳನ್ನು ಪರಿಶೀಲಿಸಿ ಎಲ್ಲವನ್ನು ಸರಿಪಡಿಸಬೇಕು. ಜಾತ್ರೆಗೆ ಆಗಮಿಸುವ ಭಕ್ತರಿಗೆ ಯಾವುದೇ ತೊಂದರೆ ಆಗದಂತೆ ಕುಡಿಯುವ ನೀರು, ಬೆಳಕು, ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಪುರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಉದ್ಭವಲಿಂಗ ಅಮರೇಶ್ವರ ದೇವಸ್ಥಾನ ಐತಿಹಾಸಿಕ ಮಹತ್ವ ಹೊಂದಿದ್ದು, ಇಲ್ಲಿ ಶರಣಾಗುವ ಎಲ್ಲ ಭಕ್ತರ ಇಷ್ಟಾರ್ಥಗಳು ಈಡೇರುತ್ತವೆ. ಹಾಗಾಗಿ ಕರ್ನಾಟಕ ಮಾತ್ರವಲ್ಲದೇ ಮಹಾರಾಷ್ಟ್ರ ತೆಲಂಗಾಣದಿಂದಲೂ ಬಹಳಷ್ಟು ಭಕ್ತರು ಆಗಮಿಸುತ್ತಾರೆ. ಜಾತ್ರೆಯಲ್ಲಿ ಲಕ್ಷಾಂತರ ಜನ ಸೇರುವುದರಿಂದ ಯಾರೊಬ್ಬರಿಗೂ ಅನಾನುಕೂಲ ಆಗದಂತೆ ನೋಡಿಕೊಳ್ಳಬೇಕು. ಆಕರ್ಷಕ ಸ್ವಾಗತ ಕಮಾನುಗಳು, ವಿದ್ಯುತ್ ಅಲಂಕಾರ ಹಾಗೂ ಧ್ವಜಪತಾಕೆಗಳ ಮೂಲಕ ಸಿಂಗರಿಸಬೇಕು ಎಂದು ತಿಳಿಸಿದರು.

ಭಕ್ತರ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಕೈಗೊಳ್ಳಬೇಕು. ಅಗ್ನಿಶಾಮಕ ದಳ ಜಾಗೃತವಾಗಿರಬೇಕು. ಆರೋಗ್ಯ ಇಲಾಖೆ ಎಂಬ್ಯುಲೆನ್ಸ್ ಮತ್ತು ಸಿಬ್ಬಂದಿಯೊಂದಿಗೆ ಸಜ್ಜಾಗಿರಬೇಕು. ಜೆಸ್ಕಾಂ ಅಧಿಕಾರಿಗಳು ವಿದ್ಯುತ್ ತಂತಿಗಳನ್ನು ಸರಿಪಡಿಸಿ ವಿದ್ಯುತ್ ಕೊರತೆಯಾಗದಂತೆ ಮತ್ತು ವಿದ್ಯುತ್ ಅವಘಡಗಳಿಗೆ ಆಸ್ಪದ ನೀಡದಂತೆ ವ್ಯವಸ್ಥೆ ಮಾಡಿಕೊಳ್ಳಬೇಕಂದು ಹೇಳಿದರು.

ಉದ್ಭವಲಿಂಗ ಅಮರೇಶ್ವರ ಜಾತ್ರೆ ಔರಾದ(ಬಿ) ತಾಲೂಕಿನ ಗೌರವದ ಹಬ್ಬವಾಗಿದ್ದು, ಜಾತ್ರಾ ಮಹೋತ್ಸವ ಸಮಿತಿಯಲ್ಲಿ ಎಲ್ಲ ಅಧಿಕಾರಿಗಳನ್ನು ಸೇರಿಸಿ ಜವಾಬ್ದಾರಿಗಳನ್ನು ಹಂಚಿಕೆ ಮಾಡಬೇಕು. ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸಿ ಜಾತ್ರೆಯನ್ನು ಯಶಸ್ವಿಯಾಗಿ ನಡೆಸಲು ಅಗತ್ಯ ತಯಾರಿಗಳನ್ನು ಮಾಡಿಕೊಳ್ಳಬೇಕೆಂದು ಶಾಸಕರು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಹೇಶ ಪಾಟೀಲ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ, ಪುರಸಭೆ ಮುಖ್ಯಾಧಿಕಾರಿ ಸ್ವಾಮಿದಾಸ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಗಾಯತ್ರಿ, ಜೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರ ರವಿ ಕಾರಬಾರಿ, ತಾಲ್ಲೂಕು ಪಂಚಾಯತ ಸಹಾಯಕ ನಿರ್ದೇಶಕ ಶಿವಕುಮಾರ ಘಾಟೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸಲಹೆ ಸಹಕಾರ ನೀಡಲು ಬದ್ಧ : ಹೆಚ್.ಪಿ.ಮಂಜುನಾಥ್

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**



ನಗರ ವ್ಯಾಪ್ತಿಯಲ್ಲಿ ಅಶ್ರಯ ಸಮಿತಿಯಿಂದ ಮನೆ ಮತ್ತು ನಿವೇಶನ ವಿತರಣೆಗೆ ನಮ್ಮ 15 ವರ್ಷಗಳ ಅಧಿಕಾರಾವದಿಯಲ್ಲಿ 34.33 ಎಕ್ಕರೆ ನಿವೇಶನ ಕಾಯ್ದಿರಿಸಿದ್ದು ಶಾಸಕರು ಈ ನಿವೇಶನದಲ್ಲಿ ಬಡವರಿಗೆ ವಸತಿ ನಿರ್ಮಿಸಿ ಹಸ್ತಾಂತರಿಸಲು ಬೇಕಾದ ಸಲಹೆ ಮತ್ತು ಸಹಕಾರ ನೀಡಲು ನಾನು ಬದ್ಧ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಪತ್ರಿಕಾ ಕಛೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನಗರಸಭೆ ಅಶ್ರಯ ಸಮಿತಿ ಕಳೆದ ಮೂರು ವರ್ಷಗಳಿಂದ ಒಂದು ಸಭೆ ನಡೆಯದೆ ವಸತಿ ಯೋಜನೆಯ ಫಲಾನಿಭವಿಗಳಿಗೆ ನಿವೇಶನ ಗುರುತಿಸುವುದು ಅಥಾವ ವಸತಿ ನಿರ್ಮಾಣ ಯೋಜನೆ ಜಾರಿಗೆ ತರುವಲ್ಲಿ ಶಾಸಕರು ಸಕರಾತ್ಮಕ ಸ್ಪಂದನೆ ಇಲ್ಲದೆ ಯೋಜನೆ ಜಾರಿಯಾಗಿಲ್ಲ ಎಂದರು.

ಹುಣಸೂರು ನಾಗರಿಕ ಹಿತರಕ್ಷಣ ಸಮಿತಿ ನೇತೃತ್ವದಲ್ಲಿ ವಿ.ಪಿ.ಬೋರೆ ಮತ್ತು ವಾಂಬೆ ಹೌಸಿಂಗ್ ಯೋಜನೆ ಫಲಾನುಭವಿಗಳು ಪ್ರತಿಭಟಿಸಿ ನಿವೇಶನ ಹಕ್ಕು ಪತ್ರ ನೀಡಿ 22 ವರ್ಷ ಕಳೆದಿದ್ದು ನಾನು ಅಧಿಕಾರದಲ್ಲಿ ಇಲ್ಲದಿದ್ದರೂ ಶಾಸಕರೊಂದಿಗೆ ಸಭೆಯಲ್ಲಿ ಬಾಗವಹಿಸಿ ಸಹಕಾರ ನೀಡಲು ಸಿದ್ದನಿದ್ದೇನೆ ಈ ವಿಷಯದಲ್ಲಿ ಯಾವುದೆ ರಾಜಕರಣ ಮಾಡಲು ನಾನು ಸಿದ್ದನಿಲ್ಲ ಜನರ ಹಿತವೇ ನನ್ನ ದ್ಯೆಯ ಎಂದರು.

ನಗರದಲ್ಲಿ ವಸತಿ ರಹಿತ 3 ರಿಂದ 4 ಸಾವಿರ ಜನರಿದ್ದು ಈ ಜನರಿಗೆ ವಸತಿ ಕಲ್ಪಿಸಿದರೆ ನೆಮ್ಮದಿಯ ಬದುಕು ಕಟ್ಟಿಕೊಳ್ಳುತ್ತಾರೆ ನನ್ನ ಅವದಿಯಲ್ಲಿ ನಗರಸಭೆ ಅಶ್ರಯ ಸಮಿತಿ ಎದುರು 3 ಸಾವಿರ ಅರ್ಜಿಗಳಿದ್ದು ಈಗ 4 ಸಾವಿರ ಇರಬಹುದು ಈ ಅರ್ಜಿದಾರ ದಾಖಲೆ ಪರಿಶಿಲಿಸಿ ಸಂಬಂದಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ಅಶ್ರಯ ಸಮಿತಿ ವ್ಯಾಪ್ತಿಯಲ್ಲಿರುವ 34 ಎಕ್ಕರೆ ಭೂಪ್ರದೇಶದಲ್ಲಿ ಬಡಾವಣೆ ನಿರ್ಮಿಸಿ ಬಹುಮಹಡಿ ಕಟ್ಟಡದಲ್ಲಿ ಫಲಾನುಭವಿಗಳಿಗೆ ಜೀವನ ನಡೆಸಲು ಸಹಕರಿಸಿ ಶಾಸಕರು ಈ ವಿಚಾರದಲ್ಲಿ ತಾತ್ಸರ ತೆ–ೂರದೆ ವಸತಿ ಸಚಿವರೊಂದಿಗೆ ಚರ್ಚಿಸಿ ಕಾರ್ಯೋನ್ಮೂಖರಾಗುವ ವಿಶ್ವಾಸವಿದೆ ಎಂದರು.

ಲಕ್ಷ ಣ ತಿರ್ಥ ನದಿಯನ್ನು ಶುದ್ದಿಕರಿಸಲು 70 ಕೋಟಿ ಅನುದಾನಕ್ಕೆ

ಸದನದಲ್ಲಿ ಶಾಸಕರು ಬೇಡಿಕೆ ಇಟ್ಟಿದ್ದಾರೆಈ ಯೋಜನೆಗೆ ತಮ್ಮ ಅವದಿಯಲ್ಲಿ ಪ್ರಸ್ತಾವನೆ ಸಲ್ಲಿಸಿ 41 ಕೋಟಿ ಅನುದಾನ ಮಂಜೂರಾತಿ ಅಗಿತ್ತು ಎಂದು ವಿಷಾದ ವ್ಯೆಕ್ತಪಡಿಸಿದರು

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೇಸ್ ನಗರಾದ್ಯಕ್ಷರವಿಪ್ರಸನ್ನ, ನಗರಸಭೆ ಮಾಜಿ ಅದ್ಯಕ್ಷ ಸ್ವಾಮಿಗೌಡ, ವಕಿಲ ಪುಟ್ಟರಾಜು, ನಗರಸಭಾ ಮಾಜಿ ಅದ್ಯಕ್ಷ . ಲಕ್ಷ್ಮಣ್ ಹಾಜರಿದ್ದರು

# ಪ್ರಕಾಶಕರಿಂದ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯ ಪದವಿ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಕೋರ್ಸುಗಳಾದ ಬಿ.ಎ., ಬಿ.ಕಾಂ., ಬಿಎಸ್.ಸಿ ನಾಲ್ಕನೇ ಸೆಮಿಸ್ಟರ್‌ನ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಅನುಕ್ರಮವಾಗಿ ಕಲಾ ಸೌರಭ–3, ವಾಣಿಜ್ಯ ಸೌರಭ–3, ವಿಜ್ಞಾನ ಸೌರಭ–3 ಸಾಮಾನ್ಯ ಕನ್ನಡ ಭಾಷಾ ಪಠ್ಯಪುಸ್ತಕಗಳನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಉತ್ತಮ ಗುಣಮಟ್ಟದೊಂದಿಗೆ ಮುದ್ರಿಸಿ, ಪ್ರಕಟಿಸಿ, ಸರಬರಾಜು ಮಾಡಲು ಸಿದ್ಧರಿರುವ ಮತ್ತು ವಿಶ್ವವಿದ್ಯಾಲಯದ ಕರಾರಿಗೆ ಸಮ್ಮತಿಸುವ ಆಸಕ್ತ ಮುದ್ರಕರು, ಪ್ರಕಾಶಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಮುದ್ರಕರು, ಪ್ರಕಾಶಕರು ಪುಸ್ತಕಗಳ ಮಾರಾಟದಿಂದ ಬಂದ ಹಣದಲ್ಲಿ ಕನಿಷ್ಠ ಶೇ.10 ಮತ್ತು ಅದಕ್ಕೂ ಹೆಚ್ಚಿನ ರಾಯಧನವನ್ನು (ರಾಯಲ್ಟಿ) ವಿಶ್ವವಿದ್ಯಾಲಯಕ್ಕೆ ಪಾವತಿಸಲು ಸಿದ್ಧರಿರಬೇಕು ಹಾಗೂ ವಿಶ್ವವಿದ್ಯಾಲಯದ ಕರಾರಿಗೆ ಸಮ್ಮತಿಸತಕ್ಕದ್ದು.ಪ್ರಕಟಣೆಯ 7 (ಏಳು) ದಿನಗಳೊಳಗಾಗಿ ಸ್ವ–ವಿವರಗಳುಳ್ಳ ಮಾಹಿತಿ ಅರ್ಜಿ ಮೂಲಕ ಸಲ್ಲಿಸಬೇಕು.

ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಯಾವುದೇ ಅರ್ಜಿಯನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವಲ್ಲಿ ವಿಶ್ವವಿದ್ಯಾಲಯದ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ, 12ರ ಅಖಿಲ ಭಾರತ ಮುಷ್ಕರ ಬೆಂಬಲಿಸಿ ಯಶಸ್ವಿಗೊಳಿಸಿ AIKS ಕರೆ: ಪರಶುರಾಮ ಭಂಡಾರಿ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**



ಅಖಿಲ ಭಾರತ ಕಿಸಾನ್ ಸಂಘಟನೆ(AIKS) ಸಿಂಧನೂರು ತಾಲೂಕ ಸಮಿತಿ ವತಿಯಿಂದ ಕೇಂದ್ರ ಜಂಟಿ ಕಾರ್ಮಿಕ ಸಂಘಟನೆಗಳ ಒಕ್ಕೂಟ(JCTU) ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ(ಖಎಂ) ಕರೆ ನೀಡಿರುವ ಫೆಬ್ರವರಿ 12ರ "ಅಖಿಲ ಭಾರತ ಮುಷ್ಕರ"ವನ್ನು ಅಖಿಲ ಭಾರತ ಕಿಸಾನ್ ಸಂಘಟನೆ( ಂಖಎಖ) ಬೆಂಬಲಿಸುತ್ತದೆ ಎಂದು ತಾಲೂಕು ಅಧ್ಯಕ್ಷ ಪರಶುರಾಮ ಭಂಡಾರಿ ತಿಳಿಸಿದರು

ನಗರದ ಸುದ್ದಿಗಾರರೊಂದಿಗೆ ಹೇಳಿಕೆ ನೀಡಿರುವ ಅವರು ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಅಂತರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತದ ಏಕಸ್ವಾಮ್ಯ ಕಾರ್ಪೋರೇಟ್ ಗಳ ಲಾಭಕೋರ ಹಿತಾಸಕ್ತಿಗೆ ತಕ್ಕಂತೆ 4 ಲೇಬರ್ ಕೋಡ್ ಗಳನ್ನು ತಂದೊಡ್ಡಿದೆ. ಕಾರ್ಮಿಕರನ್ನು ಕಾರ್ಪೋರೇಟ್ ಕಂಪನಿಗಳ ಗುಲಾಮಗಿರಿಗೆ ತಳ್ಳುತ್ತಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹೆಸರಿನ MNREGAವನ್ನು ಅಳಿಸಿ,

ಹಿಂದುತ್ವ ಪ್ರೇರಿತ ವಿಕಸಿತ ಭಾರತ, ಜಿ ರಾಮಜಿ, ಹೆಸರಿನಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅವಲಂಬಿತ ಕುಟುಂಬಗಳ ಜೀವನವನ್ನು ಕಂದಕಕ್ಕೆ ದೂಡುತ್ತಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ನಿರುದ್ಯೋಗಕ್ಕೆ ಪರಿಹಾರ ರೂಪಿಸುವುದನ್ನು ನಿರಾಕರಿಸಿದೆ

ಅಖಿಲ ಭಾರತ ಕಿಸಾನ್ ಸಂಘಟನೆ (AIKS) ವತಿಯಿಂದ ಇಂದು ಸರಕಾರಕ್ಕೆ ಒತ್ತಾಯಿಸುವುದೇನಂದರೆ, ಕೃಷಿ ಅವಲಂಭಿತ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕೂಲಿಕಾರ್ಮಿಕರ ಕೈಗಳಿಗೆ ಉದ್ಯೋಗ ಖಾತರಿಪಡಿಸಿದ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಹಕಾರಿಯಾಗಿದ್ದ " ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ನಿರ್ವೀರ್ಯಗೊಳಿಸಿರುವುದು ಪ್ರಜಾತಂತ್ರ ವಿರೋಧಿ ಹಿಂದುತ್ವ ಫ್ಯಾಸಿಸ್ಟ್ ಕ್ರಮವಾಗಿದೆ. ಇದು ಅತ್ಯಂತ ಖಂಡನೀಯವಾಗಿದೆ ಎಂದರು

ಬ್ರಿಟಿಷ್ ವಿರೋಧಿ ಭಾರತದ ಸ್ವತಂತ್ರ್ಯ ಹೋರಾಟದಲ್ಲಿ ಜಾಗತೀಕ ಮನ್ನಣೆ ಪಡೆದ ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ನಾಮಕರಣಗೊಂಡ " ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಅಸ್ಥಿರಗೊಳಿಸುವುದಕ್ಕೆ ಸಾಕ್ಷಿಯಾಗಿದೆ. ಮಹಾತ್ಮ ಗಾಂಧೀಜಿಯವರ ಹೆಸರನ್ನು ಅಳಿಸಿದ ಕೇಂದ್ರದ ಮೋದಿ ಸರಕಾರವು ಕಾರ್ಪೋರೇಟ್ ಬಂಡವಾಳದ ಹಿತಾಸಕ್ತಿಗಾಗಿ "ವಿಕಸಿತ ಭಾರತ ಜಿ ರಾಮಜಿ " ಎಂಬ ಹೆಸರಿನ ಈ ಯೋಜನೆಗೆ ಹಿಂದುತ್ವ ಕಾರ್ಯಸೂಚಿಯನ್ನು ಸಂಯೋಜಿಸಿ ಜಾರಿಗೊಳಿಸಲು ಮುಂದಾಗಿರುವುದು ಸರ್ವಾಧಿಕಾರಿ ನಡೆಯಾಗಿದೆ. ಕೇಂದ್ರದ ಈ ಗಿಃ–ಉಖಂಒಉ ಶಾಸನವು ಉದ್ಯೋಗದ ಶಾಸನಬದ್ಧ ಹಕ್ಕನ್ನು ನಿರಾಕರಿಸುತ್ತದೆ. ದೇಶದ ಒಕ್ಕೂಟ ವ್ಯವಸ್ಥೆಯನ್ನು ಹಾಳುಮಾಡುವ ಹಾದಿಯನ್ನು ಸುಗಮಗೊಳಿಸಿದಂತಾಗಿದೆ.

ಈ ಯೋಜನೆಗಾಗಿ ಶೇಕಡ 60ರಷ್ಟು ವ್ಯಯಿಸುವ ಕೇಂದ್ರ ಸರಕಾರವು ಶೇಕಡ 40ರಷ್ಟು ಪಾಲನ್ನು ಆಯಾ ರಾಜ್ಯ ಸರಕಾರಗಳ ಮೇಲೆ ಹೊರಿಸಿದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗದ ಬಿಕ್ಕಟ್ಟಿಗೆ ಕಾರಣವಾಗುತ್ತದೆ. ಅಲ್ಲದೆ ಕೃಷಿ ಕೂಲಿ ಕಾರ್ಮಿಕರ ವಲಸೆ ಪ್ರಮಾಣವು ನಿಯಂತ್ರಣಗೊಳ್ಳದಂತಾಗುತ್ತಿದೆ.

ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯು ಕೇವಲ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯಾಗಿರಲಿಲ್ಲ. ಗ್ರಾಮೀಣದಲ್ಲಿ ರಸ್ತೆಗಳು, ನೀರಾವರಿ, ಕುಡಿಯುವ ನೀರು, ಪಶುಸಂಗೋಪನೆ, ನಾಗರಿಕ ಕಲ್ಯಾಣ ಸೌಲಭ್ಯಗಳು ಹಾಗೂ ಜನಪರ ವಿದ್ಯುದೀಕರಣ, ಕೃಷಿ ಸಂಬಂಧಿತ ಕಾರ್ಯಯೋಜನೆ ಸೇರಿದಂತೆ ಇತ್ಯಾದಿಗಳಿಗೆ ಗ್ರಾಮೀಣಾಭಿವೃದ್ಧಿ ಮೂಲಸೌಕರ್ಯಗಳನ್ನು ರೂಪಿಸುವ ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿ ಇದನ್ನು ವಿನ್ಯಾಸಗೊಳಿಸಲಾಗಿತ್ತು. ಈ ಯೋಜನೆ ಅಡಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದುಡಿಯಲು ಪ್ರೇರಣೆಯಾಗಿತ್ತು. ಮಹಿಳೆಯರ ಮತ್ತು ದಲಿತ ಆದಿವಾಸಿಗಳ ದುಡಿಮೆಯ ಆದಾಯವನ್ನು ಕಸಿದಂತಾಗಿದೆ.

ಕಾರ್ಮಿಕ ವಿರೋಧಿ ನಾಲ್ಕು ಲೇಬರ್ ಕೋಡ್ ಗಳನ್ನು ಹಿಂಪಡೆಯಬೇಕು. ಅಲ್ಲದೆ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಿಂದ "ಮಹಾತ್ಮ ಗಾಂಧಿ" ಹೆಸರನ್ನು ಅಳಿಸಿರುವುದನ್ನು ಮರುಸ್ಥಾಪಿಸಬೇಕು. "ವಿಬಿ,ಜಿರಾಮಜಿ " ಖಾತ್ರಿ ಯೋಜನೆಯ ಹೆಸರನ್ನು ಹಿಂಪಡೆಯಬೇಕು.

ಗ್ರಾಮೀಣ ಪ್ರದೇಶದ ಕೃಷಿ ಕೂಲಿಕಾರ್ಮಿಕರಿಗೆ ವಾರ್ಷಿಕ 200 ದಿನಗಳ ಉದ್ಯೋಗಗಳನ್ನು ಸೃಷ್ಟಿಸಬೇಕು. ಅಲ್ಲದೆ 600 ರೂ. ಕೂಲಿಯನ್ನು ಹೆಚ್ಚಿಸಬೇಕು. ಹಲವಾರು ವರ್ಷಗಳಿಂದ ಸರಕಾರಿ ಗೋಮಾಳ, ಗೈರಾಣ, ಹೆಚ್ಚುವರಿ, ಪಡಾ, ಇನಾಂ ಭೂಮಿ ಹಾಗೂ ಕೃಷಿಯೋಗ್ಯ ಸಮಾಜಿಕ ಅರಣ್ಯ ಭೂಮಿಗಳಲ್ಲಿ ಸಾಗುವಳಿ ಮಾಡುತ್ತಿರುವ ಭೂಹೀನ ಬಡವರಿಗೆ ಪಟ್ಟಾ ನೀಡಲು ಸರಕಾರವು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಫೆಬ್ರವರಿ 12ರ ಅಖಿಲ ಭಾರತ ಮುಷ್ಕರದ ಹಿನ್ನೆಲೆಯಲ್ಲಿ ಈ ಮೂಲಕ ಸಂಘಟನೆ ಆಗ್ರಹಿಸುತ್ತಿದೆ ಎಂದು ತಿಳಿಸಿದರು.

# ಆಹಾರ ನೀರಿಕ್ಷ ವಿಠಲ್ ಮೇಲ್ ಜವಾಬ್ದಾರಿ ಪಡಿತರ ಕಾರ್ಡ್ ಗೆ ಬಡ ರೈತರ ಅಲೆದಾಟ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**



ಬಡವರಪಾಲಿಗೆಹಸಿವಿನದಾಹ ತೀರಲೆಂದು, ಸರಕಾರ ಹತ್ತಾರು ಮಹತ್ವದ ಯೋಜನೆಗಳನ್ನು ತರುವ ಮೂಲಕ ಬಡವರ ಹೊಟ್ಟೆತುಂಬುಸುವ ಕಾರ್ಯ ಮಾಡಿದೆ.

ಜನಸಾಮಾನ್ಯರ ಅರೋಗ್ಯದ ಹಿತದೃಷ್ಟಿಯಿಂದ ರಾಜ್ಯದಲ್ಲಿ ಗುಟ್ಕಾ ನಿಷೇಧ ಮಾಡಿದ್ದು,

ಈ ಎಲ್ಲಾ ಸರಕಾರದ ಮಹತ್ವದ ಆದೇಶಗಳು ಗಿರಿ ಜಿಲ್ಲೆಯಲ್ಲಿ ಗಾಳಿಗೆ ತೂರಿದಂತಿದೆ. ಹೌದು! ಯಾದಗಿರಿಯ ಸುತ್ತ ಮುತ್ತಲಿನ ಗ್ರಾಮಗಳಿಂದ ಬಡ ಜನಸಾಮಾನ್ಯರು ಹಾಗೂ ರೈತರು ದಿನ ನಿತ್ಯ ತಮ್ಮ ಪಡಿತರ ಚೀಟಿಯ ಕಾರ್ಯಕ್ಕೆ ತೆರಳಿದರೆ ಅಲ್ಲಿನ ಕಚೇರಿಯಲ್ಲಿನ ಆಹಾರ ನೀರಿಕ್ಷಕ ಕಚೇರಿ ಅಧಿಕಾರಿ ವಿಠ್ಠಲ್ ಅವರ ಖುರ್ಚಿ ಖಾಲಿ ಇದ್ದು, ಫೋನ್ ಕರೆ ಮಾಡಿದರೆ ಒಮ್ಮೆ ನಾಟ್ ರೀಚೆಬಲ್, ಒಮ್ಮೆ ನೊ ರೆಸ್ಪಾನ್ಸ್. ತಾಹಸೀಲ್ದಾರರ ಗಮನಕ್ಕೆ ತಂದರೆ ಅವರ ಮಾತುಗಳು ಬಲ್ಲವರೇ ಬಲ್ಲರು.

ಕಾರಣ ಅವರ ಬಾಯಲ್ಲಿನ ಗುಟ್ಕಾ ಮಾತುಗಳು. ಕಚೇರಿಯಲ್ಲಿ ಗುಟ್ಕಾ ಹಾಕೊಂಡು ಉಗಿಯುವ ತಾಹಸೀಲ್ದಾರರಿಗೆ ಅನುಮತಿ ಕೊಟ್ಟಿದ್ದು ಯಾರು ಉನ್ನತ ಅಧಿಕಾರಿ ಕಚೇರಿಯಲ್ಲಿ ಗುಟ್ಕಾ ಅಗೆಯುವ ಅನುಮತಿ ಇದೆಯೇ ಎಂಬ ಅನುಮಾನ ಜನಸಾಮಾನ್ಯರ ಪ್ರಶ್ನೆ ಕಚೇರಿಯಲ್ಲಿ ಪಡಿತರ ಚೀಟಿಯ ಕಾರ್ಯದ ಮಂಜೂರು ಮಾಡುವವರು ಯಾರು ಮಂಜೂರು ಮಾಡುವುದು ಎಲ್ಲಿ ಸಾರ್ವಜನಿಕರು ಓಡಾಡುವ ಬೀದಿ ಬದಿಯ ಸ್ಥಳಗಳಲ್ಲಿಯೇ ಎಂಬುದು ಸಾರ್ವಜನಿಕರ ನೋವಾಗಿದ್ದು, ಪಡಿತರ ಚೀಟಿಯ ಕಾರ್ಯಕ್ಕೆ ನಿತ್ಯ ನಗರದ( ತಾಹಸೀಲ್ದಾರ) ಕಚೇರಿಯಲ್ಲಿನ ಆಹಾರ ನೀರಿಕ್ಷಕ ಅಧಿಕಾರಿಗಳ ಕಾಯುವಿಕೆಗೆ ಜನ ಬೇಸತ್ತಿದ್ದಾರೆ.

ನಿತ್ಯ ಅಲೆದಾಡುವ ಸಾರ್ವಜನಿಕರ ಪಡಿತರ ಚೀಟಿ ಮಂಜೂರು ಮಾಡುವವರು ಇಲ್ಲದೆ ಬಡ ಜನತೆ ಹೈರಾಣರಾಗಿ ಮನೆಗೆ ಹಿಂತಿರುಗುವ ದುರಂತ ಪರಿಸ್ಥಿತಿ ಎದುರಾಗಿದೆ. ಒಮ್ಮೊಮ್ಮೆ ಆಹಾರ ನೀರಿಕ್ಷಕ ಅಧಿಕಾರಿ ಭೇಟಿ ಸಿಕ್ಕಾಗ ಪಡಿತರ ಚೀಟಿ ಕಾರ್ಯದ ಬಗ್ಗೆ ವಿಚಾರಿಸಿದರೆ ಅಧಿಕಾರಿ ವಿಠ್ಠಲ್ ಅವರ ಉತ್ತರ ಕಚೇರಿ ಹೊರಗಿನ ರಸ್ತೆ ಬದಿಯ ಖಾಸಗಿ ಆನ್ ಲೈನ್ ಸೆಂಟರ್ ಗಳಿಗೆ ತೆರಳುವಂತೆ ಅಸಂಭದ್ದ ಉತ್ತರ ನೀಡುತ್ತಾರೆ.

ಹಾಗಾದರೆ ಸರ್ಕಾರ ಬಡ, ಜನ ಸಾಮಾನ್ಯರಿಗೆ , ರೈತರಿಗೆ ಹಾಗೂ ನಿರ್ಗತಿಕರಿಗೆ ಅನುಕೂಲವಾಗುವ ಹಿತ ದೃಷ್ಟಿಯಿಂದ ಆಹಾರ ಪಡಿತರ ಚೀಟಿ ನೀಡಿರುವುದಾದರೂ ಯಾಕೆ ಇಂತಹ ಅಧಿಕಾರಿಗಳ ನಿರ್ಲಕ್ಷ ಮಾತು ಕೇಳುವುದಕ್ಕಾ ಎಂಬ ಪ್ರಶ್ನೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮುಂದಿನ ದಿನಗಳಲ್ಲಿಯೂ ಇಂತಹ ಅಧಿಕಾರಿಗಳಿಂದ ಬಡ ಜನರ ಕಾರ್ಯವಾಗುತ್ತಾ ಜನಸಾಮಾನ್ಯರ ಗೋಳನ್ನು ನೀಗಿಸಿ.

ಮೇಲಧಿಕಾರಿಗಳು ಪಡಿತರ ಕಾರ್ಯಗಳಿಗೆ ಅನುಕೂಲ ಮಾಡಿಕೊಡುತ್ತಾರ ಎಂದು ಕಾದು ನೋಡಬೇಕಾಗಿದೆ.

## ತರಬೇತಿ ಕಾರ್ಯಾಗಾರ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ವಕೀಲರ ಸಂಘ ಮತ್ತು ರೀಡ್ಸ್ ಸಂಸ್ಥೆ ಮಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ ಜಿಲ್ಲೆಯ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಫೆ.07 ಮತ್ತು 08 ರಂದು 'ಎರಡು ದಿನಗಳ ತರಬೇತಿ ಕಾರ್ಯಾಗಾರ' ಆಯೋಜಿಸಲಾಗಿದ್ದು, ಫೆ.07 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ನ್ಯಾಯಾಲಯದ ಒಂದನೇ ಮಹಡಿಯ ಸಭಾಂಗಣದಲ್ಲಿ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಕೆ.ಜಿ ಶಾಂತಿ ಅವರು ಕಾರ್ಯಾಗಾರ ಉದ್ಘಾಟಿಸುವರು.

ಜಿಲ್ಲಾ ಕಾನೂನು ಸೇವೆಗಳ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಅಧ್ಯಕ್ಷತೆ ವಹಿಸುವರು.ಮುಖ್ಯ ಅತಿಥಿಗಳಾಗಿ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹಡಗಲಿ ರಾಮು, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪಿ.ರಾಮಬ್ರಹ್ಮಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣನಾಯ್ಕ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ತರಬೇತಿಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ ಯುವನಿಧಿ ಮಹಿಳಾ ಫಲಾನುಭವಿಗಳಿಗೆ ಫ್ಯಾಷನ್ ಡಿಸೈನಿಂಗ್ ಕುರಿತು 30 ದಿನಗಳ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಇವರ ಪ್ರಾಯೋಜಕತ್ವದಲ್ಲಿ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ(ಸಿಡಾಕ್) ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂ ಉದ್ಯಮಗಳನ್ನು ಪ್ರಾರಂಭಿಸಲು ಆಸಕ್ತರಿರುವವರಿಗೆ ವಿವಿಧ ವೃತ್ತಿಗಳಲ್ಲಿ 30 ದಿನಗಳ ಫ್ಯಾಷನ್ ಡಿಸೈನಿಂಗ್ ನಿರ್ಧಿಷ್ಟ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಆಯಾ ವೃತ್ತಿಗಳಲ್ಲಿ ಪ್ರಾಯೋಗಿಕ ಹಾಗೂ ಸಿದ್ಧಾಂತದೊಂದಿಗೆ ಸ್ವಯಂ ಉದ್ಯಮಗಳ ಬಗ್ಗೆ ಮಾಹಿತಿ, ಉದ್ಯಮಶೀಲತೆ, ಯಶಸ್ವಿ ಉದ್ಯಮಶೀಲರ ಗುಣಲಕ್ಷಣಗಳು, ಉದ್ಯಮಗಳನ್ನು ಪ್ರಾರಂಭಿಸುವ ಹಂತಗಳು, ಸ್ವಯಂ ಉದ್ಯೋಗಕ್ಕೆ ಇರುವ ಸರ್ಕಾರದ ಯೋಜನೆಗಳು, ಬ್ಯಾಂಕ್ ವ್ಯವಹಾರ ಮಾಡುವ ಬಗ್ಗೆ, ಸಾಲ ಮತ್ತು ಹಣಕಾಸು ಮತ್ತು ಹಣಕಾಸೇತರ ಸೌಲಭ್ಯಗಳ ಬಗ್ಗೆ, ಲೆಕ್ಕ ಪತ್ರ ನಿರ್ವಹಣೆ, ಯೋಜನಾ ವರದಿ ತಯಾರಿಕೆ, ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸಹಾಯ ನೀಡುವದು ಮತ್ತು ಸಂಬಂಧಪಟ್ಟ ಇತ್ಯಾದಿ ವಿಷಯಗಳ ಬಗ್ಗೆ ಅನುಭವಿ ಅತಿಥಿ ಬೋಧಕರಿಂದ ಉಪನ್ಯಾಸ ಹಾಗೂ ಮಾಹಿತಿ ನೀಡಲಾಗುತ್ತದೆ.

# ಉತ್ಸವಗಳ ಯಶಸ್ವಿಗೆ ಎಲ್ಲಾ ಅಧಿಕಾರಿಗಳು ಒಗ್ಗೂಡಿ ಕೆಲಸ ನಿರ್ವಹಿಸಿ: ಜಿಲ್ಲಾಧಿಕಾರಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯಲ್ಲಿ ಕಂಪ್ಲಿ ಮತ್ತು ಕುರುಗೋಡು ಉತ್ಸವಗಳನ್ನು ಆಯೋಜಿಸಲಾಗಿದ್ದು, ಎಲ್ಲಾ ಅಧಿಕಾರಿಗಳು ಒಗ್ಗೂಡಿ ಕೆಲಸ ಮಾಡುವ ಮೂಲಕ ಉತ್ಸವಗಳನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಕಂಪ್ಲಿ ಮತ್ತು ಕುರುಗೋಡು ಉತ್ಸವ ಅಂಗವಾಗಿ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲು ಶುಕ್ರವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಂಪ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಜೆ.ಎನ್.ಗಣೇಶ್ ಅವರ ಇಚ್ಛಾಶಕ್ತಿಯಂತೆ ಫೆ.11,12 ರಂದು ಕಂಪ್ಲಿ ಉತ್ಸವ ಮತ್ತು ಫೆ.15, 16 ರಂದು ಕುರುಗೋಡು ಉತ್ಸವ ಆಯೋಜಿಸಲು ನಿರ್ಧರಿಸಲಾಗಿದ್ದು, ಈಗಾಗಲೇ ಸಿದ್ಧತಾ ಕಾರ್ಯ ಆರಂಭಗೊಂಡಿದೆ. ಹಾಗಾಗಿ ಅಧಿಕಾರಿಗಳು ತಮಗೆ ವಹಿಸಿದ ಕರ್ತವ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.

ಕಂಪ್ಲಿ ಉತ್ಸವದ ಅಂಗವಾಗಿ ಫೆ.11 ರಂದು ಸಂಜೆ ಕಂಪ್ಲಿ ಕೋಟೆ ಪಂಪಾಪತಿ ದೇವಸ್ಥಾನದಿಂದ ವಿವಿಧ ಸಾಂಸ್ಕೃತಿಕ ಕಲಾತಂಡಗಳ ಭವ್ಯ ಮೆರವಣಿಗೆ ನಡೆಯಲಿದ್ದು,



ಸೋಮಪ್ಪ ಕೆರೆ ಆವರಣ ತಲುಪಿದ ಬಳಿಕ ವಾರಣಾಸಿ ಅರ್ಚಕರಿಂದ 'ತುಂಗಾರತಿ' ನಡೆಯಲಿದೆ. ಬಳಿಕ ಪಟ್ಟಣದ ಸುಂದರಿ ಸಕ್ಕರೆ ಕಾರ್ಖಾನೆಯ ಮೈದಾನದಲ್ಲಿ ಅಂದು ಸಂಜೆ ಸ್ಥಳೀಯ ಕಲಾವಿದರಿಂದ ಸಂಗೀತ ಗಾಯನ, ಬಯಲಾಟ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಬೇಕಾದ ಎಲ್ಲಾ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.ಫೆ.12 ರಂದು ಸಂಜೆ 'ಕಂಪ್ಲಿ ಉತ್ಸವ'ದ ಉದ್ಘಾಟನಾ ಕಾರ್ಯಕ್ರಮ ಜರುಗಲಿದೆ. ಬಳಿಕ ಖ್ಯಾತ ಗಾಯಕ ಚಂದನ್ ಶೆಟ್ಟಿ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಕಲಾವಿದರಿಗೆ ತಂಗಲು ವ್ಯವಸ್ಥೆ ಮಾಡಬೇಕು. ವೇದಿಕೆ ನಿರ್ಮಾಣ, ಸ್ವಚ್ಛತಾ ಕಾರ್ಯ, ಬೆಳಕು ವ್ಯವಸ್ಥೆ, ಕಲಾವಿದರ ಆಯ್ಕೆ ಪ್ರಕ್ರಿಯೆ ಸೇರಿದಂತೆ ಎಲ್ಲಾ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಪೊಲೀಸ್ ಬಂದೋಬಸ್ತ್ ನಿಯೋಜನೆ ಮಾಡಬೇಕು. ಹೆಚ್ಚುವರಿ ಸಾರಿಗೆ ವ್ಯವಸ್ಥೆ, ಅಗ್ನಿಶಾಮಕ, ಅಂಬುಲೆನ್ಸ್ ವ್ಯವಸ್ಥೆ ಇರಿಸಿಕೊಳ್ಳಬೇಕು ಎಂದು ಸೂಚಿಸಿದರು.

ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಬೇಕು. ಎರಡು ದಿನಗಳ ಉತ್ಸವದಲ್ಲಿ ಚಿತ್ರಕಲಾ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಮೆಹೆಂದಿ ಸ್ಪರ್ಧೆ, ಅಡುಗೆ ಸ್ಪರ್ಧೆ, ಆಹಾರ ಮೇಳ, ಫಲಪುಷ್ಪ ಪ್ರದರ್ಶನ, ಸಿಂಗರಿಸಿದ ಎತ್ತಿನಗಾಡಿಗಳ ಜಾಥಾ, ಗ್ರಾಮೀಣ ಕ್ರೀಡೆಗಳು ಹಾಗೂ ವಿವಿಧ ಇಲಾಖೆಗಳ ಮಾಹಿತಿ ಒಳಗೊಂಡ ಮಳಿಗೆಗಳು ಇರಲಿದ್ದು, ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಶಿಷ್ಟಾಚಾರದನ್ವಯ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಜನಪ್ರತಿನಿಧಿಗಳನ್ನು ಆಹ್ವಾನಿಸಬೇಕು. ಉತ್ಸವಗಳು ಜನೋತ್ಸವವಾಗಲು, ಸಾರ್ವಜನಿಕರು ಸಹ ಭಾಗವಹಿಸಿ ಯಶಸ್ವಿಯಾಗಿಸಲು ಸಾಕಷ್ಟು ಪ್ರಚಾರ ಕೈಗೊಳ್ಳಬೇಕು ಎಂದು ತಿಳಿಸಿದರು.

**ಫೆ.15 ಮತ್ತು 16 ರಂದು ಕುರುಗೋಡು ಉತ್ಸವ:**

ಅದೇ ರೀತಿಯಾಗಿ ಫೆ.15, 16 ರಂದು ಕುರುಗೋಡು ಉತ್ಸವವನ್ನು ಸಹ ಆಯೋಜಿಸಲಾಗಿದೆ. ಫೆ.15 ರಂದು ಸಂಜೆ ಜಾನಪದ ಕಲಾತಂಡಗಳಿಂದ ಭವ್ಯ ಮೆರವಣಿಗೆ, ಬಳಿಕ ತುಂಗಾರತಿ ನಡೆಯಲಿದೆ. ಫೆ.16 ರಂದು ಉತ್ಸವದ ಉದ್ಘಾಟನೆ ನೆರವೇರಲಿದೆ.ಅಧಿಕಾರಿಗಳಿಗೆ ಈಗಾಗಲೇ ತಮಗೆ ವಹಿಸಿದ ಕೆಲಸಗಳನ್ನು ಯಥಾವತ್ತಾಗಿ ಇಲ್ಲಿಯೂ ಸಹ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಕಂಪ್ಲಿ ತಹಶೀಲ್ದಾರ ಜೂಗಲ ಮಂಜುನಾಯಕ, ಕುರುಗೋಡು ತಹಶೀಲ್ದಾರ ನರಸಪ್ಪ, ತೋರಣಗಲ್ಲು ಡಿವೈಎಸ್‌ಪಿ ಪ್ರಸಾದ್ ಗೋಖಲೆ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಪುರಸಭೆ ಅಧಿಕಾರಿಗಳು, ತಾಪಂ ಇಒಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪಾರ್ಶ್ವವಾಯು ವಿಶೇಷ ತಜ್ಞ ಡಾ.ಸಫಲ್ ಶೆಟ್ಟಿ ಭೇಟಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಪಾರ್ಶ್ವವಾಯು ಕಾಯಿಲೆಯ ವಿಶೇಷತಜ್ಞಡಾ.ಸಫಲ್ ಎಸ್.ಶೆಟ್ಟಿ ಅವರು ನಗರದ ಬಿಕೆಎಸ್ ಆಸ್ಪತ್ರೆಗೆ ನಾಡಿದ್ದು ಭೇಟಿ ನೀಡಿ ಸಂಬಂಧಿತ ರೋಗಿಗಳ ಪರೀಕ್ಷೆ ಮಾಡಿ ಚಿಕಿತ್ಸೆ ನೀಡಲಿದ್ದಾರೆ.

ಮೂಲತಃ ಕುಂದಾಪುರದ ಇವರು ಮಂಗಳೂರಿನ ನಿಮಾನ್ಸ್ ನಲ್ಲಿ ನ್ಯೂರಾಲಜಿ ( ನರ ಸಂಬಂಧಿತ) ಯಲ್ಲಿ ಎಂ.ಡಿ.ಪದವಿ ಪಡೆದಿದ್ದಾರೆ.

ಇಂಟರ್ ವೆನ್ಸನ್ ನ್ಯೂರಾಲಜಿ ಅಂಡ್ ಸ್ಟ್ರೋಕ್ ಸ್ಪೆಷಾಲಿಷ್ಟ್ ಆಗಿರುವ ಇವರು ಇಂಟರ್ ವೆನ್ಸನ್ ಪೇನ್ ಮ್ಯಾನೇಜ್ ಮೆಂಟ್ ನಲ್ಲೂ ವಿಶೇಷ ತಜ್ಞರಾಗಿದ್ದಾರೆ.

ಕಳೆದ ಹಲವು ವರ್ಷಗಳಿಂದ ಇವರು ನೀಡಿದ ಚಿಕಿತ್ಸೆಯಿಂದ ನೂರಾರು ಜನ ಪಾರ್ಶ್ವವಾಯು ಪೀಡಿತರು ಗುಣಮುಖರಾಗಿದ್ದು. ಸಧ್ಯ ಬೆಂಗಳೂರಿನ ಮಹದೇವಪುರದಲ್ಲಿರುವ ಕೃಷ್ಣ ಇನ್ಸಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇವರು ಇನ್ನು ಮುಂದೆ ಪ್ರತಿ ತಿಂಗಳ ಎರಡನೇ ಭಾನುವಾರದಂದು ನಗರದ ಬಿ.ಕೆ.ಎಸ್ ಆಸ್ಪತ್ರೆಗೆ ಭೇಟಿ ನೀಡಲಿದ್ದಾರೆ. ಪಾರ್ಶ್ವವಾಯು ಕಾಯಿಲೆಗೆ ಪ್ರಥಮವಾಗಿ ಬಳ್ಳಾರಿಯಲ್ಲಿ ಇಂತಹ ತಜ್ಞರಿಂದ ಪರೀಕ್ಷೆ ಮತ್ತು ಚಿಕಿತ್ಸೆ ನೀಡಲಿದ್ದಾರಂತೆ. ಹೃದಯಾಘಾತಕ್ಕೆ ಸ್ಟಂಟ್ ಅಳವಡಿಸುವ ರೀತಿ ಇವರು ಪಾರ್ಶ್ವವಾಯು ( ಸ್ಟ್ರೋಕ್) ಗೆ ಸ್ಟಂಟ್ ಅಳವಡಿಸಿ ತಕ್ಷಣ ರೋಗಿಯನ್ನು ಗುಣಮುಖರಾಗಿ ಮಾಡಲಿದ್ದಾರಂತೆ. ಬೆಂಗಳೂರಿಗಿಂತ ಕಡಿಮೆ ವೆಚ್ಚದಲ್ಲಿ ಬಳ್ಳಾರಿಯಲ್ಲಿ ಇವರು ಚಿಕಿತ್ಸೆ ನೀಡಲಿದ್ದಾರಂತೆ.

ತಲೆನೋವು, ಬೆನ್ನುನೋವು, ಸ್ಟ್ರೋಕ್, ಕೈಕಾಲಿನ ನರದ ಸಮಸ್ಯೆ, ಕೈ.ಕಾಲಿನ ಸ್ಪರ್ಶಜ್ಞಾನದ ಸಮಸ್ಯೆ, ಅಪಸ್ಮಾರ, ನಡೆದಾಡುವ ಸಮಸ್ಯೆ ಸೇರಿದಂತೆ ನರ ಸಂಬಂಧಿತ ಕಾಯಿಲೆಯ ರೋಗಿಗಳು ಚಿಕಿತ್ಸೆ ಪಡೆಯಬಹುದು.

## ಉಮ ಇ ಬೈಕ್ಸ್ ಷೋರಂ ಆರಂಭ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಪರಿಸರಸ್ನೇಹಿಯಾದ,ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ಬಜಾಜ್ ಫೈನಾನ್ಸ್ ಸೌಲಭ್ಯ ಹೊಂದಿರುವ ಎಲೆಕ್ಟ್ರಿಕಲ್ ಬೈಕ್ ಗಳ ಉಮ ಇ ಬೈಕ್ ಷೋರಂ ಇಂದು ನಗರದ ಬೆಂಗಳೂರು ರಸ್ತೆಯ ರಾಯದುರ್ಗ ಹಳೇ ಬಸ್ ನಿಲ್ದಾಣದ ಬಳಿ ಆರಂಭಗೊಂಡಿದೆ.

ಉಮಾ ಗಾರ್ಮೆಂಟ್ಸ್ ಗ್ರೂಪ್ ನಿಂದ ತೆರೆಯಲಾಗಿರುವ ಈ ಷೋರೂಂ ಉದ್ಘಾಟನೆಯನ್ನು ಕಲ್ಯಾಟ ಮಠದ ಶ್ರೀಗಳ ಮಾತೋಶ್ರೀ ಅವರು ನೆರವೇರಿಸಿದರು.

ಈ ವೇಳೆ ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ,ಕಾವೇರಿ ಹ್ಯಾಂಡ್ ಲೂಮ್ಸ್ ನ ಮಾಜಿ ಅಧ್ಯಕ್ಷ ಎನ್.

ವಿರೂಪಾಕ್ಷಪ್ಪ, ಷೋರೂಂ ಮಾಲೀಕರಾದ ಡಿ.ಶಿವಪ್ಪ ಮತ್ತವರ ಕುಟುಂಬದ ಸದಸ್ಯರು ಇದ್ದರು.

## ಶ್ರೀರಾಮ ದೇವಸ್ಥಾನ ಅಭಿವೃದ್ಧಿಗಾಗಿ ಭೂಮಿ ಪೂಜೆ : ನಾರಾ ಭರತ್ ರೆಡ್ಡಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 8ರ ಶ್ರೀರಾಮ ದೇವಸ್ಥಾನದ ಅಭಿವೃದ್ಧಿ ಹಾಗೂ ಅಂಗನವಾಡಿ ಕೇಂದ್ರ 2, 3ರ ನಿರ್ಮಾಣ ಕಾಮಗಾರಿಗಳಿಗಾಗಿ ಶಾಸಕ ನಾರಾ ಭರತ್ ರೆಡ್ಡಿಯವರು ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭ ಪಾಲಿಕೆಯ ಸದಸ್ಯ ರಾಮಾಂಜನೇಯಲು, ಕಾಂಗ್ರೆಸ್ ಮುಖಂಡರಾದ ಡಿ.ಸೂರಿ, ಪರಶುರಾಮುಡು, ಥಿಯೇಟರ್ ಶಿವು, ಸ್ಥಳೀಯ ಮುಖಂಡರಾದ ವೆಂಕಟೇಶಲು, ಆಂಜನೇಯಲು, ಫಕ್ಕೀರಪ್ಪ, ಜಿ.ಕೆ.ಸ್ವಾಮಿ, ಕೇಶವಲು, ಸನತಕುಮಾರ್ ಸೇರಿದಂತೆ ಹಲವರು ಹಾಜರಿದ್ದರು.

## ಗ್ರಾ.ಪಂಗಳಿಗೆ ಕೇಂದ್ರ್ರದ10175 ಕೋಟಿ ರೂ ಅನುದಾನ ಬಾಕಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕರ್ನಾಟಕ ರಾಜ್ಯದ 6 ಸಾವಿರ ಗ್ರಾಮ ಪಂಚಾಯ್ತಿ ಗಳಿಗೆ ಕೇಂದ್ರ ಸರ್ಕಾರ10175 ಕೋಟಿ ಅನುದಾನ ನೀಡಬೇಕಾಗಿರುವುದು ಬಾಕಿ ಯಿದ್ದು. ಕೂಡಲೇ ಬಿಡುಗಡೆ ಮಾಡಬೇಕು ಎಂದು ರಾಜ್ಯ ಸಭಾ ಸದಸ್ಯ ಡಾ.ಸೈಯದ್ ನಾಸಿರ್ ಹುಸೇನ್ ಆಗ್ರಹಿಸಿದ್ದಾರೆ.

ಅವರು ಮೊನ್ನೆ ಶೂನ್ಯ ವೇಳೆ ರಾಜ್ಯಸಭೆಯಲ್ಲಿ ಮಾತನಾಡಿ, 'ಹಣಕಾಸು ಆಯೋಗದ ಎಲ್ಲ ಅರ್ಹತೆಗಳನ್ನು ರಾಜ್ಯ ಸರ್ಕಾರ ಪೂರೈಸಿದ್ದರೂ,

15ನೇ ಹಣಕಾಸು ಆಯೋಗದ ಅಡಿಯಲ್ಲಿ 6000 ಗ್ರಾಮಗಳಿಗೆ 2133 ಕೋಟಿ ರು. ಅನುದಾನವನ್ನು ಕೇಂದ್ರ ಇನ್ನು ಬಿಡುಗಡೆ ಮಾಡಿಲ್ಲ. ಇದರಿಂದಾಗಿ ಮೂಲಸೌಕರ್ಯಗಳಿಗೆ ತಡೆಯಾಗುತ್ತಿದೆ ಎಂದಿದ್ದಾರೆ.

ಮೊದಲ ಹಂತದ 1,092 ಕೋಟಿಯ ಅನುದಾನವೂ ಬಿಡುಗಡೆ ಆಗಿಲ್ಲ. ನಿಧಿಗಳನ್ನು ನಿರಂತರವಾಗಿ ತಡೆಹಿಡಿಯುವುದು ನ್ಯಾಯಸಮ್ಮತವಲ್ಲದೆ, ಗ್ರಾಮೀಣ ಆಡಳಿತಕ್ಕೆ ತೀವ ಹಾನಿಯನ್ನು ಉಂಟುಮಾಡುತ್ತಿದೆ. ಇದ–ರಿಂದ ಸ್ವಚ್ಛತಾ ಕಾರ್ಮಿಕರು ಸೇರಿದಂತೆ ಅಗತ್ಯ ಸಿಬ್ಬಂದಿಗಳ ವೇತನ ಪಾವತಿಸಲು ಪಂಚಾಯತಿಗಳಿಗೆ ಸಾಧ್ಯವಾಗುತ್ತಿಲ್ಲ. ಕುಡಿಯುವ ನೀರು ವ್ಯವಸ್ಥೆ, ಒಳಚರಂಡಿ, ಸ್ವಚ್ಛತೆ ಮತ್ತು ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲ. ಹಲವಾರು ಪಂಚಾಯತಿಗಳ ಖಾತೆಗಳಲ್ಲಿ ಮೂಲಭೂತ ವೆಚ್ಚಗಳನ್ನು ಸಹ ಭರಿಸಲು ಹಣವಿಲ್ಲದ ಸ್ಥಿತಿ ಉಂಟಾಗಿದೆ.

15ನೇ ಹಣಕಾಸು ಆಯೋಗವನ್ನು ವಿಶೇಷವಾಗಿ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಮತ್ತು ಗ್ರಾಮ ಪಂಚಾಯತಿಗಳಿಗೆ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವ ಉದ್ದೇಶದಿಂದ ನೇಮಿಸಲಾಗಿತ್ತು. ಇದಲ್ಲದೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕರ್ನಾಟಕಕ್ಕೆ 1,066 ಕೋಟಿಗಳು ಹಾಗೂ ಜಲ ಜೀವನ್ ಮಿಷನ್ ಯೋಜನೆಯ ಅಡಿಯಲ್ಲಿ 6,976 ಕೋಟಿಗಳು ಬಾಕಿಯಿದೆ.

ಆದ್ದರಿಂದ, 15 ನೇ ಹಣಕಾಸು ಆಯೋಗ ಮತ್ತು ಇತರ ಯೋಜನೆಗಳ ಅಡಿಯಲ್ಲಿ ಕರ್ನಾಟಕದ ಗ್ರಾಮ ಪಂಚಾಯಿತಿಗಳಿಗೆ ಬಾಕಿ ಇರುವ 10175 ಕೋಟಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

## ಆಂಜನೇಯ ದೇವಸ್ಥಾನದಲ್ಲಿ ಮಾಂಸ ಎಸೆದ ಪ್ರಕರಣ ತನಿಖೆಗೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದಲ್ಲಿನ ಹೊಸಪೇಟ್ ರಸ್ತೆಯಲ್ಲಿ ಇರುವ ನಾಗಲಕೆರೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಮಾಂಸ ಎಸೆದಿರುವ ಘಟನೆ ತೀವ್ರ ಚರ್ಚೆಗೆ ಕಾರಣವಾಗಿದೆ. ಪ್ರಕರಣ ಸಂಬಂಧ ದೇವಾಲಯದ ಅರ್ಚಕರ ಮೂಲಕ ಪೊಲೀಸ್ ಠಾಣೆಗೆ ದೂರು ಸಲ್ಲಿಸಲು ನಿರ್ಧರಿಸಲಾಗಿದೆ.

ಘಟನೆಯ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ಹಾಗೂ ಹಿಂದೂಪರ ಸಂಘಟನೆಗಳ ಮುಖಂಡರು, ಇದು ಧಾರ್ಮಿಕ ಭಾವನೆಗಳಿಗೆ ಧಕ್ಕೆ



ತರುವ ಕೃತ್ಯವಾಗಿದ್ದು, ಪಾರದರ್ಶಕ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ತಪ್ಪಿತಸ್ಥರನ್ನು ಗುರುತಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಇನ್ನು ಸ್ಥಳೀಯ ನಿವಾಸಿಗಳು, "ನಮ್ಮ ಏರಿಯಾದ ದೇವಸ್ಥಾನವನ್ನು ನಾವು ನೋಡಿಕೊಳ್ಳುತ್ತೇವೆ" ಎಂದು ಹೇಳುತ್ತಾ, ಅನಗತ್ಯ ಗೊಂದಲ ಸೃಷ್ಟಿಸಬಾರದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಘಟನೆ ಹಿನ್ನೆಲೆ ದೇವಸ್ಥಾನದ ಬಳಿ ಜನರು ಗುಂಪಾಗಿ ಸೇರಿ ಪರ ವಿರೋಧ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವ ದೃಶ್ಯ ಕಂಡುಬಂದಿದೆ.

ಶಾಂತಿ ಕಾಪಾಡುವ ದೃಷ್ಟಿಯಿಂದ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದು, ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಇತ್ತೀಚಿಗಷ್ಟೇ ದೇವಸ್ಥಾನದ ಸಮೀಪದಲ್ಲಿ 'ಪಿಸ್ತಾ ಹೌಸ್' ಎಂಬ ನಾನ್ ವೆಜ್ ಹೋಟೆಲ್ ಆರಂಭವಾಗಿರುವುದು ಸಂಶಯಕ್ಕೆ ಕಾರಣವಾಗಿದೆ. ಅಲ್ಲಿಂದಲೇ ಪ್ರಾಣಿಗಳು ಮಾಂಸವನ್ನು ಎಳೆದುಕೊಂಡು ಬಂದಿರಬಹುದೇ ಎಂಬ ಅನುಮಾನವೂ ವ್ಯಕ್ತವಾಗುತ್ತಿದೆ.

ಆದರೆ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು ಅವರು, "ಇದು ಕಿಡಿಗೇಡಿಗಳ ಪೂರ್ವನಿಯೋಜಿತ ಕೃತ್ಯವಾಗಿರುವ ಸಾಧ್ಯತೆ ಹೆಚ್ಚಿದೆ" ಎಂದು ಹೇಳಿದ್ದು, ಸಮಗ್ರ ತನಿಖೆಗೆ ಒತ್ತಾಯಿಸಿದ್ದಾರೆ.

ಘಟನೆಯ ಕುರಿತು ಪೊಲೀಸರು ಪರಿಶೀಲನೆ ಮುಂದುವರೆಸಿದ್ದು, ಸಿಸಿಟಿವಿ ದೃಶ್ಯಾವಳಿ ಸೇರಿದಂತೆ ಎಲ್ಲಾ ಅಂಶಗಳನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ.

## ಸ್ವಾಮಿ ವಿವೇಕಾನಂದರ ಆದರ್ಶ ಯುವ ಪೀಳಿಗೆಗೆ ಮಾದರಿ



• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ::**

ತಾಲ್ಲೂಕಿನ ಮುಕ್ಕಲ ಗ್ರಾಮದ ಶ್ರೀ ಅಂಬೇಡ್ಕರ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಸ್ವಾಮಿ ವಿವೇಕಾನಂದರ 164ನೇ ಜನ್ಮದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಗ್ರಾಮದ ಶ್ರೀ ಜಟಿಂಗೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿಯವರು ಆಯೋಜಿಸಿದ್ದರು.

ಶಾಲಾ ಮಕ್ಕಳಿಗಾಗಿ ಶ್ರೀ ಸ್ವಾಮಿ ವಿವೇಕಾನಂದರ ಕುರಿತು ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಾಯಿ ಸಮಿತಿಯ ಅಧ್ಯಕ್ಷ ಲಿಂಗರಡ್ಡಿ ನಡವಿನಮನಿ ಮಾತನಾಡಿ ಸ್ವಾಮಿ ವಿವೇಕಾನಂದರು ಗುರುವಿನ ಹುಡುಕಾಟದಲ್ಲಿ ದೇವರನ್ನು ಕಂಡವರು. ಭಾರತದ ಸ್ವಾತಂತ್ರ್ಯಕ್ಕಾಗಿ ಯುವಕರಿಗೆ ತಮ್ಮ ಸಿಂಹಗರ್ಜನೆಯಂತಹ ಜ್ಞಾನವನ್ನು ನೀಡಿದ ಮಹಾನ ಚಿಂತಕರಾಗಿದ್ದರು ಎಂದರು.

ದೇವಸ್ಥಾನ ಟ್ರಸ್ಟ್ ಕಮಿಟಿಯ ಕಾರ್ಯದರ್ಶಿಯಾದ ಸುಬ್ಬಣ್ಣ ಎಚ್. ಸುಬ್ಬಣ್ಣವರ ಅವರು ಕಾರ್ಯಕ್ರಮದ ಉದ್ದೇಶ ಹಾಗೂ ನಿಯೋಜನೆ ಕುರಿತು ಮಾತನಾಡಿದರು.

ಶಾಲೆಯ ಮುಖ್ಯೋಪಾಧ್ಯಾಯ ಆರ್.ಹೆಚ್.ಕುಂದರಗಿ ,ತಾಲ್ಲೂಕಾ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಲಿಂಗ ಒಡೆಯರ ,ಪ್ರಕಾಶ ಕುಂಬಾರ ನಿರೂಪಿಸಿದರು. ಪ್ರಭುಲಿಂಗ ರಂಗಾಪುರ ,ಗ್ರಾಮದ ಹಿರಿಯರು, ಪಾಲಕರು, ಯುವಕರು, ಶಿಕ್ಷಕ, ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ಇದ್ದರು. ವಿದ್ಯಾರ್ಥಿಗಳು ಉತ್ಸಾಹದಿಂದ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರಬಂಧ ಸ್ಪರ್ಧೆ ವಿಜೇತರು: ಯಲ್ಲಮ್ಮ ಅವ್ವಣ್ಣವರ್, ಶೈಲಾ ಗ್ಯಾಣಪ್ಪನವರ, ಪ್ರತೀಕ್ಷಾ ಗೊವಪ್ಪನವರ

ಭಾಷಣ ಸ್ಪರ್ಧೆ ವಿಜೇತರು: ಅಶ್ವಿನಿ ಹೊರಕೇರಿ, ಈಶ್ವರಿ ಬಡಿಗೇರ, ಸೌಜನ್ಯ ಕಮಡೊಳ್ಳಿ ಬಹುಮಾನ ಪಡೆದರು.

# ಮತದಾರರ ಪಟ್ಟಿ ಪರಿಷ್ಕರಣೆ ಬಳ್ಳಾರಿ ಜಿಲ್ಲೆಯಲ್ಲಿ ಶೇ 74.78 ರಷ್ಟು ಪ್ರಗತಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರದಲ್ಲಿ 2025 ರ ಪ್ರಕಾರ 12 ಲಕ್ಷದ 48 ಸಾವಿರದ 780 ಮತದಾರರಿದ್ದು. ಇವರ ಮ್ಯಾಪಿಂಗ್ ಕಾರ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ನಡೆಯಿತ್ತಿದ್ದು. ಜಿಲ್ಲೆಯಲ್ಲಿ ಈ ವರೆಗೆ ಶೇ 74.78 ರಷ್ಟು ಆಗಿದೆ.

ದೇಶದಲ್ಲಿ ಮತಪಟ್ಟಿಯ ಎಸ್ ಐ ಆರ್ ( ಸ್ಪೆಷಲ್ ಇನ್ಟೆನ್ಸಿವ್ ರಿವಿಷನ್ ) ವಿಶೇಷ ಸಮಗ್ರ ಪರಿಷ್ಕರಣೆ ಹಲವು ರಾಜ್ಯದಲ್ಲಿ ನಡೆಸುತ್ತಿದೆ. ಬರುವ ದಿನಗಳಲ್ಲಿ ಕರ್ನಾಟಕದಲ್ಲೂ ನಡೆಸಲಿದೆ. ಅದಕ್ಕೂ ಮುನ್ನ ಮತಪಟ್ಟಿಯ ಮ್ಯಾಪಿಂಗ್ ಕಾರ್ಯ ಈಗ ರಾಜ್ಯದಲ್ಲಿ ನಡೆಯುತ್ತಿದೆ.

ಅಂದರೆ ಮತದಾರರ ಪಟ್ಟಿಯನ್ನು ಸರಿಪಡಿಸುವ ಪ್ರಕ್ರಿಯೆ ನಡೆದಿದೆ. ಇದರಲ್ಲಿ ಒಂದೇ ಕ್ಷೇತ್ರದಲ್ಲಿ ಎರಡು ಮೂರು ಮತಗಟ್ಟೆಗಳಲ್ಲಿ ಹೆಸರು ಇರುವವರನ್ನು, ಅಲ್ಲದೆ ರಾಜ್ಯದ ಇತರೇ ಕ್ಷೇತ್ರಗಳಲ್ಲಿ ಹೆಸರು ಇರುವವರನ್ನು ಪತ್ತೆಹಚ್ಚಿ ಅಂತವರು ಯಾವ ಕ್ಷೇತ್ರದಲ್ಲಿ ಇರಲು ಬಯಸುತ್ತಾರೆ ಎಂದು ವಿಚಾರಿಸಿ. ಅವರ ಹೆಸರನ್ನು ಒಂದು ಕ್ಷೇತ್ರದಲ್ಲಿ ಮಾತ್ರ ಉಳಿಸಲಾಗುತ್ತಿದೆ. ಅಲ್ಲದೆ ಮದುವೆಗೆ ಮುನ್ನ ತಂದೆ ಮನೆಯಲ್ಲಿದ್ದ ಮಹಿಳೆ ನಂತರ ಗಂಡನ ಮನೆಯ ಮತಗಟ್ಟೆಯಲ್ಲೂ ಹೆಸರು ನೊಂದಾಯೊಸಿಕೊಂಡಿತ್ತಾರೆ ಅಂತರವನ್ನು ಒಂದು ಕಡೆ ಗಂಡನ ಮನೆಯ ಬೂತ್ ನಲ್ಲಿ ಮಾತ್ರ ಇರಿಸಿ ತಂದೆಯ ಮನೆಯ ಮತಗಟ್ಟೆಯಲ್ಲಿ ಇದ್ದುದನ್ನು ತೆಗೆಯಿವುದು. ಹೀಗೆ ಒಂದು ಕುಟುಂಬವನ್ನು ಒಂದು ಕಡೆ–ಯ ಮತಗಟ್ಟೆಯಲ್ಲಿ ಸೇರಿಸುವ, ಪರಿಶೀಲಿದುವ ಕೆಲಸ ಮ್ಯಾಪಿಂಗ್ ಪ್ರಕ್ರಿಯೆ ನಡೆಸುತ್ತಿದೆ.

ರಾಜ್ಯದಲ್ಲಿ 2002 ರಲ್ಲಿ ನಡೆದ ಮತಪಟ್ಟಿ ಪರಿಷ್ಕರಣೆಯಲ್ಲಿ ಇದ್ದವರನ್ನು ಪರಿಗಣಿಸಿ ಈ ಪ್ರಕ್ರಿಯೆ ನಡೆದಿದೆ. 2002 ರ ಮತಪಟ್ಟಿಯಲ್ಲಿ ಇಲ್ಲದವರು ನಂತರ ಸೇರಿದ್ದರೆ ಅವರ ಕುಟುಂಬದ ಮೂಲದ ದಾಖಲೆಯೊಂದಿಗೆ ತಾಳೆ ನೋಡಲಾಗುತ್ತದೆ.

ಹೀಗೆ ಒಂದೇ ಕ್ಷೇತ್ರದಲ್ಲಿ ಮತ್ತು ಇತರೇ ಕ್ಷೇತ್ರದಲ್ಲಿ ಜಿಲ್ಲೆಯ 5 ವಿಧಾನ ಸಭಾ ಕ್ಷೇತ್ರದಲ್ಲಿ 31403 ಜನರು ಇರುವುದನ್ನು ಪತ್ತೆಹಚ್ಚಿದ್ದು ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.

ಈ ಪ್ರಕ್ರಿಯೆ ಮುಗಿದ ಮೇಲೆ ಚುನಾವಣಾ ಆಯೋಗದ ನಿರ್ದೇಶನ ಬಂದಾಗ ಎಸ್ ಐ ಆರ್ ಪ್ರಕ್ರಿಯೆ ನಡೆಯಲಿದೆ. ಆಗ ಸತ್ತಿರುವ, ಭಾರತೀಯ ನಾಗರೀಕರಲ್ಲದವರ ಹೆಸರನ್ನು ಪತಪಟ್ಟಿಯಿಂದ ಕೈ ಬಿಡಲಿದೆ. ಹೀಗೆ ಕೈ ಬಿಡುವ ಮುನ್ನ ಸಂಬಂಧಿಸಿದ ಮತದಾರರಿಗೆ ನೋಟೀಸ್ ನೀಡಿ ಅವರ ಹಕ್ಕಿನ ಬಗ್ಗೆ ಪ್ರಶ್ನಿಸಲಾಗುತ್ತದೆ. ಭಾರತೀಯ ನಾಗರೀಕರೆಂದು ಆಯೋಗ ಹೇಳಿರುವ 12 ದಾಖಲೆಗಳನ್ನು ಒದಗಿಸದರೆ ಮತಪಟ್ಟಿಯಲ್ಲಿ ಹೆಸರನ್ನು ಹಾಗೇ ಉಳಿಸಲಿದೆ.

ಬಾಂಗ್ಲದವರು:

ಬಿಜೆಪಿಯ ನಾಯಕ, ಮಾಜಿ ಸಚಿವ ಬಿ.ಶ್ರೀರಾಮುಲು ಅವರು ನಗರದ ಕೌಲ್ ಬಜಾರ್ ಪ್ರದೇಶದಲ್ಲಿ ಹತ್ತು ಸಾವಿರ ಅಕ್ರಮ ಬಾಂಗ್ಲಾ ವಲಸಿಗರು ಇದ್ದಾರೆಂದು ಹೇಳಿದ್ದರು. ಎಸ್ ಐ ಆರ್ ನಡೆದರೆ ಈ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯಲಿದೆ.

ಅಧಿಕಾರಿಗಳ ಮೂಲದ ಪ್ರಕಾರ ಬಳ್ಳಾರಿಯಲ್ಲಿ ಬಾಂಗ್ಲಾ ವಲಸಿಗರು ಇದ್ದಾರೆ ಆದರೆ ಶ್ರೀರಾಮುಲು ಹೇಳಿದಷ್ಟಿಲ್ಲ. 2002 ರ ಮತಪಟ್ಟಿಯಲ್ಲಿ ಅವರು ಹೆಸರು ಹೊಂದಿದ್ದರೆ ಈಗ ತೆಗೆಯಲು ಬರಲ್ಲ. ಹೊಸದಾಗಿ ಬಂದು ನಕಲಿ ದಾಖಲೆ ಮೂಲಕ ಸೇರಿದ್ದರೆ ಯಾವುದೇ ಮುಲಾಜಿಲ್ಲದೆ ಅಂತಹವರನ್ನು ತೆಗೆಯಲಿದೆನ್ನುತ್ತಾರೆ.

# ಇಂದು ನಾಳೆ ಕಮತಪುರ ಉತ್ಸವ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಿಲ್ಲೆಯ ಹುನಗುಂದ ತಾಲೂಕಿನ ಸುಕ್ಷೇತ್ರ ಕಮತಗಿ ಪಟ್ಟಣದ ಹೊಳೆ ಹುಚ್ಚೇಶ್ವರ ಸಂಸ್ಥಾನ ಮಠದ ಹುಚ್ಚೇಶ್ವರ ಜಾತ್ರಾ ಮಹೋತ್ಸವದ ಕಮತಪುರ ಉತ್ಸವವು ಫೆ. 7 ಮತ್ತು 8ರಂದು ನಡೆಯಲಿದೆ ಎಂದು ಹೊಳೆ ಹುಚ್ಚೇಶ್ವರ ಸಂಸ್ಥಾನ ಮಠದ ಹುಚ್ಚೇಶ್ವರ ಸ್ವಾಮೀಜಿ ಹೇಳಿದರು. . ಕಮತಗಿ ಶ್ರೀಮಠದಲ್ಲಿ ಕಮತಪುರ ಉತ್ಸವದ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿ ಮಾಹಿತಿ ನೀಡಿದ ಅವರು ಫೆ. 7ರಂದು ಬೆಳಿಗ್ಗೆ 5 ಗಂಟೆಗೆ ಬೆಳಗಿನ ಹುಚ್ಚಯ್ಯ ಲಘು ರಥೋತ್ಸವ ನಡೆಯುವುದು. 9.30 ಕ್ಕೆ ಹುಚ್ಚೇಶ್ವರ ದಾಸೋಹ ಭವನವನ್ನು ನಿಂಬಾಳ ವಿರಕ್ತಮಠದ ಜಡೆಯ ಶಾಂತಲಿಂಗೇಶ್ವರ ಸ್ವಾಮೀಜಿ ಉದ್ಘಾಟಿಸುವರು. ನಂತರ ಜಾನಪದ ಸಂಜೆ, 5 ಗಂಟೆಗೆ ನಾಡಿನ ವಿವಿಧ ಮಠಾಧೀಶರ ಸಮ್ಮುಖದಲ್ಲಿ ಬಂಗಾರದ ಕಳಸದ ಮಹಾರಥೋತ್ಸವ ನಡೆಯಲಿದೆ.

ಫೆ 8ರಂದು ಸಂಜೆ 6 ಗಂಟೆಗೆ ಮಹಿಳಾ ಉತ್ಸವ ಹಾಗೂ ಕಮತಪುರ ನಾಡಿನ ಮಹಿಳೆಯರಿಗೆ ಉಡಿತುಂಬುವ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀಗಳು ತಿಳಿಸಿದರು.

ಮಲಕಾಜಪ್ಪ ಲಾಯದಗುಂದಿ, ಗಂಗಪ್ಪ ಭೂತಲ, ಗಿರಿಯಪ್ಪ ಗೋರ್ಕಲ, ಬಿ.ವಿ.ಬೀರಕಬ್ಬಿ, ಎಸ್. ಎಂ ಶೆಟ್ಟರ, ಚೆನ್ನಪ್ಪ ಹಳ್ಳೂರ, ಚೇತನ ಕಡ್ಡಿಮಟ್ಟಿ, ಪ್ರಭುಲಿಂಗಯ್ಯ ಗುರುವಿನಮಠ,ಬಸವಂತಪ್ಪ ಬೆಲ್ಲದ, ಮುತ್ತು ಬೆಲ್ಲದ, ಕಲ್ಲಯ್ಯ ಧಾರವಾಡ, ಲಾಠಿ ಬಯ್ಯಾ ಭಾಗವಹಿಸಿದ್ದರು.

# ಉಸ್ತುವಾರಿ ಕಾರ್ಯದರ್ಶಿಗಳ ಜಿಲ್ಲಾ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

:ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಜಿ.ಪಂ ಆಡಳಿತಾಧಿಕಾರಿಗಳು ಆಗಿರುವ ಮೊಹಮ್ಮದ್ ಮೊಹಸಿನ್ ಅವರು ಫೆಬ್ರವರಿ 9 ರಂದು ಬಾಗಲಕೋಟೆ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಫೆಬ್ರವರಿ 9 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಮತ್ತು ಸಿಇಓ ಜೊತೆ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 3.30 ಗಂಟೆಗೆ ವಿಜಯಪುರಕ್ಕೆ ಪ್ರಯಾಣ ಬೆಳೆಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

# ಕಬ್ಬಿನ ರವದಿಯಿಂದಾಗುವ ಪ್ರಯೋಜನಗಳು

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಒಂದು ಎಕರೆ ಕಬ್ಬಿನಿಂದ 3 ರಿಂದ 4 ಟನ್ ರವದಿ ಸಿಗುತ್ತದೆ. ಇದರಿಂದ ಭೂಮಿಗೆ 33 ಕೆಜಿ ಯೂರಿಯಾ, 31 ಕೆಜಿ ಎಸ್.ಎಸ್.ಪಿ, 33 ಕೆಜಿ ಎಂ.ಓ.ಪಿ ಗೊಬ್ಬರಗಳು ಸಾವಯುವ ರೂಪದಲ್ಲಿ ಪಡೆಯಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ತಿಳಿಸಿದ್ದಾರೆ.

ಕಬ್ಬಿನ ರವದಿಯನ್ನು ಸಾಲುಗಳ ಮಧ್ಯ ಅಥವಾ 2 ಸಾಲುಗಳ ಮಧ್ಯೆ ಹಾಕುವುದು ಹಾಗೂ ಅದನ್ನು ಕೊಳೆಯಲು 100 ಕೆಜಿ ಜಿಪ್ಸಂ, 50 ಕೆಜಿ ಎಸ್.ಎಸ್.ಪಿ ಮತ್ತು 25 ಕೆಜಿ ಎಂ.ಓ.ಪಿ ಗೊಬ್ಬರಗಳನ್ನು ರವದಿಯ ಮೇಲೆ ಹರಡಿ ನೀರು ಹಾಯಿಸಬೇಕು. 4 ರಿಂದ 6 ವಾರಗಳ ನಂತರ ಪ್ರತಿ ಎಕರೆಗೆ ರವದಿ ಕೊಳೆಸುವ ಸೂಕ್ಷ್ಮಾಣು ಜೀವಿಗಳನ್ನು ಬಳಸುವುದು. ಕಬ್ಬು ಕಟಾವಿನ ನಂತರ ಪೆಂಡಿ ಕಟ್ಟುವ ಮಶೀನ್‌ನಿಂದ ಪೆಂಡಿ ಕಟ್ಟಿಸಿ ಬೇರೆ ಕಡೆ ಗೊಬ್ಬರ ತಯಾರಿಕೆ, ಸಾವಯವ ಗೊಬ್ಬರ ತಯಾರಿಕೆ ಮತ್ತು ಇತರ ಪರಿಸರ ಸ್ನೇಹಿ ವಿಧಾನಗಳಲ್ಲಿ ಬಳಸಿ, ರವದಿಯನ್ನು ಭೂಮಿಯಲ್ಲಿ ಬೆರೆಸುವುದರಿಂದ ತೇವಾಂಶ ಸಂರಕ್ಷಣೆ, ಮಣ್ಣಿನ ಆರೋಗ್ಯ ವೃದ್ದಿ ಹಾಗೂ ಇಳುವರಿ ಹೆಚ್ಚಳ ಸಾಧ್ಯವಾಗುತ್ತದೆ.

ಕಬ್ಬಿನ ರವದಿ ಸುಡುವದರಿಂದ ವಾಯುಮಾಲಿನ್ಯ ಹೆಚ್ಚಾಗಿ, ಪರಿಸರ ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದು. ರವದಿ ಸುಡುವುದರಿಂದ ಮಣ್ಣಿನಲ್ಲಿ ಜೀವಾಣುಗಳು ಕಡಿಮೆಯಾಗುವುದರೊಂದಿಗೆ ಬೆಳೆ ಉತ್ಪಾದನೆ ಮೇಲೂ ದುಷ್ಪರಿಣಾಮ ಬೀರುತ್ತದೆ. ಪರಿಸರ ಸಂರಕ್ಷಣೆ ಹಾಗೂ ಭವಿಷ್ಯದ ಕೃಷಿಯನ್ನು ಗಮನದಲ್ಲಿಟ್ಟುಕೊಂಡು ರೈತ ಸಮುದಾಯವು ಸಲಹೆಗಳನ್ನು ಪಾಲಿಸುವಂತೆ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ಫೆ.07 ರಂದು ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ವ್ಯಾಪ್ತಿಯ ಜಿಲ್ಲಾ ಕೋರ್ಟ್ ಸಂಕೀರ್ಣದ ವಿದ್ಯುತ್ ಲೈನಿನ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ ಫೆ.07 ರಂದು ಬೆಳಿಗ್ಗೆ 09 ರಿಂದ ಸಂಜೆ 05 ಗಂಟೆಯವರೆಗೆ

ಎಫ್–6 ವ್ಯಾಪ್ತಿಯ ನಗರದ ತಾಳೂರು ರಸ್ತೆ, ಸ್ನೇಹ ಕಾಲೋನಿ, ಶ್ರೀನಗರ, ರೇಣುಕಾ ನಗರ, ಭಗತ್ ಸಿಂಗ್ ನಗರ, ಕನ್ನಡ ನಗರ, ಮಹಾನಂದಿ ಕೊಟ್ಟಂ, ಪಾರ್ವತಿ ನಗರ, ಎಸ್.ಪಿ.ಸರ್ಕಲ್, ಶಾಸ್ತ್ರೀ ನಗರ, ಬ್ಯಾಂಕ್ ಕಾಲೋನಿ, ಬಸವನಕುಂಟೆ, ಸಿರುಗುಪ್ಪ ರಸ್ತೆ, ರಾಮ ನಗರ, ಅವಂಬಾವಿ, ಜಿಲ್ಲಾ ಕೋರ್ಟ್ ಸಂಕೀರ್ಣ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು,

ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ. 09ರಂದು ಗ್ರಾಹಕರ ಸಂವಾದ ಸಭೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ–01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿಯಲ್ಲಿ ಫೆಬ್ರವರಿ 09ರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಗ್ರಾಹಕರ ಸಂವಾದ ಸಭೆ ಏರ್ಪಡಿಸಲಾಗಿದ್ದು,

ವಿದ್ಯುತ್ ಗ್ರಾಹಕರು ವಿದ್ಯುತ್ ದೂರುಗಳ ಬಗ್ಗೆ ಸಭೆಗೆ ಹಾಜರಾಗಿ ದೂರುಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ

ವಿಭಾಗ–01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಧಾರ್ಮಿಕ ಚಿಂತನ: ನುಡಿ ವೀರಶೈವ ಲಿಂಗಾಯತ ಸಮನ್ವಯತೆಯ ಧರ್ಮ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ವೀರಶೈವ ಲಿಂಗಾಯತ ಧರ್ಮ ಸಮಾನತೆಯನ್ನು ಬೋಧಿಸುವ ಮೂಲಕ ಎಲ್ಲ ಸಮುದಾಯಗಳೊಡನೆ ಸಮನ್ವಯತೆ ಸಾಧಿಸಿ ಶಿಕ್ಷಣ, ಅನ್ನ, ಉದ್ಯೋಗ ನೀಡಿ ಎಲ್ಲರ ಪ್ರಗತಿಗೆ ಕಾರಣವಾಗಿದೆ ಎಂದು ಸವದತ್ತಿಯ ಮೂಲಿಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ನಗರದ ಟೀಕಿನಮಠದ ಮಲ್ಲಿಕಾರ್ಜುನ ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವದ ನಿಮಿತ್ಯ ಚರಂತಿಮಠದ ಆವರಣದಲ್ಲಿ ಶುಕ್ರವಾರ ನಡೆದ ಧರ್ಮತತ್ವ ಚಿಂತನೆ ಸಮಾರಂಭದಲ್ಲಿ ಷಟಸ್ಥಳ ವಿಷಯ ಕುರಿತು ಉಪನ್ಯಾಸ ನೀಡಿ, ಸ್ವತಂತ್ರ ವಿಚಾರಗಳಿಗೆ ಅವಕಾಶ ಕೊಟ್ಟ ಹಾಗೂ ವ್ಯಕ್ತಿಯ ವಿಕಾಸ ಮತ್ತು ಆತ್ಮಾವಲೋಕನಕ್ಕೆ ಸಹಕಾರ ನೀಡಿ ಸಾಮಾಜಿಕ ಮೌಲ್ಯಗಳನ್ನು ಹಾಗೂ ಸರ್ವಧರ್ಮಕ್ಕೂ ಸಾರ್ವತ್ರಿಕವಾದ ತತ್ವಗಳನ್ನು ಹೇಳಿದ ಧರ್ಮ ಇದಾಗಿದೆ ಎಂದರು. ಬೆಳಗಾವಿ ಕಾರಂಜಿಮಠದ ಡಾ. ಶಿವಯೋಗಿ ದೇವರು ಉಪನ್ಯಾಸ ನೀಡಿ, ಪಂಚಾಚಾರಗಳನ್ನು ಅರಿತು ನಡೆಯುವುದು ಭಕ್ತಿಯ ಪಥವಾಗಿದ್ದು ಭಕ್ತಿಯಿಂದ ಮುಕ್ತಿ ಸಾಧ್ಯ. ಪಂಚ ಆಚಾರಗಳಾದ ಲಿಂಗಾಚಾರ, ಸಧಾಚಾರ, ಶಿವಾಚಾರ, ಗಣಾಚಾರ, ಮೃತ್ಯಾಚಾರಗಳನ್ನು ಮೈಗೂಡಿಸಿಕೊಂಡರೆ ಭಕ್ತನಾಗಲು ಯೋಗ್ಯರಾಗುತ್ತಾರೆ ಎಂದು ಹೇಳಿದರು. ನಮ್ಮೊಳಗಿನ ಜ್ಞಾನವೇ ಲಿಂಗವಾಗಿದ್ದು ಅದರೊಳಗೆ ಅಂತರ್ಮುಖಿಯಾಗುವುದು ಲಿಂಗಾಚಾರವಾಗಿದೆ. ಪ್ರಾಮಾಣಿಕ ದುಡಿಮೆ ಮತ್ತು ತನು, ಮನ, ಧನದ ಸಮರ್ಪಣೆ ಸದಾಚಾರವಾಗಿದೆ. ಎಲ್ಲರೂ ನಮ್ಮವರೆನ್ನುವುದು ಶಿವಾಚಾರವಾಗಿದ್ದು ಲಿಂಗಕ್ಕೆ ತೊಂದರೆ ಬಂದಾಗ ಅದರ ತಡೆಯುವುದು, ಧರ್ಮ ರಕ್ಷಣೆ ಮಾಡುವುದು ಗಣಾಚಾರವಾಗಿದೆ. ಎಲ್ಲರೂ ದೊಡ್ಡವರೆನ್ನುವ ಭಾವವನ್ನು ತಳೆಯುವುದು ಮೃತ್ಯಾಚಾರವಾಗಿದ್ದು ಎಲ್ಲ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಶಿವಯೋಗಮಂದಿರ ಸಂಸ್ಥೆಯ ವ್ಯವಸ್ಥಾಪಕ ಡಾ.ಜಿ.ಕೆ ಹಿರೇಮಠ ಅಷ್ಟಾವರಣಗಳ ಕುರಿತು ಉಪನ್ಯಾಸ ನೀಡಿ, ಆಂತರಿಕ ಸದ್ಗುಣಗಳು ಹೊರಹೋಗದಂತೆ ಮತ್ತು ಬಾಹ್ಯ ದುರ್ಗುಣಗಳು ಒಳಗೆ ಬಾರದಂತೆ ತಡೆಯಲು ಇರುವ ಆವರಣಗಳಾಗಿದ್ದು ಭಕ್ತನನ್ನು ಅಥವಾ ಅದ್ಯಾತ್ಮ ಸಾಧಕರನ್ನು ಅಪಾಯಗಳಿಂದ ರಕ್ಷಿಸುವುದೆ ಅಷ್ಟಾವರಣಗಳ ಮೂಲ ಧ್ಯೇಯವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ಮಾಜಿ ಸಚಿವ ಎಸ್.ಆರ್.ಪಾಟೀಲ ಮಾತನಾಡಿ, ಹಸಿದವರಿಗೆ ಅನ್ನ ನೀಡುವುದೇ ನಿಜವಾದ ಧರ್ಮ. ಎಲ್ಲರೂ ಐಕ್ಯತೆಯಿಂದ ಬಾಳಬೇಕು ಎಂದರು.

ಇನ್ನೋರ್ವ ಅತಿಥಿ ಬಿಡಿಸಿಸಿ ಬ್ಯಾಂಕ ಅಧ್ಯಕ್ಷ ಅಜಯಕುಮಾರ ಸರನಾಯಕ ಮಾತನಾಡಿ, ಧರ್ಮದಂತೆ ನಡೆದರೆ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ. ಸೌಹಾರ್ದತೆಯಿಂದ ಬಾಳುವುದೆ ನಿಜವಾದ ಧರ್ಮದ ಅರ್ಥ ಎಂದರು.

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮಿಗಳು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಸಮಾಧಾನ ಚಿತ್ತದಿಂದ ಸಹಕಾರ, ಸದ್ವಿಚಾರ, ಸಂತೃಸುವ ತಾಳ್ಮೆ ಇಟ್ಟುಕೊಂಡು ನಕಾರಾತ್ಮಕ ಆಲೋಚನೆಗಳ ವಿರುದ್ಧ ಸಕಾರಾತ್ಮಕ ಚಿಂತನೆಗಳನ್ನು ಹಿಡಿದು ನಿಲ್ಲುವವರು ಮಠಾಧಿಪತಿಗಳು ಆಗಲು ಸಾಧ್ಯ ಎಂದರು. ದಿವ್ಯ ಸಾನಿಧ್ಯವನ್ನು ಚರಂತಿಮಠದ ಪ್ರಭುಸ್ವಾಮಿಗಳು ವಹಿಸಿದ್ದ, ವೀರಶೈವ ಧರ್ಮ ಕೋಟಿ ದೇವರನ್ನು ಇಷ್ಟಲಿಂಗದಲ್ಲಿ ಅಡಗಿಸಿ ಪೂಜಿಸುವ ವಿಶಿಷ್ಟ ಧರ್ಮವಾಗಿದ್ದು ಸರಳ ಸಿದ್ಧಾಂತ ಮತ್ತು ಮೌಲ್ಯಗಳನ್ನು ಮೈಗೂಡಿಸಿಕೊಂಡಿದೆ, ಶೂನ್ಯವು ಪ್ರಾರಂಭ ಮತ್ತು ಅಂತ್ಯದ ಕೇಂದ್ರವಾದಂತೆ ಭಕ್ತಿ ಮತ್ತು ಮುಕ್ತಿಯ ಕೇಂದ್ರ ಲಿಂಗವಾಗಿದೆ. ದಿನನಿತ್ಯದ ಪೂಜೆ, ಜಪ, ತಪ ಮಂತ್ರ ಪಠಣದಿಂದ ಜ್ಞಾನ ಪ್ರವೃತ್ತಿಯಾಗುತ್ತದೆ, ಷಟ್ ಸ್ಥಲವು ಪ್ರತಿದಿನ ನಡೆಯುವ ಆಚರಣೆಯಾಗಿದ್ದು ಇಷ್ಟಲಿಂಗ ಪೂಜೆಯಿಂದ ಏಕದೇವೋಪಾಸನೆ ಮಾಡುವುದೇ ದೈವಭಕ್ತಿಯಾಗಿದೆ ಎಂದು ಹೇಳಿದರು. ವೇದಿಕೆ ಮೇಲೆ ಗುಳೆದಗುಡ್ಡದ ಒಪ್ಪತ್ತೇಶ್ವರ ಮಹಾಸ್ವಾಮಿಗಳು, ಟೀಕಿನಮಠದ ಮಲ್ಲಿಕಾರ್ಜುನ ದೇಶಿಕರ ಸ್ವಾಮಿಗಳು, ಅನವಾಲದ ಕೈಲಾಸಪತಿ ಸ್ವಾಮಿಗಳು ಸಾನಿದ್ಯ ವಹಿಸಿದ್ದರು. ಚರಪಟ್ಟಾಧಿಕಾರ ಸಮಿತಿ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಜಿ.ಎನ್.ಪಾಟೀಲ, ಮಹೇಶ ಅಥಣಿ, ಆಶೋಕ ಸಜ್ಜನ ಬೇವೂರ, ಗುರುಬಸವ ಸೂಳಿಬಾವಿ, ಮಹಾಂತೇಶ ಶೆಟ್ಟರ, ಬಸವರಾಜ ಭಗವತಿ, ಎ.ಎಸ್.ಪಾವಟೆ, ಮಲ್ಲಕಾರ್ಜುನ ಸಾಸನೂರ, ಚಂದ್ರಶೇಖರ ಶೆಟ್ಟರ ಇದ್ದರು.

## ತಹಶೀಲ್ದಾರ ಕಚೇರಿಗೆ ಡಿಸಿ, ಎಡಿಸಿ ಭೇಟಿ

# ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಪರಿಶೀಲನೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಮುಂಬರುವ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆ ಹಿನ್ನಲೆಯಲ್ಲಿ ಬಾಗಲಕೋಟೆ ತಹಶೀಲ್ದಾರ ಕಚೇರಿಯ ಚುನಾವಣಾ ವಿಭಾಗಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಭೇಟಿ ನೀಡಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಪರಿಶೀಲಿಸಿದರು.

ಭೇಟಿ ನೀಡಿದ ಸಮಯದಲ್ಲಿ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಅವಧಿಯಲ್ಲಿ ಸ್ವೀಕೃತಿಯಾಗಿರುವ ನಮೂನೆ 6, 7 & 8ಕ್ಕೆ ಸಂಬಂಧಿಸಿದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ನಿಗಧಿತ ಅವಧಿಯಲ್ಲಿ ವಿಲೇವಾರಿಗೊಳಿಸಲು ತಿಳಿಸಿದ ಜಿಲ್ಲಾಧಿಕಾರಿಗಳು ಬರುವ ಉಪ ಚುನಾವಣೆಯನ್ನು ಯಶಸ್ವಿಯಾಗಿ ಜರುಗಿಸುವ ನಿಟ್ಟಿನಲ್ಲಿ ಅಗತ್ಯಪೂರ್ವ ಸಿದ್ಧತೆಗಳನ್ನು ಕೈಗೊಳ್ಳುವಂತೆ ತಹಶೀಲ್ದಾರ ವಾಸುದೇವ ಸ್ವಾಮಿ ಅವರಿಗೆ ಸೂಚಿಸಿದರು.

ಮತದಾರರ ಪಟ್ಟಿಯು ಸಂಪೂರ್ಣವಾಗಿ ಪಾರದರ್ಶಕವಾಗಿದ್ದು, ಯಾವುದೇ ಅರ್ಹ ಮತದಾರ ವಂಚಿತರಾಗಬಾರದು. ಈ ಬಗ್ಗೆ ನಿರ್ಲಕ್ಷವಹಿಸದೇ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದರ ಜೊತೆಗೆ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಹಶೀಲ್ದಾರ ಮತ್ತು ಚುನಾವಣಾ ವಿಭಾಗದ ಸಿಬ್ಬಂದಿಗಳಿಗೆ ಸೂಚಿಸಿದರು.

ನಂತರ ಕಛೇರಿಯ ಸಿಬ್ಬಂದಿ ಶಾಖೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ವಿವಿಧ ಶಾಖೆಗಳ ಕಡತಗಳನ್ನು ಪರಿಶೀಲಿಸಿ ಬಾಕಿ ಉಳಿದ ಕಡತಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಸಿಬ್ಬಂಧಿಗಳಿಗೆ ಸೂಚಿಸಿದರು. ಕಛೇರಿಗೆ ಬೇಟಿ ನೀಡುವ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ, ಅವರ ಕುಂದು ಕೊರತೆಗಳನ್ನು ಆಲಿಸಬೇಕು. ಹೊತ್ತು ತಂದ ಸಮಸ್ಯೆಗಳಿಗೆ ಶೀಘ್ರವಾಗಿ ಪರಿಹರಿಸುವ ಕೆಲಸ ವಾಗಬೇಕೆಂದು ತಿಳಿಸಿದರು. ಕಚೇರಿಯಲ್ಲಿ ಸಾರ್ವಜನಿಕರಿಗೆ ಕುಳಿತುಕೊಳ್ಳಲು ಆಸನ ವ್ಯವಸ್ಥೆ ಮತ್ತು ಕಚೇರಿಯ ಒಳಾಂಗಣ ಹಾಗೂ ಹೊರಾಂಗಣದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲು ತಿಳಿಸಿದರು.

ಭೇಟಿ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ತಹಶೀಲ್ದಾರ ಮಹಾದೇವ ಸ್ವಾಮಿ, ಗ್ರೇಡ್–2 ತಹಶೀಲ್ದಾರ ಮಹಾದೇವಪ್ಪಗೌಡ ಬಿರಾದಾರ, ಜಿಲ್ಲಾಧಿಕಾರಿಗಳ ಕಾರ್ಯಾಲಯದ ಚುನಾವಣಾ ಶಿರಸ್ತೇದಾರ ಮಹೇಶ ಪಾಂಡವ ಸೇರಿದಂತೆ ಇತರರು ಇದ್ದರು.

# ಶೇಂಗಾ ಬೆಳೆ : ಕೀಟಗಳ ನಿರ್ವಹಣೆಗೆ ಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಜಿಲ್ಲೆಯಲ್ಲಿ ಶೇಂಗಾ ಬೆಳೆಯು ಒಂದು ಪ್ರಮುಖ ಎಣ್ಣೆಕಾಳು ಬೆಳೆಯಾಗಿದ್ದು, ಹಿಂಗಾರು ಹಂಗಾಮಿನಲ್ಲಿ ಸುಮಾರು 19,747 ಹೆ. ಹಾಗೂ ಬೇಸಿಗೆ ಹಂಗಾಮಿನಲ್ಲಿ ಸುಮಾರು 15,430 ಹೆ.ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಶೇಂಗಾ ಬೆಳೆಯಲ್ಲಿ ಕಾಯಿಗಳ ಸಂಖ್ಯೆ ಕಡಿಮೆಯಾಗುವುದು ಮತ್ತು ಬೀಜಗಳ ಗುಣಮಟ್ಟ ಕಡಿಮೆಯಾಗುವುದನ್ನು ತಡೆಯಲು ಬಾರಂಗಿ ಸಮಯದಲ್ಲಿ ಎಕರೆಗೆ 200 ಕೆ.ಜಿ. ಜಿಪ್ಸಂ ಅನ್ನು ಸಾಲುಗಳ ಮಧ್ಯದಲ್ಲಿ ಎಲೆಯ ಮೇಲೆ ಬೀಳದಂತೆ ಹಾಕಿ ಮಣ್ಣು ಎರಿಸಬೇಕು. ಪ್ರತಿ ಲೀಟರ್ ನೀರಿಗೆ 2 ಗ್ರಾಂ ಯೂರಿಯಾ ದ್ರಾವಣ ಅಥವಾ 2.5 ಮಿ.ಲೀ. ನ್ಯಾನೋ ಡಿ.ಎ.ಪಿ ಅನ್ನು ಸಿಂಪಡಣೆಯನ್ನು ಬೆಳೆಯ 30 ಮತ್ತು 60 ದಿನಗಳ ಹಂತದಲ್ಲಿ ಮಾಡುವುದರಿಂದ ಕಾಯಿ ಅಭಿವೃದ್ಧಿ ಹಾಗೂ ಬೀಜಗಳ ತೂಕ ಹೆಚ್ಚಾಗಲು ಸಹಾಯಕವಾಗುತ್ತದೆ.

ಸುರುಳಿ ಪೂಚಿ :

ಈ ಕೀಟವು ಇಳುವರಿಯಲ್ಲಿ 20–80 ರಷ್ಟು ಹಾನಿಮಾಡುತ್ತದೆ. ಕೀಟವು ಚಿಗುರೆಲೆ ಕೊರೆದು ಸುರಂಗ ಮಾಡಿ ತಿನ್ನುತ್ತದೆ. ಇದರಿಂದ ಬೆಳೆ ಸುಟ್ಟಂತೆ ಕಾಣುತ್ತದೆ. ಇದರ ನಿರ್ವಹಣೆಗಾಗಿ 2 ಮೀ.ಲಿ. ಪ್ರೋಫೆನೋಫಾಸ್ 50 ಇ.ಸಿ ಅಥವಾ 0.12 ಮೀ.ಲೀ. ಸ್ಪೈನೋಸಾಡ್ 45 ಎಸ್.ಸಿ. ಬಳಸುವುದು.

**ಥ್ರಿಪ್ಸ್ :**

ಈ ಕೀಟವು ಎಲೆಯ ರಸವನ್ನು ಹೀರುವುದರಿಂದ ಎಲೆಗಳು ಮುದುಡಿದಂತೆ ಕಾಣುತ್ತದೆ. ಎಲೆಯ ಕೆಳಭಾಗ ಕಂದು ಬಣ್ಣಕ್ಕೆ ತಿರುಗುವುದು ಇದು ಕುಡಿ ಸಾಯುವ ರೋಗವನ್ನು ಸಹ ಹರಡುತ್ತದೆ. ಇದರ ನಿರ್ವಹಣೆಗಾಗಿ ಥೈಮಿಥೋಯೇಟ್ 30 ಇ.ಸಿ, ಪ್ರತಿ ಲೀಟರ್ ನೀರಿಗೆ ಸೇರಿಸಿ ಸಿಂಪರಣೆ ಮಾಡಬೇಕು.

**ಗೊಣ್ಣೆ ಹುಳು :**

ಈ ಹುಳುಗಳು ಬೆಳೆ ಪರಿವರ್ತನೆ ಮಾಡದ ಒಂದೇ ಪ್ರದೇಶದಲ್ಲಿ ಪ್ರತಿ ವರ್ಷ ಬರುವುದು ಸಾಮಾನ್ಯ. ಈ ಹುಳು ಬೇರುಗಳನ್ನು ತಿನ್ನುವುದರಿಂದ ಗಿಡಗಳು ಸಾಯುತ್ತವೆ. ಇದರ ನಿರ್ವಹಣೆಗಾಗಿ ಪ್ರತಿ ಕೀ.ಗ್ರಾಂ. ಬೀಜಗಳಿಗೆ 12 ಮೀ.ಲೀ. ಕ್ಲೋರ್ ಫೈರಿಫಾಸ್ 20 ಇ.ಸಿ. ಅಥವಾ ಕ್ವಿನಾಲ್ ಫಾಸ್ 25 ಇ.ಸಿ ಔಷಧಿಯನ್ನು ಲೇಪಿಸಿ ಬಿತ್ತನೆ ಮಾಡಬೇಕು. ಶೇಂಗಾ ಬೆಳೆಯಲ್ಲಿ ಕೀಟಗಳ ನಿರ್ವಹಣೆಗಾಗಿ ಜಿಲ್ಲೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಕೀಟನಾಶಕಗಳು ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ: ಕಮತಪುರ ಉತ್ಸವ 2026 ಪತ್ರಿಕೆ ಬಿಡುಗಡೆ ಕಾರ್ಯಕ್ರಮ

# ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ 77ನೇ ಜಯಂತಿ; ಸ್ಪರ್ಧೆಗಳ ಆಯೋಜನೆ

ಮಲ್ಲಮ್ಮನುಡಿವಾರ್ತೆ ಕುಕನೂರ:

ರಾಷ್ಟ್ರೀಯ ಭಾವೈಕ್ಯತೆ ಹಾಗೂ ದೇಶದ ಏಕತಾ ಪ್ರಶಸ್ತಿ ಪುರಸ್ಕೃತರಾದ ಲಿಂಗೈಕ್ಯ ಶ್ರೀ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ 77ನೇ ಜಯಂತಿ ಅಂಗವಾಗಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಫೆಬ್ರುವರಿ 12 ಮತ್ತು 13 ರಂದು ಆಯೋಜಿಸಲಾಗಿದೆ.

ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿರುವ ಶ್ರೀ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆಯ ಆವರಣದಲ್ಲಿ ತ್ರಿವಿಧ ದಾಸೋಹಿಗಳು, ಕನ್ನಡ ಕುಲ ಗುರುಗಳು, ಬಸವ ತತ್ವದ ದಂಡನಾಯಕರು, ಭಾರತ ಸರ್ಕಾರದಿಂದ ರಾಷ್ಟ್ರೀಯ ಪುರಸ್ಕೃತರಾದ ಶ್ರೀ ಲಿಂಗೈಕ್ಯ ಡಾ.ಸಿದ್ದಲಿಂಗ ಮಹಾಸ್ವಾಮಿಗಳ 77ನೇ ಜಯಂತಿಯ ಅಂಗವಾಗಿ ಕೈಗಾರಿಕಾ ತರಬೇತಿ ಕೇಂದ್ರದ ವಿದ್ಯುತ್ ಶಿಲ್ಪಿ (ಜಟಜಭಣಡು–ಭಿಚಿಟಿ) ಹಾಗೂ ಜೋಡಣೆ ವೃತ್ತಿಗಳ(ಜಿಣಣಜಡಿ)ತರಬೇತಿದಾರರಿಗೆ ಇದೇ ಫೆಬ್ರುವರಿ 12 ಮತ್ತು 13ರ ಗುರುವಾರ ಮತ್ತು ಶುಕ್ರವಾರದಂದು ವಿವಿಧ ಕ್ರೀಡೆಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿರುತ್ತದೆ.

ಭಾಗವಹಿಸುವ ಕ್ರೀಡಾಪಟುಗಳಿಗೆ ಗ್ರಾಮದ ಉದ್ಯಮಿದಾರರಾದ ಪ್ರವೀಣ್ ಕುಮಾರ್ ಕಿಲೋಮೀಟರ್ ಅವರು ಕ್ರೀಡಾ ಕ್ಯಾಪ್ಟನ್‌ಗಳನ್ನು ವಿತರಿಸುವುದಾಗಿ ಮಕ್ಕಳಲ್ಲಿ ಕ್ರೀಡ ಸ್ಫೂರ್ತಿಯನ್ನು ತುಂಬಿರುತ್ತಾರೆ ಕ್ರೀಡಾಕೂಟಗಳನ್ನು ಯಶಸ್ವಿಗೊಳಿಸುವಂತೆ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಮಂಡಲಗಿರಿ ಗ್ರಾಮದಲ್ಲಿರುವ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾಚಾರ್ಯರಾದ ಸಿ ಎಸ್ ಅಂಗಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ವಿದ್ಯಾರ್ಥಿಗಳಿಂದ ತ್ಯಾಜ್ಯ ವಸ್ತು ನಿರ್ವಹಣಾ ಘಟಕ ವೀಕ್ಷಣೆ




• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು :**

ತಿಮ್ಮಲಾಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆ ಶಿಕ್ಷಕರು ತಮ್ಮ ಶಾಲೆ ಮಕ್ಕಳೊಂದಿಗೆ ಕೊಟ್ಟೂರು ಪಟ್ಟಣದ ಘನ ತ್ಯಾಜ್ಯ ವಸ್ತು ನಿರ್ವಹಣಾ ಘಟಕದ ನಿರ್ವಹಣೆಯ ಕುರಿತು ವೀಕ್ಷಣೆ ಮಾಡುವ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದ ಕುರಿತು ಮುಖ್ಯಾಧಿಕಾರಿಗಳಾದ ಎ.ನಸರುಲ್ಲಾ ಮಾತನಾಡಿ ಕೊಟ್ಟೂರು ಪಟ್ಟಣದ ವ್ಯಾಪ್ತಿಯಲ್ಲಿ ಶೇಖರಣೆಯಾಗುವ ಕಸವನ್ನು ಎಸ್.ಡಬ್ಲ್ಯೂ.ಎಂ ಘಟಕದಲ್ಲಿ ಹಸಿ ಕಸ, ಒಣಕಸ, ಹಾಕಿಕಾರಕ ಕಸವವನ್ನು ವಿಂಗಡಣೆ ಮಾಡಲಾಗುತ್ತಿದ್ದು, ಹಸಿ ಕಸದಿಂದ ಎರೆಹುಳು ಗೊಬ್ಬರವನ್ನು ತಯಾರಿಸಲಾಗುತ್ತಿರುತ್ತದೆ.

ಮನೆಮನೆಗಳಲ್ಲಿ ಶೇಖರಣೆಯಾಗುವ ಕಸವನ್ನು ಮೂಲದಲ್ಲಿಯೇ ವಿಂಗಣೆ ಮಾಡಿ ತ್ಯಾಜ್ಯ ವಿಲೇವಾರಿ ವಾಹನಗಳಿಗೆ ನೀಡಲು ತಿಳಿಸಿದರು ಹಾಗೂ ಸರ್ಕಾರಿ ಆದೇಶಗಳು, ಎನ್.ಜಿ.ಟಿ ನಿಯಮಾವಳಿಗಳು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರ ಆದೇಶದ ಬಗ್ಗೆ ಮತ್ತು ಕಸದಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸಿ ತಾವುಗಳು ಸಹ ತಮ್ಮ ಮನೆಗಳಲ್ಲಿ, ಗ್ರಾಮ , ಪಟ್ಟಣಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ತಿಳಿಸಿದರು.

ಕಸ ವಿಲೇವಾರಿ ಘಟಕ ವೀಕ್ಷಿಸಿ ಮಾಹಿತಿ ಪಡೆದು ಶಾಲೆ ವಿದ್ಯಾರ್ಥಿಗಳು, ಶಿಕ್ಷಕರು ಮುಖ್ಯಾಧಿಕಾರಿಗಳಿಗೆ, ಪಟ್ಟಣ ಪಂಚಾಯಿತಿ ಪೌರಕಾರ್ಮಿಕರಿಗೆ ಧನ್ಯವಾದ ತಿಳಿಸಿದರು. ಈ ಸಂದರ್ಭದಲ್ಲಿ ಹೆಚ್.ಕೆ.ಗೀತಾ, ಕಿರಿಯ ಆರೋಗ್ಯ ನೀಕ್ಷಕರು, ಪರುಸಪ್ಪ, ಹೇಮನಗೌಡ, ಮೈಲಾರಿ, ಸಿಬ್ಬಂದಿ ವರ್ಗ ಹಾಗೂ ಶಾಲೆ ಮುಖ್ಯಗುರುಗಳಾದ ಬಿ ಸಣ್ಣಲಿಂಗನಗೌಡ, ಸಹ ಶಿಕ್ಷಕರಾದ ಎ.ಮಹೇಂದ್ರ, ಸಂತೋಷ , ಸವಿತ, ಕವಿತ ಮತ್ತು ಸುಮ ಉಪಸ್ಥಿತರಿದ್ದರು.

# ಸೇನೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಯುವಕರು ಭಾರತೀಯ ಸೇನೆಗೆ ಸೇರಿ ದೇಶ ಸೇವೆ ಮಾಡಲು ಮುಂದಾಗಬೇಕು ಎಂದು ಕಲಾದಗಿ ಹಣ್ಣು ಬೆಳಗಾರರ ಸಂಘದ ಪ್ರೌಢಶಾಲೆ ಮುಖ್ಯ ಶಿಕ್ಷಕ ಆರ್. ವಿ.ಜಾಧವ ಹೇಳಿದರು.

ತಾಲ್ಲೂಕಿನ ಕಲಾದಗಿಯ ಗ್ರಾಮದ ಸಾಯಿ ಮಂದಿರದಲ್ಲಿ ವಿಕೆ ಸ್ಟಡಿ ಸರ್ಕಲ್ ವತಿಯಿಂದ ಭಾರತೀಯ ಅರೇ ಸೈನಿಕ ಪಡೆಗೆ ಆಯ್ಕೆಯಾದ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದ ರಕ್ಷಣೆಯ ಸೇವೆ ಸಲ್ಲಿಸುವ ಸದಾಣಟಿಜಜಜಿಟಿಜಜವಕಾಶ ತಮಗೆ ದೊರಕಿದ್ದು ನಿಮ್ಮ ಭಾಗ್ಯ ಎಂದರು.

ಪ್ರಾಸ್ತಾವಿಕವಾಗಿ ಮಾರುತಿ ಬಾರಕೇರ ಮಾತನಾಡಿದರು.

ಸೇನಾ ಪಡೆಗೆ ಆಯ್ಕೆಯಾದ ಬಸವರಾಜ ಜಾಡರ, ಸಿದ್ದಪ್ಪ ಜಮಾದಾರ, ಪ್ರವೀಣ ಡವಳೇಶ್ವರ, ಶ್ರೀನಿವಾಸ್ ಮಲ್ಲಾಪುರ, ಸೋಮಶೇಖರ ಹಂಜಿ ಅವರುಗಳನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಯೋಧರು, ಭಾರತೀಯ ಸೇನೆ ಸೇರುವುದು ನಮ್ಮ ಬಾಲ್ಯದ ಕನಸಾಗಿತ್ತು. ಹಲವು ಬಾರಿ ಮಾಡಿದ ಪ್ರಯತ್ನಗಳು ವಿಫಲವಾಗಿದ್ದವು. ಆದರೂ ಛಲ ಬಿಡದೆ ಹಲವು ಬಾರಿ ಪರೀಕ್ಷೆ ಬರೆದ ಫಲವಾಗಿ ಭಾರತೀಯ ಸೇನೆಯಲ್ಲಿ ಸೇವೆ ಮಾಡುವ ಭಾಗ್ಯ ನಮಗೆ ದೊರಕಿದೆ ಎಂದರು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ಆರ್.ಪಿ.ಜೋಶಿ, ಆನಂದ ವಾಘ, ಗ್ರಾಮ ಪಂಚಾಯತಿ ಮಾಜಿ ಸದಸ್ಯ ಅಜಯ ಕುಲಕರ್ಣಿ, ವಿಜಯ ಇಬ್ರಾಹಿಂಪುರ್, ಪ್ರಶಾಂತ ಬೈರಾಗಿ, ಪತ್ರಕರ್ತ ಎಸ್.ಆರ್. ಬಾವಾಕಾನ ಇದ್ದರು.

ಕಾರ್ಯಕ್ರಮವನ್ನು ಶಿಕ್ಷಕ ಅವಿನಾಶ ರಾಜೂರ ನಿರೂಪಿಸಿದರು. ಬ್ರಹ್ಮಾನಂದ ಬಡಿಗೇರ ಸ್ವಾಗತಿಸಿದರು. ಮಲ್ಲಿಕಾರ್ಜುನ ರಂಗನ್ನವರ ವಂದಿಸಿದರು.

## ಸಮಾಜದ ಧ್ವನಿಯಾಗಿದ್ದ ಸಾಹಿತಿ ರುಕ್ಮೊದ್ದಿನ್ ಇಸ್ಲಾಂಪೂರ



**ಬಸವಕಲ್ಯಾಣ:** ಕನ್ನಡ ಸಾಹಿತ್ಯ ಲೋಕದಲ್ಲಿ ಶಾಂತವಾಗಿ ಆದರೆ ಗಾಢವಾಗಿ ತಮ್ಮ ಗುರುತು ಮೂಡಿಸಿಕೊಂಡವರಲ್ಲಿ ಸಾಹಿತಿ ರುಕ್ಮೊದ್ದಿನ್ ಇಸ್ಲಾಂಪೂರ ಅವರ ಹೆಸರು ಗೌರವದಿಂದ ಉಚ್ಚರಿಸಲಾಗುತ್ತದೆ. ಗ್ರಾಮೀಣ ಬದುಕಿನ ನೋವು, ಶ್ರಮಜೀವಿಗಳ ಸಂಕಟ, ಮಾನವೀಯ ಮೌಲ್ಯಗಳು ಮತ್ತು ಸಾಮಾಜಿಕ ನ್ಯಾಯವೇ ಅವರ ಬರಹಗಳ ಹೃದಯವಾಗಿತ್ತು.

ಸರಳ ಕುಟುಂಬದಲ್ಲಿ ಜನಿಸಿದ ರುಕ್ಮೊದ್ದಿನ್ ಅವರು ಬಾಲ್ಯದಿಂದಲೇ ಓದು ಮತ್ತು ಬರವಣಿಗೆಯತ್ತ ಅಪಾರ ಆಸಕ್ತಿ ಹೊಂದಿದ್ದರು. ಸುತ್ತಮುತ್ತಲ ಸಮಾಜದಲ್ಲಿ ನಡೆಯುತ್ತಿದ್ದ ಅಸಮಾನತೆ, ಬಡವರ ಬದುಕಿನ ಕಷ್ಟಗಳು ಅವರ ಮನಸ್ಸನ್ನು ಆಳವಾಗಿ ಕಾಡುತ್ತಿದ್ದವು. ಇದೇ ನೋವು ಮುಂದೆ ಅವರ ಸಾಹಿತ್ಯಕ್ಕೆ ಜೀವ ತುಂಬಿತು.

ಶಿಕ್ಷಣದ ಜೊತೆಗೆ ಪತ್ರಿಕೆಗಳ ಓದು, ಹಿರಿಯ ಸಾಹಿತಿಗಳ ಕೃತಿಗಳ ಅಧ್ಯಯನ ಅವರ ಚಿಂತನೆಗೆ ದಿಕ್ಕು ನೀಡಿತು. ಆರಂಭದಲ್ಲಿ ಕಿರು ಕಥೆಗಳು, ಕವನಗಳ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ ಅವರು ನಂತರ ಸಮಾಜಮುಖಿ ಲೇಖನಗಳ ಮೂಲಕ ಜನಮನ ಗೆದ್ದರು. ರುಕ್ಮೊದ್ದಿನ್ ಇಸ್ಲಾಂಪೂರ ಅವರ ಸಾಹಿತ್ಯದಲ್ಲಿ ಅಲಂಕಾರಕ್ಕಿಂತ ವಾಸ್ತವಿಕತೆಯೇ ಹೆಚ್ಚು. ರೈತ, ಕೂಲಿ ಕಾರ್ಮಿಕ, ಮಹಿಳೆ, ದೌರ್ಬಲ್ಯಕ್ಕೊಳಗಾದ ವರ್ಗಗಳ ಬದುಕು ಅವರ ಬರಹಗಳಲ್ಲಿ ಜೀವಂತವಾಗಿ ಮೂಡಿಬರುತ್ತದೆ. ಓದುಗರಿಗೆ ಕಣ್ಣೀರು ತರಿಸುವಷ್ಟೇ ಅಲ್ಲ, ಚಿಂತನೆಗೆ ದೂಡುವ ಶಕ್ತಿ ಅವರ ಲೇಖನಗಳಿಗೆ ಇದೆ. ಸಾಹಿತ್ಯವನ್ನು ಕೇವಲ ಮನರಂಜನೆಗೆ ಅಲ್ಲ, ಸಮಾಜ ಬದಲಾವಣೆಯ ಸಾಧನವೆಂದು ನಂಬಿದವರು ಅವರು. ಅನ್ಯಾಯದ ವಿರುದ್ಧ ಧ್ವನಿ ಎತ್ತುವುದು ಸಾಹಿತಿಯ ಕರ್ತವ್ಯ ಎಂಬ ನಿಲುವನ್ನು ತಮ್ಮ ಬದುಕಿನಲ್ಲಿ ಅನುಸರಿಸಿದರು. ಸ್ಥಳೀಯ ಪತ್ರಿಕೆಗಳು, ಸಾಹಿತ್ಯ ಪತ್ರಿಕೆಗಳ ಮೂಲಕ ನಿರಂತರವಾಗಿ ಬರೆಯುತ್ತಾ ಹೊಸ ಬರಹಗಾರರಿಗೆ ಮಾರ್ಗದರ್ಶನ ನೀಡಿದರು. ಅನೇಕ ಯುವಕರು ಅವರ ಪ್ರೇರಣೆಯಿಂದ ಹಿಡಿದು ಸಾಹಿತ್ಯ ಕ್ಷೇತ್ರಕ್ಕೆ ಬಂದಿದ್ದಾರೆ. ಇಂದು ಅವರು ನಮ್ಮ ನಡುವೆ ಇಲ್ಲದಿದ್ದರೂ, ಅವರ ಚಿಂತನೆಗಳು, ಬರಹಗಳು ಜೀವಂತವಾಗಿವೆ. ಸಮಾಜದ ಅಂಚಿನಲ್ಲಿರುವವರ ಬದುಕನ್ನು ಬೆಳಕಿಗೆ ತಂದ ಅವರ ಸಾಹಿತ್ಯ ಕನ್ನಡ ಲೋಕಕ್ಕೆ ಅಮೂಲ್ಯ ಕೊಡುಗೆ. ರುಕ್ಮೊದ್ದಿನ್ ಇಸ್ಲಾಂಪೂರ ಅವರು ನಡೆದು ಬಂದ ದಾರಿ ಕಷ್ಟದಾದರೂ ಅರ್ಥಪೂರ್ಣವಾಗಿತ್ತು. ಅದು ಕೇವಲ ಒಬ್ಬ ಸಾಹಿತಿಯ ಜೀವನಕಥೆಯಲ್ಲ ಸಮಾಜದ ನೋವಿಗೆ ಸ್ಪಂದಿಸಿದ ಸಂವೇದನಾಶೀಲ ಮನಸ್ಸಿನ ಪಯಣ.

ಅವರ ಸಾಹಿತ್ಯ ಮುಂದಿನ ಪೀಳಿಗೆಗೂ ಮಾರ್ಗದೀಪವಾಗಲಿ ಎಂಬುದೇ ನಿಜವಾದ ನುಡಿ ನಮನ. ದಿನಾಂಕ 8–2–206 ರಂದು ಭಾನುವಾರ ಹುಮನಾಬಾದ್ ಕಲಬುರಗಿ ರಸ್ತೆಯ ಲಾಲಧರಿ ಹತ್ತಿರ ಬೆಳಗ್ಗೆ 11 ಗಂಟೆಗೆ ಆಯೋಜಿಸಿದೆ. ಸರ್ವರು ಅಗಮಿಸಲು ಅವರ ಪರವಾಗಿ ಮನವಿ ಮಾಡುತ್ತೇವೆ.

## ಅಗಲಿದ ಪತ್ರಕರ್ತರುಗಳಿಗೆ ಕೆಯುಡಬ್ಲ್ಯೂಜೆ ಶ್ರದ್ಧಾಂಜಲಿ




**ಬೆಂಗಳೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಕೆಯುಡಬ್ಲ್ಯೂಜೆ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಂತಾಪ ಸಭೆಯಲ್ಲಿ ಇತ್ತೀಚೆಗೆ ನಮ್ಮನ್ನು ಅಗಲಿದ ಪತ್ರಕರ್ತರಾದ ನಾಗಶೆಟ್ಟಿ ಧರಂಪುರ, ದೊಡ್ಡಬೊಮ್ಮಯ್ಯ, ಭೀಮಸೇನ ಪದಕಿ ಎಂ.ಎನ್.ಪಾಟೀಲ, ಸಕಲೇಶಪುರದ ಶಿವಕುಮಾರ್, ಕಲಬುರ್ಗಿ ಪ್ರಭುಲಿಂಗ ನೀಲೂರೆ, ಬಾವು ಪತ್ತಾರ, ರಾಯಚೂರು ನಹೀಮ್ ಅಶ್ರಫ್, ಮೈಸೂರಿನ ಸೂರಜ್ ಅವರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ರಾಜ್ಯ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ಖಜಾಂಚಿ ಎಂ.ವಾಸುದೇವಹೊಳ್ಳ, ಮಾಜಿ ಅಧ್ಯಕ್ಷ ವೆಂಕಟೇಶ್, ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್, ಅಗಲಿದ ಪತ್ರಕರ್ತರ ಕೆಲ ಕುಟುಂಬದ ಸದಸ್ಯರು ಭಾಗವಹಿಸಿದ್ದರು.

## ವಕೀಲರ ಚುನಾವಣೆ: ಸಾಲೋಮನ್ ಆಲಫ್ರೆಡ್‌ರಿಂದ ನಾಮಪತ್ರ ಸಲ್ಲಿಕೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ (ಏಖಃಅ) ಸದಸ್ಯ ಸ್ಥಾನಕ್ಕೆ ಮಾರ್ಚ್ 11, 2026 ರಂದು ನಡೆಯಲಿರುವ ಚುನಾವಣೆಗೆ ಸಂಬಂಧಿಸಿದಂತೆ, ಹಿರಿಯ ನ್ಯಾಯವಾದಿ ಸಾಲೋಮನ್ ಆಲಫ್ರೆಡ್ ಅವರು ಇಂದು ತಮ್ಮ ನಾಮಪತ್ರವನ್ನು ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಯ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳ ಗಣ್ಯ ವಕೀಲರು ಉಪಸ್ಥಿತರಿದ್ದು ಅವರಿಗೆ ಬೆಂಬಲ ಸೂಚಿಸಿದರು. ಈ ವೇಳೆ ವಕೀಲರಾದ ಶ್ರೀ ಆರ್. ಚೆನ್ನಬಸ್ಸು, ಹನುಮೆಗೌಡ ಮರಕಲ್, ಧಾರವಾಡ ಹೈಕೋರ್ಟ್ ಪೀಠದ ಶ್ರೀ ಆನಂದ್ ಕೊಳ್ಳಿ, ಕೊಪ್ಪಳ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಕಣವಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ಆಮಿಷ ಮುಕ್ತ ಚುನಾವಣೆ ಮತ್ತು ಅಭಿವೃದ್ಧಿಯ ಸಂಕಲ್ಪ:** ನಾಮಪತ್ರ ಸಲ್ಲಿಕೆಯ ನಂತರ ಮಾತನಾಡಿದ ಸಾಲೋಮನ್ ಆಲಫ್ರೆಡ್ ಅವರು, ವಕೀಲರ ವೃತ್ತಿ ಗೌರವವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಈ ಕೆಳಗಿನ ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿದರು

**ಆಮಿಷಮುಕ್ತವ್ಯವಸ್ಥೆ:** ಚುನಾವಣೆಯಲ್ಲಿ ಆಮಿಷಗಳಿಗೆ ಒಳಗಾಗುವುದು ನಮ್ಮ ವೃತ್ತಿಯ ಮೂಲಭೂತ ಸೌಕರ್ಯಗಳನ್ನು ಅಡವಿಟ್ಟಂತೆ. ನೈತಿಕತೆಯಿಂದ ಕೂಡಿದ ಮತದಾನವೇ ವಕೀಲರ ಪರಿಷತ್ತಿನ ಬಲವರ್ಧನೆಗೆ ದಾರಿ.

**ಆರೋಗ್ಯ ಮತ್ತು ಆರ್ಥಿಕ ಭದ್ರತೆ:** ವಕೀಲರಿಗಾಗಿ ಪ್ರತ್ಯೇಕ ಆರೋಗ್ಯ ವಿಮೆ ಮತ್ತು ಆರ್ಥಿಕ ಭದ್ರತೆ–ಯ ಯೋಜನೆಗಳನ್ನು ಜಾರಿಗೆ ತರುವುದು ನನ್ನ ಪ್ರಮುಖ ಉದ್ದೇಶವಾಗಿದೆ.

**ಹೊಸ ಅನ್ವೇಷಣೆಗಳು:** ವಕೀಲರ ಪರಿಷತ್ತಿನಲ್ಲಿ ಆಧುನಿಕ ತಾಂತ್ರಿಕತೆ ಮತ್ತು ಹೊಸ ಚಿಂತನೆಗಳನ್ನು ಅಳವಡಿಸುವ ಮೂಲಕ ಯುವ ವಕೀಲರಿಗೆ ಉತ್ತಮ ಮಾರ್ಗದರ್ಶನ ನೀಡುವ ಗುರಿ ಹೊಂದಲಾಗಿದೆ.

**ವಕೀಲರ ಕಲ್ಯಾಣ ನಿಧಿ:** ವಕೀಲರ ಕಲ್ಯಾಣ ನಿಧಿ ಮತ್ತು ಸೌಲಭ್ಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ, ವೃತ್ತಿಯ ಘನತೆಯನ್ನು ಕಾಪಾಡಲಾಗುವುದು.

"ವೃತ್ತಿಯ ಘನತೆ ಮತ್ತು ಪರಿಷತ್ತಿನ ಏಳಿಗೆಗಾಗಿ ವಕೀಲ ಬಾಂಧವರು ನನಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಆಶೀರ್ವದಿಸಬೇಕು" ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶ್ರೀ ಆರ್ ಚೆನ್ನಬಸ್ಸು, ಹನುಮೆಗೌಡ ಮರಕಲ್, ಧಾರವಾಡ ಹೈಕೋರ್ಟ್ ಪೀಠದ ವಕೀಲರಾದ ಶ್ರೀ ಆನಂದ್ ಕೊಳ್ಳಿ, ಕೊಪ್ಪಳ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಕಣವಿ, ಗೋಕಾಕ ವಕೀಲರ ಸಂಘದ ವಕೀಲರಾದ ಶ್ರೀ ವಿಜಯ ಬಂಡಿ, ಬೀದರ್ ವಕೀಲರ ಸಂಘದ ಹಿರಿಯ ವಕೀಲರಾದ ಶ್ರೀ ಸುದರ್ಶನ, ಶಹಾಪುರ ವಕೀಲರ ಸಂಘದ ಕಾರ್ಯದರ್ಶಿಯಾದ ಶ್ರೀ ಸಂತೋಷ್ ಸತ್ಯಂಪೇಟೆ, ಶ್ರೀ ಮಲ್ಲಿಕಾರ್ಜುನ ಬುಕಲ್, ಅಯ್ಯಪ್ಪ ಸ್ವಾಮಿ, ಸಾಮುವೇಲ್, ಮತ್ತು ಪ್ರಶಾಂತ್ ರೊಟ್ನಡಗಿ ಉಪಸ್ಥಿತರಿದ್ದರು.

ಇದೇ ವೇಳೆ, ಆನ್‌ಲೈನ್ ಮೂಲಕ ರಮೇಶ ದೇಶಪಾಂಡೆ, ಶ್ರೀನಿವಾಸ ಕಲಕರ್ಣಿ ಸೇರಿದಂತೆ ಅನೇಕರು ಸಾಲೋಮನ್ ಆಲಫ್ರೆಡ್ ಅವರಿಗೆ ಜಯಭೇರಿ ಕೋರಿ ಶುಭ ಹಾರೈಸಿದ್ದಾರೆ ಎಂದು ಎ.ಎಸ್ ನಾಯಕ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಂಗ ಪರಿಷೆಯಲ್ಲಿ ಜನ ಮೆಚ್ಚಿದ ರಣದುಂಧುಬಿ ನಾಟಕ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ, ದಾಸರಹಳ್ಳಿ



ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಭಾರತ ಸಚಿವಾಲಯ ನವದೆಹಲಿ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದೊಂದಿಗೆ ರಾಷ್ಟ್ರೀಯ ನಾಟಕ ಶಾಲೆ ನವದೆಹಲಿ, ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ

ಭಾರತ ರಂಗ ಮಹೋತ್ಸವ 2026 ಹಾಗೂ ರಂಗಪರಿಷೆ ಸಮಾರಂಭದಲ್ಲಿ ನಡೆದ ರಣದುಂದುಭಿ ನಾಟಕದಲ್ಲಿ ಹಿರಿಯ ರಂಗಭೂಮಿ ಕಲಾವಿದರು ಹಾಗೂ ಅಹಿಂದ ಹಕ್ಕುಗಳ ಹೋರಾಟ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಜಿ ಆಂಜನಪ್ಪರವರು ಹಾಸ್ಯ ನಟ ರಂಗಣ್ಣ ಪಾತ್ರದಲ್ಲಿ ಅಮೋಘ ಅಭಿನಯ ನೀಡಿದರು

ಕಾರ್ಯಕ್ರಮವು ದಿನಾಂಕ 1.2.2026 ರಿಂದ 8.2.2026 ರವರೆಗೆ ಅದ್ದೂರಿಯಾಗಿ ನಡೆಯುತ್ತಿದೆ.

ರಂಗ ಪರಿಷೆಯಲ್ಲಿ ನಿರ್ಮಿಸಿರುವ ಡಾ. ಸಿದ್ದಲಿಂಗಯ್ಯ ಯುವ ರಂಗ ಸಂಭ್ರಮ ವೇದಿಕೆಯಲ್ಲಿ ಅಹಿಂದ ಹಕ್ಕುಗಳ ಹೋರಾಟ ವೇದಿಕೆಯ ಅಹಿಂದ ಕಲಾವಿದರಿಂದ ರಣದುಂಧುಭಿ ಐತಿಹಾಸಿಕ ನಾಟಕ ಪ್ರದರ್ಶನಕ್ಕೆ ಪ್ರೇಕ್ಷಕರಿಂದ ಭಾರಿ ಮೆಚ್ಚುಗೆ ಪಡೆಯಿತು.

ಪಾತ್ರಧಾರಿಗಳಾಗಿ ಪೌರವನ ಪಾತ್ರದಲ್ಲಿ ಬಿವಿ ವೇಣುಗಪಾಲ್, ಚಾಣಕ್ಯನ ಪಾತ್ರದಲ್ಲಿ ಎಂ ಶಿವಕುಮಾರ್, ಹಾಸ್ಯರಂಗನ ಪಾತ್ರದಲ್ಲಿ ಜಿ ಆಂಜನಪ್ಪ, ನಿಂಗಣ್ಣನ ಪಾತ್ರದಲ್ಲಿ ಎಂ ಲಿಂಗರಾಜು, ಸೆಲ್ಯೂಕಾನ್ ಪಾತ್ರದಲ್ಲಿ ಹೆಚ್ ಪ್ರದೀಪ್, ಅಂಬಿ ಪಾತ್ರದಲ್ಲಿ ವಸಂತ್ ಕುಮಾರ್, ಅಲೆಕ್ಸಾಂಡರ್ ಪಾತ್ರದಲ್ಲಿ ವೀರೇಶ್ ಮತ್ತಿನ ಮಠ ಅಮೋಘ ಅಭಿನಯ ನೀಡಿದರು. ಹಾಸ್ಯ ನಟನ ರಂಗನ ಪಾತ್ರವಹಿಸಿದ್ದ ಜಿ ಅಂಜನಪ್ಪ ಪ್ರೇಕ್ಷಕರ ಗಮನ ಸೆಳೆದರು. ರಂಗ ಪರಿಷೆಯ ಪ್ರಯುಕ್ತ ಕಲಾಗ್ರಾಮದಲ್ಲಿ ಗತವೈಭವ ನೆನಪಿಸುವಂತಿತ್ತು. ಸಾವಿರಾರು ಹಳೆಯ ಹಿರಿಯ ಕಲಾವಿದರ ನಾಟಕಗಳ ಪ್ರದರ್ಶನದ ಮಳಿಗೆಗಳು, ಸಾಹಿತಿಗಳ ಪುಸ್ತಕದ ಮಳಿಗೆಗಳು, ಜಗಮಗಿಸುವ ವಿದ್ಯುತ್ ದೀಪಾಲಂಕಾರ ಕಣ್ಮನ ಸೆಳೆಯುವಂತಿತ್ತು. ರಂಗ ಸಜ್ಜಿಕೆಗಳು, ವರ್ಣಮಯ ವೇದಿಕೆಗಳು ದೇಶಾದ್ಯಂತ ಹಾಗೂ ರಾಜ್ಯಾದ್ಯಂತ ಆಗಮಿಸಿದ ಕಲಾವಿದರುಗಳಿಗೆ ಕುಡಿಯುವ ನೀರು ತಿಂಡಿ ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ.

ಸಮಾರಂಭದಲ್ಲಿ ಹಿರಿಯ ಕಲಾವಿದೆ ಮಾಲಾಶ್ರೀ, ಮುಖ್ಯಮಂತ್ರಿ ಚಂದ್ರು, ಟಿ ಎನ್ ನಾಗಾಭರಣ ಸೇರಿದಂತೆ ಅನೇಕ ಸಾಹಿತಿಗಳನ್ನು ಪತ್ರಕರ್ತರನ್ನು, ಸಂಕಲನಕಾರರನ್ನು ಅಭಿನಂದಿಸುವ ಕೆಲಸ ಮಾಡಿದ್ದಾರೆ. ಸಮಾರಂಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಕೆ.ವಿ ನಾಗರಾಜಮೂರ್ತಿ ಮತ್ತು ರಿಜಿಸ್ಟರ್ ಆದ ಶ್ರೀಮತಿ ಬಿ ನೀಲಮ್ಮ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಯಾವುದೇ ಗೊಂದಲಕ್ಕೆ ಆಸ್ಪದ ಇಲ್ಲದಂತೆ ನಿರ್ವಹಣೆ ಮಾಡಿದ್ದಾರೆ.

## ಅಂತರ್–ಶಾಖಾ ಅಧ್ಯಯನ ಕುರಿತು ಏಕದಿನ ರಾಷ್ಟ್ರೀಯ ಸಮ್ಮೇಳನ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಶ್ರೀ ನಾನಕ್ ಝೀರಾ ಸಾಹೇಬ್ ಫೌಂಡೇಶನ್‌ನ ಗುರು ನಾನಕ್ ಪ್ರಥಮ ದರ್ಜೆ ಕಾಲೇಜು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಏಖಖಿಂ) ಸಹಯೋಗದಲ್ಲಿ ಇಂದು ಜಿ.ಎನ್.ಡಿ.ಇ.ಸಿ ಕ್ಯಾಂಪಸಿನ ಗುರು ನಾನಕ್ ಭವನದ ಸಭಾಂಗಣದಲ್ಲಿ ಮೂಲ ವಿಜ್ಞಾನ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ಅಂತರಶಾಖಾ ಅಧ್ಯಯನ ವಿಷಯದ ಮೇಲೆ ಒಂದು ದಿನದ ರಾಷ್ಟ್ರೀಯ ಸಮ್ಮೇಳನ (IAB-SET–2026) ಆಯೋಜಿಸಲಾಗಿತ್ತು.

ಸಮ್ಮೇಳನವನ್ನು ಬೀದರ್ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಬಿ. ಎಸ್. ಬಿರಾದರ್ ಅವರು ಉದ್ಘಾಟಿಸಿ ಮಾತನಾಡಿದ ಈ ಸಮ್ಮೇಳನವು ವಿಜ್ಞಾನ, ತಂತ್ರಜ್ಞಾನ ಹಾಗೂ ಎಂಜಿನಿಯರಿಂಗ್ ಕ್ಷೇತ್ರಗಳ ನಡುವಿನ ಅಂತರ್–ಶಾಖಾ ಸಹಕಾರವನ್ನು ಬಲಪಡಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದ್ದು ಸಮಸ್ಯೆಗಳ ಸಮಗ್ರ ಪರಿಹಾರಕ್ಕಾಗಿ ಬಹುಶಾಖಾ ಅಧ್ಯಯನದ ಅಗತ್ಯತೆ, ನವೀನ ಸಂಶೋಧನೆ, ಉದ್ಯಮ–ಶಿಕ್ಷಣ ಕ್ಷೇತ್ರಗಳ ನಡುವಿನ ಸಹಕಾರ ಹಾಗೂ ಯುವ ವಿಜ್ಞಾನಿಗಳ ಪಾತ್ರ ಕುರಿತು ಮಹತ್ವದ ವಿಚಾರಗಳನ್ನು ಹಂಚಿಕೊಳ್ಳಲು ಸಹಕಾರಿಯಾಗುತ್ತದೆ, ಸಮ್ಮೇಳನದ ಅಂಗವಾಗಿ ಸಂಶೋಧನಾ ಪ್ರಬಂಧಗಳ ಪ್ರಸ್ತುತಿ, ತಾಂತ್ರಿಕ ಅಧಿವೇಶನಗಳು, ತಜ್ಞರ ಉಪನ್ಯಾಸಗಳು ಹಾಗೂ ಸಂವಾದ ಕಾರ್ಯಕ್ರಮಗಳಿಂದ ಇದು ಯುವ ಸಂಶೋಧಕರಿಗೆ ತಮ್ಮ ಅಧ್ಯಯನ ಫಲಿತಾಂಶಗಳನ್ನು ಹಂಚಿಕೊಳ್ಳಲು, ಹೊಸ ಆವಿಷ್ಕಾರಗಳಿಗೆ ಪ್ರೇರಣೆಯಾಗಲು ಮತ್ತು ವೈಜ್ಞಾನಿಕ ಚಿಂತನೆ ಬೆಳೆಸಲು ವೇದಿಕೆಯಾಗಿದೆ ವೈದ್ಯಕೀಯ ಕ್ಷೇತ್ರದಲ್ಲಿ ಜೀವಶಾಸ್ತ್ರ, ರೋಬೋಟಿಕ್ಸ್ ಹಾಗೂ ಎಂಜಿನಿಯರಿಂಗ್ ಒಂದಾಗಿ ಹೊಸ ಚಿಕಿತ್ಸಾ ವಿಧಾನಗಳನ್ನು ಅಭಿವೃದ್ಧಿಪಡಿಸುತ್ತಿವೆ. ಸ್ಥಿರತೆಯ ಅಭಿವೃದ್ಧಿಗೆ ರಸಾಯನಶಾಸ್ತ್ರ, ಪರಿಸರಶಾಸ್ತ್ರ ಹಾಗೂ ಅರ್ಥಶಾಸ್ತ್ರಗಳ ಸಂಯೋಜನೆ ಅಗತ್ಯವಾಗಿದೆ. ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಕಂಪ್ಯೂಟರ್ ವಿಜ್ಞಾನ, ತತ್ವಶಾಸ್ತ್ರ ಮತ್ತು ಕಾನೂನು ತಜ್ಞರು ಒಟ್ಟಾಗಿ ಕೆಲಸ ಮಾಡಿ ನೈತಿಕ ಮತ್ತು ಜವಾಬ್ದಾರಿಯುತ ತಂತ್ರಜ್ಞಾನ ಅಭಿವೃದ್ಧಿಗೆ ಸಹಕರಿಸುತ್ತಿದ್ದಾರೆ. ಅಂತರಶಾಖಾ ಸಂಶೋಧನೆಯಿಂದ ವೇಗವಾದ ಆವಿಷ್ಕಾರ, ಸಮಗ್ರ ಸಮಸ್ಯಾ ಪರಿಹಾರ, ಹಾಗೂ ಪ್ರಾಯೋಗಿಕ ಪರಿಹಾರಗಳ ಅಭಿವೃದ್ಧಿ ಸಾಧ್ಯವಾಗುತ್ತದೆ. ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ಮೂಲಭೂತ ಸಂಶೋಧನಾ ಮೌಲ್ಯಗಳನ್ನು ಕಾಪಾಡಿಕೊಳ್ಳುವುದು ಅತ್ಯಾವಶ್ಯಕವೆಂದು ಅವರು ತಿಳಿಸಿದ್ದರು.

ಗುರು ನಾನಕ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಉಪಾಧ್ಯಕ್ಷೆ ಡಾ. ರೇಷ್ಮಾ ಕೌರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಇಂದಿನ ಯುಗದಲ್ಲಿ ಅಂತರಶಾಖಾ ಅಧ್ಯಯನವು ವಿದ್ಯಾರ್ಥಿಗಳ ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಹಾಗೂ ಉದ್ಯೋಗಾರ್ಹತೆಯನ್ನು ಹೆಚ್ಚಿಸುತ್ತದೆ ಎಂದು ಹೇಳಿದರು. ನೈಜ ಜೀವನದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಬಹುಶಾಖಾ ಜ್ಞಾನ ಅವಶ್ಯಕ ಎಂದು ಅಭಿಪ್ರಾಯಪಟ್ಟರು. ಕಾಲೇಜಿನ ಶೈಕ್ಷಣಿಕ ಶ್ರೇಷ್ಠತೆ ಹಾಗೂ ಸಾಮಾಜಿಕ ಬದ್ಧತೆಯನ್ನು ಶ್ಲಾಘಿಸಿದ ಅವರು, ಇಂತಹ ಸಮ್ಮೇಳನಗಳು ಶಿಕ್ಷಕರ ಸಹಕಾರ, ಸಂಶೋಧನೆ ಮತ್ತು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೋಳಾರ ಕೈಗಾರಿಕಾ ಪ್ರದೇಶದ ಶ್ರೀವೀನ್ ಫಾರ್ಮಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ಜೆ.ಕೆ. ದೇವೇಂದ್ರಪ್ಪ, ಹೈದ್ರಾಬಾದಿನ ಆರ್‌ಎಸ್‌ಸಿ ಫೆಲೋ ಹಾಗೂ ಕೆಎಸ್‌ಟಿಎ ಸದಸ್ಯ ಡಾ. ಎ. ವೆಂಕಟರಮನ್, ಡಾ. ಪ್ರಶಾಂತ ಹನಮಶೆಟ್ಟಿ, ಐಕ್ಯೂಎಸಿ ಸಂಯೋಜಕ ಡಾ. ಸಂಜಯ್ ಮೈನಳ್ಳಿ ಹಾಗೂ ಆಯೋಜನಾ ಕಾರ್ಯದರ್ಶಿ ಡಾ. ನಾಗೇಶ್ ಜಿ. ಯರ್ನಾಳೆ ಉಪಸ್ಥಿತರಿದ್ದರು.

## ರೌಝಾ ಸ್ಟಾರ್ಸ್‌ಗೆ ರೋಚಕ ಜಯ, ಚಾಂಪಿಯನ್ ಪಟ್ಟ ಕಬಳಿಕೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ







ಕೆಬಿಎನ್‌ಪಿಎಲ್ 2026 ಟೂರ್ನಿಯ ಫೈನಲ್ ಪಂದ್ಯದಲ್ಲಿ ರೌಝಾ ಸ್ಟಾರ್ಸ್ ತಂಡ ಗಂಗಾವತಿ ಲಯನ್ಸ್ ವಿರುದ್ಧ 4 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡಿತು. ಗುರುವಾರ ನಡೆದ ಈ ಹೈ ಸ್ಕೋರಿಂಗ್ ಫೈನಲ್ ಪಂದ್ಯ ಕ್ರಿಕೆಟ್ ಅಭಿಮಾನಿಗಳಿಗೆ ನಿಜಕ್ಕೂ ರೋಚಕ ಅನುಭವ ನೀಡಿತು.

ಟಾಸ್ ಗೆದ್ದ ಗಂಗಾವತಿ ಲಯನ್ಸ್ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 224 ರನ್‌ಗಳ ದೊಡ್ಡ ಮೊತ್ತ ದಾಖಲಿಸಿತು.

225 ರನ್ ಗುರಿ ಬೆನ್ನಟ್ಟಿದ ರೌಝಾ ಸ್ಟಾರ್ಸ್ ತಂಡದ ಆರಂಭ ಉತ್ತಮವಾಗಿತ್ತು. ಮೊಹಮ್ಮದ್ ಮುನೀರ್ ಮತ್ತು ಆದರ್ಶ್ ಎಂ ಇನಿಂಗ್ಸ್ ಆರಂಭಿಸಿದರೂ, ಶೀಟಲ್ ಕುಮಾರ್ ದಾಳಿಗೆ ಬಲಿಯಾಗಿ ಆದರ್ಶ್ ಎಂ ಮತ್ತು ತಿಪ್ಪಾ ರೆಡ್ಡಿ ಪೆವಿಲಿಯನ್ ಸೇರಿದರು. 9ನೇ ಓವರ್‌ನಲ್ಲಿ ಮುನೀರ್ ರನ್ ಔಟಾದರು. ಆದರ್ಶ್ ಎಂ 37 ರನ್, ತಿಪ್ಪಾ ರೆಡ್ಡಿ 16 ರನ್ ಗಳಿಸಿದರು. ಮಧ್ಯ ಓವರ್‌ಗಳಲ್ಲಿ ಸ್ಟಾರ್ಸ್ ತಂಡ ಕುಸಿತ ಕಂಡಿತು.

ಆದರೆ ಯೂನಸ್ ಬೈಗ್ ಮತ್ತು ರಘುವೀರ್ ಪವಾಳೂರು 43 ರನ್‌ಗಳ ಉಪಯುಕ್ತ ಜೊತೆಯಾಟ ನೀಡಿ ಇನಿಂಗ್ಸ್‌ಗೆ ಜೀವ ತುಂಬಿದರು. ನಂತರ ಫೈಜಾನ್ ರೈಜ್ ಅಬ್ಬರದ ಆದರೆ ಲೆಕ್ಕಾಚಾರದ ಆಟದಿಂದ ಪಂದ್ಯವನ್ನು ತಿರುಗಿಸಿದರು. ಅವರ ಆಕರ್ಷಕ ಶಾಟ್‌ಗಳು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. ಫೈಜಾನ್ ರೈಜ್ ಮತ್ತು ಸಂತೋಷ್ ಸಿಂಗ್ ಮಹತ್ವದ ಕ್ಷಣದಲ್ಲಿ 55 ರನ್‌ಗಳ ಜೊತೆಯಾಟ ನೀಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಲಯನ್ಸ್ ತಂಡದ ಆರಂಭಿಕ ಆಟಗಾರರಾದ ಭುವನ್ ರಾಜು ಮತ್ತು ವಿನಯ್ ಮಾಸ್ಕಿ ಇನಿಂಗ್ಸ್ ಆರಂಭಿಸಿದರು. ಭುವನ್ ರಾಜು 4 ಸಿಕ್ಸರ್‌ಗಳೊಂದಿಗೆ 28 ರನ್ ಗಳಿಸಿದರೆ, ವಿನಯ್ ಮಾಸ್ಕಿ ಕೇವಲ 7 ರನ್‌ಗಳಿಗೆ ಔಟಾದರು. ರೋಹನ್ ನವೀನ್ ಶೂನ್ಯಕ್ಕೆ ಔಟಾದರು.

ಆದರೆ ಮಿರ್ಜಾ ವಸೀಂ ಬೈಗ್ ಶಿಲೆಯಂತೆ ನಿಂತು 24 ಚೆಂಡುಗಳಲ್ಲಿ 7 ಬೌಂಡರಿ ಹಾಗೂ 1 ಸಿಕ್ಸರ್ ಸಹಿತ 45 ರನ್ ಗಳಿಸಿ ಅರ್ಧಶತಕದಿಂದ ಕೇವಲ 5 ರನ್ ದೂರ ಉಳಿದರು. ಭೀಮರಾವ್ ನವಲೆ ಆಕ್ರಮಕ ಬ್ಯಾಟಿಂಗ್ ನಡೆಸಿ 7 ಸಿಕ್ಸರ್ ಮತ್ತು 2 ಫೋರ್‌ಗಳೊಂದಿಗೆ 62 ರನ್ ಗಳಿಸಿದರು. ಶಿವರಾಜ್ ಎಸ್ 32 ರನ್‌ಗಳ ಸಹಕಾರ ನೀಡಿದರು. ಈ ಜೋಡಿ 92 ರನ್‌ಗಳ ಮಹತ್ವದ ಜೊತೆಯಾಟ ನೀಡಿತು. ಮೊಹಮ್ಮದ್ ನುಮಾನ 30 ರನ್ ಸೇರಿಸಿದರೆ, ಆದಿತ್ಯ ಮಣಿ ಕೇವಲ 2 ಚೆಂಡುಗಳಲ್ಲಿ ಫೋರ್ ಹಾಗೂ ಸಿಕ್ಸರ್ ಮೂಲಕ 10 ರನ್ ಗಳಿಸಿದರು. ರೌಝಾ ಸ್ಟಾರ್ಸ್ ಪರ ಸಂತೋಷ್ ಸಿಂಗ್ 3 ವಿಕೆಟ್ ಪಡೆದುಕೊಂಡರೆ, ಕಾಶಿಫ್ 2 ವಿಕೆಟ್ ಕಬಳಿಸಿದರು.

ಪಂದ್ಯದ ಟಾಸ್ ಸಂದರ್ಭದಲ್ಲಿ ಹಾಫಿಜ್ ಡಾ. ಸೈಯದ್ ಮೊಹಮ್ಮದ್ ಅಲಿ ಅಲ್ ಹುಸ್ಸೈನಿ ಸಾಹೇಬ್, ದರ್ಗಾ ಹಜ್ರತ್ ಖ್ವಾಜಾ ಬಂದನವಾಜ್ (ರಹ) ರ ಸಜ್ಜಾದ ನಶೀನ್, ಖ್ವಾಜಾ ಬಂದನವಾಜ್ ವಿಶ್ವವಿದ್ಯಾಲಯದ ಕುಲಪತಿ, ಖ್ವಾಜಾ ಎಜುಕೇಷನ್ ಸೊಸೈಟಿಯ ಅಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರು, ತೆಲಂಗಾಣ ಸರ್ಕಾರದ ಸಾರ್ವಜನಿಕ ಉದ್ದಿಮೆ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಹಾಗೂ ಭಾರತದ ಮಾಜಿ ಕ್ರಿಕೆಟ್ ನಾಯಕ ಮೊಹಮ್ಮದ್ ಅಜರುದ್ದೀನ್ ಉಪಸ್ಥಿತರಿದ್ದರು. ಜೊತೆಗೆ ಜೇವರ್ಗಿ ಶಾಸಕ ಅಜಯ ಧರಣ್ ಸಿಂಗ್, ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಂ ಪ್ರಭು ಪಾಟೀಲ ಹಾಗೂ ಮಾಜಿ ಎಂಎಲ್‌ಸಿ ಅಮರನಾಥ್ ಪಾಟೀಲ ಹಾಜರಿದ್ದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಮೊಹಮ್ಮದ್ ಅಜರುದ್ದೀನ್ ಅವರು ಆಯೋಜಕರಿಗೆ ಧನ್ಯವಾದ ಅರ್ಪಿಸಿ, ಮೈದಾನ ಹಾಗೂ ಸೌಲಭ್ಯಗಳನ್ನು ಶ್ಲಾಘಿಸಿದರು. ಇದು ಅಂತಾರಾಷ್ಟ್ರೀಯ ಮಟ್ಟದ ಮೈದಾನ ಎಂದು ಪ್ರಶಂಸಿಸಿದ ಅವರು, ವಿಜೇತ ಹಾಗೂ ರನ್ನರ್‌ಅಪ್ ತಂಡಗಳಿಗೆ ಅಭಿನಂದನೆ ಸಲ್ಲಿಸಿದರು. ಫೈನಲ್ ಪಂದ್ಯ ಅತ್ಯಂತ ರೋಚಕವಾಗಿತ್ತು ಎಂದು ಹೇಳಿದ ಅವರು, ಉತ್ತಮ ಕ್ರಿಕೆಟ್‌ಗಾಗಿ ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಮೂರೂ ಮಹತ್ವದ ಅಂಶಗಳೆಂದು ಹೇಳಿದರು. ಹೆಚ್ಚಿನ ಸಂಖ್ಯೆಯಲ್ಲಿ ಪಂದ್ಯ ವೀಕ್ಷಿಸಲು ಬಂದ ಕಲಬುರಗಿ ಜನತೆಗೆ ಕೃತಜ್ಞತೆ ವ್ಯಕ್ತಪಡಿಸಿದರು.

ವಿಜೇತ ರೌಝಾ ಸ್ಟಾರ್ಸ್ ತಂಡಕ್ಕೆ ₹10 ಲಕ್ಷ ನಗದು ಬಹುಮಾನ ಹಾಗೂ ಟ್ರೋಫಿ ಪ್ರದಾನ ಮಾಡಲಾಯಿತು. ರನ್ನರ್‌ಅಪ್ ಗಂಗಾವತಿ ಲಯನ್ಸ್ ತಂಡಕ್ಕೆ ₹5 ಲಕ್ಷ ನಗದು ಬಹುಮಾನ ನೀಡಲಾಯಿತು. ಫೈನಲ್ ಪಂದ್ಯ ಹಾಗೂ ಸಂಪೂರ್ಣ ಟೂರ್ನಿಯ ಬಹುಮಾನಗಳನ್ನು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿತರಿಸಲಾಯಿತು. ತಂಡದ ಮಾಲೀಕರು, ಅಧಿಕಾರಿಗಳು, ವಿವಿಧ ಸಮಿತಿಗಳ ಪ್ರತಿನಿಧಿಗಳು, ಮೈದಾನ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಫ್ಲಡ್ ಲೈಟ್ ನಿರ್ವಹಣಾ ಸಿಬ್ಬಂದಿ, ಐಟಿ ಮತ್ತು ಮಾಧ್ಯಮ ಪ್ರತಿನಿಧಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಈ ಸಮಾರಂಭದಲ್ಲಿ ರೌಝಾ ಸ್ಟಾರ್ಸ್ ತಂಡದ ಮಾಲೀಕ ಹಾಗೂ ಕ್ಯಾಂಪಸ್ ನಿರ್ದೇಶಕ ಜನಾಬ್ ಡಾ. ಸೈಯದ್ ಮುಸ್ತಫಾ ಅಲ್ ಹುಸ್ಸೈನಿ ಸಾಹೇಬ್, ಕೆಬಿಎನ್‌ಯು ಉಪಕುಲಪತಿ ಅಲಿ ರಝಾ ಮೂಸ್ವಿ, ಪ್ರೊ–ವೈಸ್ ಚಾನ್ಸಲರ್ ಡಾ. ಅಸ್ಫಾಕ್ ಅಹ್ಮದ್, ರಿಜಿಸ್ಟ್ರಾರ್ ಮಿರ್ ವಿಲಾಯತ್, ಖ್ವಾಜಾ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿ ಜನರಲ್ ಪ್ರೊ. ಎಎಂ ಪಠಾಣ್, ಕೆಇಎಸ್ ಕಾರ್ಯದರ್ಶಿ ಮಿಸ್ಟರ್ ಬೆನ್ನಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)